ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ ೩೧-೧೨-೮೯ರ ಸ್ಥಿತಿಯಂತೆ ಅಂತಿಮವಾಗಿ ಇತ್ಯರ್ಥವಾಗದೇ ಬಾಕಿ ಇರುವ ಪಂಚಾಯಿತ್ತಿ ಪ್ರಕರಣಗಳ ಸಂಖ್ಯೆ : ೯೫.

ಆ) ವಿಶ್ವ ಬ್ಯಾಂಕ್ ನೆರವಿನ ಸಣ್ಣ ನೀರಾವರಿ ಕೆರೆ ಯೋಜನೆಗಳ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ಎಲ್.ಸಿ.ಬಿ. ಮತ್ತು ಐ.ಸಿ.ಬಿ. ಗುತ್ತಿಗೆಗಳಲ್ಲಿನ ಬಹುಪಾಲು ಗುತ್ತಿಗೆದಾರರ ಕ್ಲೇಮುಗಳು ಹಾಗೂ ವ್ಯಾಜ್ಯಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿದ್ದುದರಿಂದ ಪಂಚಾಯಿತ್ತಿ ಪ್ರಕರಣಗಳಲ್ಲಿ ಇಲಾಖೆಯ ಪರವಾಗಿ ಪರಿಣಾಮಕಾರಿಯಾಗಿ ವಾದವನ್ನು ಮಂಡಿಸಲು ಒಬ್ಬರೇ ಅಡ್ವೊಕೇಟರನ್ನು ನೇಮಿಸಲು ನಿರ್ಧರಿಸಲಾಯಿತು. ಇದರಂತೆಯೇ ಒಬ್ಬ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಸರ್ಕಾರವು ಈ ದಿಕ್ಕಿನಲ್ಲಿ ನೇಮಿಸಿತು.

ಇ) ಒಬ್ಬರೇ ಅಡ್ವೊಕೇಟರಿರುವುದರಿಂದ ವಿಳಂಬವಾದ ಬಗ್ಗೆ ಯಾವ ಪ್ರಕರಣಗಳೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಪಂಚಾಯಿತ್ತಿ ಕಾಯ್ದೆಯ (Arbitration Act) ಪ್ರಕಾರ ಪಂಚಾಯಿತ್ತಿ ನಡವಳಿಗಳನ್ನು ನಡೆಸುವ ಪಂಚಾಯಿತ್ತಿದಾರರು ತಮ್ಮ ತೀರ್ಪನ್ನು ಕೊಟ್ಟ ನಂತರವೇ ಆದರ ಇತ್ಯರ್ಥದ ಬಗ್ಗೆ ಸರ್ಕಾರವು ಮುಂದಿನ ಸೂಕ್ತ ಕ್ರಮವನ್ನು ಜರುಗಿಸಬಹುದು.

ಅಧ್ಯಕ್ಷರು.— ಮಂಡಿಸಲಾಯಿತು.

ಅಧ್ಯಕ್ಷರು,—ಇವೊತ್ತು ಈ ಸದನದ ಮಾನ್ಯ ಸದಸ್ಯರುಗಳಾದ ಶ್ರೀ ವೈ. ಎಂ. ವೀರಣ್ಣನವರ ಮತ್ತು ಶ್ರೀ ಅಲ್ಲಂ ವೀರಭದ್ರಪ್ಪನವರುಗಳ ಜನ್ಮದಿನಾಂಕವಾಗಿದೆ. ಸನ್ಮಾನ್ಯರುಗಳು ಸಮಾಜ ಸೇವೆ ಮಾಡುವಲ್ಲಿ ಮತ್ತು ದೇಶ ಸೇವೆ ಮಾಡುವಲ್ಲಿ ದೇವರು ಅವರಿಗೆ ಶಕ್ತಿ ಸಾಮರ್ಥ್ಯಗಳನ್ನು ಕೊಡಲಿ ಎಂದು ಸದನವು ಶುಭ ಕೋರುತ್ತದೆ.

ಗಮನ ಸೆಳೆಯುವ ಸೂಚನೆ

೧ ರಾಜ್ಯದ ಸಣ್ಣ ಹಾಗೂ ಅತಿಸಣ್ಣ ರೈತರು ಪಡೆದ ಬೆಳೆ ಸಾಲದ ಬಡ್ಡಿ ಸಹಾಯಧನ ನೀಡುವುದಕ್ಕೆ ಸಂಬಂಧಿಸಿದಂತೆ ಯೋಜನಾನ್ವಯ ಅಪೆಕ್ಸ್ ಬ್ಯಾಂಕಿನವರು ಸಾಲ ನೀಡುವುದನ್ನು ತಡೆಹಿಡಿದಿರುವುದು

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಸಣ್ಣ ಹಾಗೂ ಅತಿ ಸಣ್ಣ ರೈತರು ಪಡೆದ ಬೆಳೆ ಸಾಲದ ಸಂಬಂಧದಲ್ಲಿ ಬಡ್ಡಿ ಸಹಾಯಧನ ನೀಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಹೊಸ ಯೋಜನೆಯಿಂದಾಗಿ ಅಪೆಕ್ಸ್ ಬ್ಯಾಂಕ್‌ನವರು ರೈತರಿಗೆ ಮರು ಸಾಲ ನೀಡುವುದನ್ನು ತಡೆಹಿಡಿದಿರುವ ಬಗ್ಗೆ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ,

ಶ್ರೀಮತಿ ಮನೋರಮಾ ಮಧ್ವರಾಜ್ (ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಇಲಾಖೆಯ ಮಂತ್ರಿಗಳು).—

೧. ರಾಜ್ಯದ ಹಣಕಾಸು ಸಚಿವರು ೧೯೯೦-೯೧ರ ಬಜೆಟ್ ಮಂಡನೆಯ ವೇಳೆಯಲ್ಲಿ ತಮ್ಮ ಭಾಷಣದಲ್ಲಿ ' ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ತರಲು ಉದ್ದೇಶಿಸಲಾಗಿದೆ. ಇದನ್ನು ೧೯೮೯ರ ಅಕ್ಟೋಬರ್ ೨ ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ರೂಪರೇಷೆಗಳನ್ನು ಮುಂದೆ ತಿಳಿಸಲಾಗುವುದು ' ಎಂದು ತಿಳಿಸಿದರು.

೨. ಮೇಲ್ಕಂಡ ಹೇಳಿಕೆಯ ಹಿನ್ನೆಲೆಯಲ್ಲಿ ನಬಾರ್ಡ್ ಸಂಸ್ಥೆಯು ಕರ್ನಾಟಕ ರಾಜ್ಯದ ಅಪೆಕ್ಸ್ ಬ್ಯಾಂಕ್‌ಗೆ ನೀಡುತ್ತಿದ್ದ ಪುನರ್ಧನ ನೀಡಿಕೆಯನ್ನು ೨೦-೩-೧೯೯೦ ರಿಂದ ನಿಲ್ಲಿಸಿರುತ್ತದೆ. ರಾಜ್ಯದ ಬಜೆಟ್ ಭಾಷಣದಲ್ಲಿ ಪ್ರಸ್ತಾಪವಾಗಿರುವ ಬಡ್ಡಿ ಸಹಾಯಧನದ ವಿಚಾರದಿಂದ ರಾಷ್ಟ್ರೀಯ ಬ್ಯಾಂಕಿನ ನೀತಿಯ ಸೂಚನೆಗಳು, ನಿರ್ದೇಶನಗಳು ಮತ್ತು ಆದೇಶಗಳನ್ನು ಉಲ್ಲಂಘಿಸಿದಂತಾಗುತ್ತದೆ, ಎಂಬ ಅಂಶವನ್ನು ನಬಾರ್ಡ್ ಸಂಸ್ಥೆಯು ವ್ಯಕ್ತಪಡಿಸಿರುತ್ತದೆ.

೩. ೧೯೮೩ ರಿಂದ ಇದ್ದ ಬಡ್ಡಿ ಸಹಾಯಧನ ಯೋಜನೆಯೂ ಸಹ ನಬಾರ್ಡ್ ಸಂಸ್ಥೆಯ ನಿರ್ದೇಶನ ಹಾಗೂ ನೀತಿಗೆ ವ್ಯತಿರಿಕ್ತವಾಗಿದ್ದರಿಂದ, ನಬಾರ್ಡ್ ಸಂಸ್ಥೆಯು ಪುನರ್ಧನ ನೀಡಿಕೆಯನ್ನು ಈ ಹಿಂದೆಯೂ ಎರಡು ಭಾರಿ ನಿಲ್ಲಿಸಿದ್ದನ್ನು ಸ್ಮರಿಸಬಹುದು.

೪. ನಬಾರ್ಡ್ ಸಂಸ್ಥೆಯು ಪುನರ್ಧನ ನಿಲ್ಲಿಸಿರುವುದರಿಂದ ರಾಜ್ಯದ ಕೃಷಿಕರ ಕೃಷಿಕಾರ್ಯಗಳಿಗೆ ಅಡ್ಡಿಯುಂಟಾಗಿದೆ, ಸಹಕಾರ ಸಂಘಗಳು ಏಪ್ರಿಲ್–ಜೂನ್ ಮಾಹೆಗಳಲ್ಲಿ ಸಾಕಷ್ಟು ಸಾಲ ಸೌಲಭ್ಯಗಳನ್ನು ಕೃಷಿ ಕಾರ್ಯಗಳಿಗೆ ಅನುಕೂಲ ಕಲ್ಪಿಸಲು ನೀಡಬೇಕಾಗಿರುತ್ತದೆ. ೧೯೯೦–೯೧ ನೇ ಸಾಲಿಗೆ ಬೆಳೆ ಸಾಲವಾಗಿ ಸುಮಾರು ೨೪೦ ಕೋಟಿ ರೂಗಳಷ್ಟು ಸಾಲ ವಿತರಣೆ ಮಾಡುವ ಗುರಿಯನ್ನು ಹೊಂದಿದೆ.

೫. ರಾಜ್ಯದ ಕೃಷಿ ಕಾರ್ಯಕ್ರಮಗಳಿಗೆ ಧಕ್ಕೆ ಉಂಟಾಗಿರುವಂತೆ ಈ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅವರನ್ನು ನಬಾರ್ಡ್ ಸಂಸ್ಥೆಗೆ ಪುನರ್ಧನ ಸೌಲಭ್ಯವನ್ನು ಯಾವುದೇ ಷರತ್ತಿಲ್ಲದೆ ನೀಡುವಂತೆ ಒತ್ತಾಯಿಸಲು ಕ್ರಮಕೈಗೊಳ್ಳುವಂತೆ ಕೋರಲಾಗುತ್ತದೆ. ಈಗಾಗಲೇ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಯೋಜನಾ ಆಯೋಗದ ಉಪಾಧ್ಯಕ್ಷರು ತಿಳಿಸಿರುವಂತೆ ಕೇಂದ್ರ ಸರ್ಕಾರವು ಇಷ್ಟರಲ್ಲೇ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಸಹಕಾರಿ ಸಾಲ ಮನ್ನಾ ಹೊರೆಯನ್ನು ಹಂಚಿಕೊಳ್ಳುವ ಬಗೆಗೆ ರೂಪರೇಷೆಗಳನ್ನು ಚರ್ಚಿಸಲಿದೆ ಎಂದಿದ್ದಾರೆ. ಈ ಸಭೆಯಲ್ಲಿ ನಬಾರ್ಡ್ ಸಂಸ್ಥೆಯು ನಿಲ್ಲಿಸಿರುವ ಪುನರ್ಧನ ನೀಡಿಕೆಯ ವಿಷಯವನ್ನು ಸಹ ಪ್ರಸ್ತಾಪಿಸಲು ಕ್ರಮ ಕೈಕೊಳ್ಳಲಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾರ್ಚಿ ತಿಂಗಳು ಪೂರೈಸಿದೆ. ಮುಂದಿನ ಮೇ–ಜೂನ್ ತಿಂಗಳಲ್ಲಿ ನಮ್ಮ ಕೃಷಿ ಬಿತ್ತನೆ ಪ್ರಾರಂಭವಾಗುತ್ತದೆ. ರೈತರಿಗೆ ಹೊಸ ಸಾಲ ಕೊಟ್ಟರೆ ಅವರು ಗೊಬ್ಬರ ವಗೈರೆ ಖರೀದಿಸುವುದಕ್ಕೆ ಅನುಕೂಲವಾಗುತ್ತದೆ. ಈ ವರ್ಷ ಸಾಲ ಮನ್ನಾ ಮಾಡುವ ಹೆಸರಿನಲ್ಲಿ ವಸೂಲಿ ಏನೂ ಆಗಿಲ್ಲ. ೨೦ ಪರ್ಸೆಂಟ್ ಕೆಲವು ಕಡೆ, ೩೦ ಪರ್ಸೆಂಟ್ ಕೆಲವು ಕಡೆ ಆಗಿದೆ, ಜಾಸ್ತಿ ಆಗಿಲ್ಲ, ಈ ಕಾರಣದಿಂದ ಯಾವುದೇ ಸಹಕಾರ ಸಂಘ ಮತ್ತು ಗ್ರಾಮೀಣ ಬ್ಯಾಂಕ್‌ಗಳು ಮುಂದಿನ ವರ್ಷ ಏಪ್ರಿಲ್ ಮತ್ತು ಜೂನ್ ತಿಂಗಳಲ್ಲಿ ಸಾಲ ಕೊಡುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಒಂದು ವೇಳೆ ನಬಾರ್ಡ್ ಸಾಲ ಕೊಡಲು ಅವಕಾಶ ಕೊಡದೇ ಹೋದರೆ ರಾಜ್ಯ ಸರ್ಕಾರ ಇದಕ್ಕೆ ಯಾವ ರೀತಿಯ ಯೋಜನೆ ರೂಪಿಸುತ್ತದೆ ಎಂದು ಹೇಳಬೇಕು ಮತ್ತು ಸರ್ಕಾರ ಈ ಬಗ್ಗೆ ಭರವಸೆ ನೀಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ಅಪೆಕ್ಸ್ ಬ್ಯಾಂಕ್‌ಗೆ ಇದು ಯಾವರೀತಿಯಾಗಿ ಸಮಸ್ಯೆಯಾಗಿದೆಯೋ ಅದೇ ರೀತಿ ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೂ ಕೂಡ ನಬಾರ್ಡ್‌ನವರು ಸಾಲ ಕೊಡಲು ರೆಫ್ಯೂಸ್ ಮಾಡಿದ್ದಾರೆ. ಏಕೆಂದರೆ ಇಂಟರೆಸ್ಟ್ ಸಬ್ಸಿಡಿಯನ್ನು ಸರ್ಕಾರ ಕೊಡಲಿಲ್ಲವೆಂದು ನಬಾರ್ಡ್‌ನವರು ರೀಫೈನಾನ್ಸ್‌ಗೆ ಒಪ್ಪುತ್ತಿಲ್ಲ. ಈಗಿರುವ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್‌ಗಳಿಗೆ ಹಣ ಕೊಡುವುದಕ್ಕೆ ಆಗುವುದಿಲ್ಲವೆಂದು ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಕೂಡ ಹೇಳುತ್ತಿದ್ದಾರೆ. ಇದಕ್ಕೆ ಯಾವರೀತಿ ಪರಿಹಾರ ಒದಗಿಸುತ್ತೀರೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಧರ್ಮಸಿಂಗ್.—ಈಗಾಗಲೇ ಸಾಲ ಮನ್ನಾ ಮಾಡುವ ಗೊಂದಲದಲ್ಲಿ ರೈತರಿಂದ ಒಂದು ಬಗೆಯ ವಾತಾವರಣ ಉಂಟಾಗಿದ್ದು ಮುಖ್ಯಮಂತ್ರಿಗಳೂ ಕೂಡ ನಬಾರ್ಡ್ ಸಾಲದ ಬಗ್ಗೆ ಕೇಂದ್ರ ಸಚಿವ ಮಧುದಂಡವತೆಯವರು ಯಾವರೀತಿ ಬಜೆಟ್‌ನಲ್ಲಿ ಬರೆಯುತ್ತಾರೋ ನೋಡೋಣ ಎಂದು ಹೇಳಿದ್ದರು. ಈಗ ಸಾಲ ಮನ್ನಾ ವಿಚಾರದಲ್ಲಿ ಅವರು ಯಾವ ರೀತಿ ಪ್ರಸ್ತಾಪಿಸಿದ್ದಾರೆ ಎನ್ನುವುದು ನಮ್ಮ ಮುಂದಿದೆ. ಜೊತೆಗೆ ಕರ್ನಾಟಕದ ರೈತರೂ ಕೂಡ ನಿರೀಕ್ಷಣೆ ಮಾಡುತ್ತಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಾಗಲಿ ಅಪೆಕ್ಸ್ ಬ್ಯಾಂಕಾಗಲಿ ಮುಂದಿನ ವರ್ಷದಿಂದ ಸಾಲ ಕೊಡುವುದಿಲ್ಲವೆಂಬುದು ರೈತರ ಮನಸಿನಲ್ಲಿ ಬಂದಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲಿ, ಸಹಕಾರ ಸಚಿವರಾಗಲಿ ಸರ್ಕಾರದ ನೀತಿಯೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಂ. ವಿ. ವೆಂಕಟಪ್ಪ.—ಈ ಸಬ್ಸಿಡಿ ಹಣ ಏನಿದೆ ಅದು ಹಿಂದಿನ ವರ್ಷ ಇದ್ದಾಗ ಎಷ್ಟು ಇತ್ತು, ಅದನ್ನು ಅವರು ಕೊಡದೇ ಇರುವುದಕ್ಕೆ ಕಾರಣವೇನು ಎಂದು ತಿಳಿಸಬೇಕು.

† **ಶ್ರೀ ವೀರೇಂದ್ರಪಾಟೀಲ್ (ಮಾನ್ಯ ಮುಖ್ಯಮಂತ್ರಿಗಳು).**—ಮಾನ್ಯ ಸಭಾಧ್ಯಕ್ಷರೇ, ಇವತ್ತು ರೈತರಿಗೆ ಸಾಲ ಒದಗಿಸುವಂಥ ಮತ್ತು ವಿತರಣೆ ಮಾಡುವಂಥ ಕಾರ್ಯಕ್ರಮದಲ್ಲಿ ಒಂದು ಹೊಸ ಸಂಕಟ ಉದ್ಭವವಾಗಿದೆ. ಬಹುಶಃ ಅನೇಕ ಮಾನ್ಯ ಸದಸ್ಯರು ಈ ಗಮನ ಸೆಳೆಯುವ ನೋಟೀಸ್‌ನಲ್ಲಿ ಇದನ್ನು ಆ ರೀತಿಯಿಂದ ನೋಡಿದ್ದಾರೋ ಇಲ್ಲವೋ ಎನ್ನುವಂಥದ್ದು ನನಗೆ ಗೊತ್ತಿಲ್ಲ. ಬಹುಶಃ ನಬಾರ್ಡ್‌ನವರು ಇನ್ನೊಂದು ಪತ್ರವನ್ನು ನಮಗೆ ಅಂದರೆ ಮ್ಯಾನೇಜಿಂಗ್ ಡೈರೆಕ್ಟರ್, ಕರ್ನಾಟಕ ಸ್ಟೇಟ್ ಕೊ-ಆಪರೇಟಿವ್ ಅಪೆಕ್ಸ್ ಬ್ಯಾಂಕ್‌ಗೆ ಬರೆದಿದ್ದಾರೆ. ಬಹುಶಃ ಅದೇ ರೀತಿಯಿಂದ ಎಲ್ಲಾ ಡೆವಲಪ್‌ಮೆಂಟ್ ಬ್ಯಾಂಕ್‌ಗೂ ಬರೆದಿರಬಹುದು. ಅವರು ಇವತ್ತು ತಳೆದ ಧೋರಣೆ ಹೊಸದೇನಲ್ಲ. ಮತ್ತು ಅವರು ಧೋರಣೆ ಏನು ತಳೆದಿದ್ದಾರೆ, ಅದರಿಂದ ಉದ್ಭವವಾದಂಥ ಪರಿಸ್ಥಿತಿಯಲ್ಲಿ ರೈತರ ಹಿತ ರಕ್ಷಣೆ ಮಾಡುವುದಕ್ಕೆ ನಾವು ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ಬಹಳ ಮೂಲಭೂತ ಪ್ರಶ್ನೆ ಇದರ ಬಗ್ಗೆ ಸದನದಲ್ಲಿ ಈ ಕಡೆ ಇದ್ದವರಾಗಲಿ, ಆ ಕಡೆ ಇದ್ದವರಾಗಲೀ ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ತಮಗೆ ಮತ್ತು ಸದನಕ್ಕೆ ನೆನಪಿದ್ದ ಹಾಗೆ, ಹೋದ ಸಲದ ಚರ್ಚೆಯಲ್ಲಿ ಸಾಲ ಮನ್ನಾ ಮಾಡುವ ಬಗ್ಗೆ ಚರ್ಚೆಯಾಗಲಿ ಮತ್ತು ಎರಡನೇ ವಿಚಾರಗಳಲ್ಲಿ ಚರ್ಚೆ ಮಾಡುವ ಮುನ್ನ ಅನೇಕ ಮಾನ್ಯ ಸದಸ್ಯರು ಈ ಕಡೆ ಕುಳಿತಂಥ ಮಾನ್ಯ ಸದಸ್ಯರು ಈ ಕಡೆ ಕುಳಿತಂಥ ಮಾನ್ಯ ಸದಸ್ಯರು, ಒಂದೇ ಬೇಡಿಕೆಯನ್ನು ಮುಂದಿಟ್ಟರು. ಏನೆಂದರೆ, ಹಿಂದಿನ ಸರ್ಕಾರದವರು ಇಂಟರೆಸ್ಟ್ ಸಬ್ಸಿಡಿಯನು ಕೊಡುತ್ತಿದ್ದರು. ರೈತರಿಗೆ ಏನು ಇಂಟರೆಸ್ಟ್ ಆಗುತ್ತಿತ್ತು, ಅದರಲ್ಲಿ ಸರ್ಕಾರದವರು ಕೂಡಾ ಇಂಟರೆಸ್ಟ್‌ನ ಒಂದು ಭಾಗದ ಜವಾಬ್ದಾರಿಯನ್ನು ತೆಗೆದುಕೊಂಡು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದರು. ಅದಕ್ಕಾಗಿ ರೈತರ ಮೇಲೆ ಇಂಟರೆಸ್ಟ್, ಬಡ್ಡಿ ದರ ಹೆಚ್ಚು ಇರಲಿಲ್ಲ. ಆ ಅನುಕೂಲವನ್ನು ಹಿಂದಿನ ಸರ್ಕಾರ ಮಾಡಿತ್ತು. ಆದರೆ ನಮ್ಮ ಸರ್ಕಾರ ಬಂದ ಮೇಲೆ ಇದನ್ನು ತೆಗೆದು ಬಿಟ್ಟರು ಎನ್ನತಕ್ಕಂಥ ಒಂದು ದೋಷಾರೋಪಣೆ ಆಗುತ್ತಿದೆ. ಈ ಒಂದು ಪ್ರಶ್ನೆಯನ್ನು ವಿಚಾರ ಮಾಡುವ ಮುನ್ನ ಎರಡು ಪ್ರಶ್ನೆಗಳನ್ನು ನಾವು ಬಿಡಿಸಿಕೊಳ್ಳಬೇಕಾಗುತ್ತದೆ, ಅವನ್ನು ಪ್ರತ್ಯೇಕ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಬಹುಶಃ ಕನ್‌ಫ್ಯೂಷನ್ ಆಗಬಹುದು. ಸಾಲ ಮನ್ನಾ ಮಾಡುವ ಪ್ರಶ್ನೆ ಒಂದು ಕಡೆ ಇದೆ. ಮತ್ತು ರೈತರಿಗೆ ನಬಾರ್ಡ್ ಮುಖಾಂತರ ನಬಾರ್ಡ್‌ನಿಂದ, ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕ್‌ಗಳು ಮತ್ತು ಪ್ರೈಮರಿ ಬ್ಯಾಂಕ್‌ಗಳ ಮುಖಾಂತರ ಏನು ಸಾಲ ಸಿಗುತ್ತದೆ, ಆ ಬಡ್ಡಿ ದರದಲ್ಲಿ ಎಷ್ಟರ ಮಟ್ಟಿಗೆ ಪರಿಹಾರ ರಾಜ್ಯ ಸರ್ಕಾರ ನೀಡಬೇಕು ಎನ್ನುವುದು ಎರಡನೇ ಪ್ರಶ್ನೆ. ಇವತ್ತು ಸಾಲ ಮನ್ನಾ ಮಾಡುವುದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಬಂದಿರುವಂಥ ಸಂಕಟ, ಇವತ್ತು ಬಂದಿರುವಂಥ ಈ ಒಂದು ತೊಡಕು, ಇದು ಏಕೆ ಬಂದಿದೆ ಎನ್ನತಕ್ಕಂಥದ್ದನ್ನು ನಾನು ಹೇಳಬೇಕಾದರೆ, ತಮಗೆಲ್ಲರಿಗೂ ಗೊತ್ತಿದ್ದ ಹಾಗೆ. ಹಣಕಾಸಿನ ಮಂತ್ರಿಗಳು ೧೭ನೇ ಮಾರ್ಚ್ ೧೯೯೦ಕ್ಕೆ ತಮ್ಮ ಬಜೆಟ್ ಸ್ಪೀಚ್‌ನಲ್ಲಿ ರೈತರಿಗೆ ನಬಾರ್ಡ್‌ನಿಂದ ಏನು ಸಾಲ ಸಿಗುತ್ತದೆ, ಆ ಬಡ್ಡಿ ದರದಲ್ಲಿ ಅವರಿಗೆ ಪರಿಹಾರವನ್ನು ಸರ್ಕಾರ ಒದಗಿಸಬೇಕು, ಅದಕ್ಕಾಗಿ ಇಂಥ ಒಂದು ಬೇಡಿಕೆ ಬಂದಿರುವುದರಿಂದ ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡಿ ಬಡ್ಡಿ ದರದಲ್ಲಿ ಸರ್ಕಾರವೂ ಕೂಡಾ ಸಬ್ಸಿಡಿಯನ್ನು ಕೊಡುತ್ತದೆ ಎನ್ನತಕ್ಕಂಥ ಒಂದು ಘೋಷಣೆಯನ್ನು ಮಾಡಿದರು. ಮತ್ತು ಬಹುಶಃ ನಿನ್ನೆ ಕೂಡಾ ಅವರು ಸಬ್ಸಿಡಿಯನು ಎಷ್ಟು ಕೊಡುತ್ತೇವೆ ಎನ್ನುವ ಡಿಟೈಲ್ಸನ್ನು ಕೊಟ್ಟಿದ್ದಾರೆ. ೫.೫ರಿಂದ ೬ ಪರ್ಸೆಂಟ್‌ವರೆಗೆ ಸಬ್ಸಿಡಿಯನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ ಎಂದು ಹೇಳಿದರು. ದಿನಾಂಕ ೧೭-೩-೧೯೯೦ಕ್ಕೆ ನಮ್ಮ ಹಣಕಾಸಿನ ಮಂತ್ರಿಗಳು ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಬಡ್ಡಿ ದರದಲ್ಲಿ ನಾವು ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿದ್ದರ ಆಧಾರದ ಮೇಲೆ ನಬಾರ್ಡ್‌ನವರು ಅಪೆಕ್ಸ್ ಬ್ಯಾಂಕ್‌ಗೆ ಪತ್ರ ಬರೆದಿದ್ದಾರೆ, ಈ ರೀತಿ ನಿಮ್ಮ ಸರ್ಕಾರ ಏನು ಒಂದು ಘೋಷಣೆ ಮಾಡಿದೆ ಪರಿಹಾರ ಕೊಡುತ್ತೇವೆ ಎಂದು, ಇದು ನಮ್ಮ ಲೆಕ್ಕಕ್ಕೆ ಬರುವುದಿಲ್ಲ ಮತ್ತು ತಮ್ಮದೇ ಏನು ಒಂದು ಸರ್ಕ್ಯುಲರ್ ಇತ್ತು. ೨೯-೧೧-೧೯೮೮ಕ್ಕೆ ಕೋ ಆಪರೇಟೀವ್ ಬ್ಯಾಂಕ್‌ಗಳಿಗೆ ಸರ್ಕ್ಯುಲರ್ ಕಳಿಸಿದ್ದೇವೆ. ಅದಕ್ಕೆ ಇದು ತದ್ವಿರುದ್ಧ ಆಗುವುದರಿಂದ, ವಯಲೇಟ್ ಆಗುವುದರಿಂದ, ನಿಮ್ಮ ಸರ್ಕಾರ ಈ ರೀತಿ ಘೋಷಣೆ ಮಾಡಿರುವುದರಿಂದ ಇನ್ನು ಮುಂದೆ in view of this, refinancing is suspended until we hear from the State Government and that they will not implement the proposed scheme ಎಂದು ಹೇಳಿದ್ದಾರೆ. ಪ್ರೊಪೋಸ್ಡ್ ಸ್ಕೀಮ್ ಏನು? ರೈತರು ಏನು ಇವೊತ್ತು ೧೧ ಪರ್ಸೆಂಟ್, ೧೨ ಪರ್ಸೆಂಟ್ ಸಾಲದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೇಲೆ ಬಡ್ಡಿಯನ್ನು ಕೊಡುತ್ತಿದ್ದಾರೆ, ಅದರಲ್ಲಿ ನಾವು ಪರಿಹಾರ ಕೊಡುತ್ತೇವೆ, ಐದೂವರೆ ಪರ್ಸೆಂಟ್, ಆರು ಪರ್ಸೆಂಟ್ ಎಂದು ಹೇಳಿದ್ದಾರೆ. ಇದು ಸದನದ ಬೇಡಿಕೆ ಆಗಿತ್ತು. ಅನೇಕ ಜನ ಮಾನ್ಯ ಸದಸ್ಯರು ಆ ಕಡೆ ಕುಳಿತವರು ನಮ್ಮ ಸರ್ಕಾರ ಇದ್ದಾಗ ರೈತರಿಗೆ ನಾವು ಅನುಕೂಲ ಮಾಡಿ ಕೊಟ್ಟಿದ್ದೇವೆ, ಪರಿಹಾರ ನಾವು ಒದಗಿಸಿಕೊಟ್ಟಿದ್ದೇವೆ ಎಂದು ಹೇಳಿದರು. ಇವೊತ್ತು ಬಿ.ಜೆ.ಪಿ.ಯ ಮಾನ್ಯ ಸದಸ್ಯರು ಇದ್ದ ಹಾಗೆ ಕಾಣಿಸುವುದಿಲ್ಲ. ಏಕೆಂದರೆ ಅವರು ಒಂದು ಪದವನ್ನು ಮಾಡಿಕೊಂಡು ಬಿಟ್ಟಿದ್ದಾರೆ. ಇದು ರೈತರ ವಿರೋಧಿ ಸರ್ಕಾರ, ರೈತರ ವಿರೋಧಿ ಸರ್ಕಾರ ಎಂದು ಒಂದೇ ಸಮನೆ ಒಳಗೂ ಹೇಳುತ್ತಾರೆ, ಹೊರಗೂ ಹೇಳುತ್ತಾರೆ. ಅದನ್ನು ನಾನು ಪರಿಗಣಿಸಿ ಈಗಾಗಲೇ ಹೇಳಿದ್ದೇನೆ. ಹಿಂದಿನ ಸರ್ಕಾರ ಏನು ಒಂದು ಪರಿಹಾರ ಒದಗಿಸಿತ್ತು, ಆ ವೇಳೆಗೆ ನಬಾರ್ಡ್‌ನವರು ಪ್ರತಿಭಟನೆ ಮಾಡಿ ರೀ ಫೈನಾನ್ಸ್ ನಿಲ್ಲಿಸಿ, ಸರ್ಕಾರವನ್ನು ಮಣಿಸಿ, ಆ ರೀತಿ ಪರಿಹಾರ ಕೊಡುವ ಹಾಗೆ ಇಲ್ಲ ಎಂದು ಒಂದು ಲೆಟರ್ ಅನ್ನು ಕಳಿಸಿದ್ದಾರೆ. ಬಹುಶಃ ಅದು ಮಾನ್ಯ ಏಕಾಂತಯ್ಯನವರಿಗೆ ಗೊತ್ತಿರಬಹುದು. ಅದು ನನ್ನಲ್ಲಿ ಇದೆ. ಸರ್ಕಾರದವರು ೧೮-೩-೧೯೮೮ಕ್ಕೆ ಅಪೆಕ್ಸ್ ಬ್ಯಾಂಕ್‌ಗೆ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಪತ್ರ ಬರೆದಿದ್ದಾರೆ, ಈ ರೀತಿ ನಬಾರ್ಡ್‌ನವರ ಕಾಟ ಹೆಚ್ಚಾಗಿದೆ, ನಬಾರ್ಡ್‌ನವರು ರೀ ಫೈನಾನ್ಸ್ ನಿಲ್ಲಿಸಿದ್ದಾರೆ, ನಮಗೇನೂ ಗತ್ಯಂತರ ಇಲ್ಲ, ಅದಕ್ಕಾಗಿ ನಾವು ಏನು ಪರಿಹಾರ ಕೊಡುತ್ತಿದ್ದೇವೆ, ಇನ್ನು ಮುಂದೆ ಪರಿಹಾರ ಕೊಡುವ ಹಾಗೆ ಇಲ್ಲ. ದಯವಿಟ್ಟು ನಿಮ್ಮ ಎಲ್ಲಾ ಬ್ಯಾಂಕ್‌ಗಳಿಗೆ ತಿಳಿಸಬೇಕು ಎನ್ನುವಂತಹ ಪತ್ರ ಬರೆದರು. ಅದಾದ ಮೇಲೆ ಪತ್ರ ಬರೆದಂತೆ ಗವರ್ನ್‌ಮೆಂಟ್ ಆರ್ಡರ್ ಜಾರಿ ಆಗಿರಲಿಲ್ಲ. ನಾವು ಬಂದ ಮೇಲೆ, ನಮ್ಮ ಗಮನಕ್ಕೆ ಬಂದ ಮೇಲೆ ಜಾರಿ ಮಾಡಿದೆವು ಅಷ್ಟೆ. ಈಗ ಎರಡು ಪ್ರಶ್ನೆಗಳು ಇವೆ. ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಕೇಳಿದರು. ಶ್ರೀಮಾನ್ ಮಲ್ಲಿಕಾರ್ಜುನಖರ್ಗೆಯವರೂ ಸಹ ಕೇಳಿದರು ಮತ್ತು ಮಾನ್ಯ ವೆಂಕಟಪ್ಪನವರೂ ಸಹ ಹಿಂದಕ್ಕೆ ಎಷ್ಟು ಸಬ್ಸಿಡಿಯನ್ನು ಕೊಡಬೇಕಾಗಿತ್ತು ಎಂದು ಕೇಳಿದರು. ೫೭-೫೮ ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕಾಗಿದೆ. ಅವರು ಏನು ಹೇಳಿದ್ದಾರೆ ಎಂದರೆ, ನಾವು ಈ ದುಡ್ಡು ಕೊಡುತ್ತೇವೆ, ನಾವು ಸ್ವಲ್ಪ ದುಡ್ಡು ಕೊಟ್ಟರೂ ಕೂಡ ಉಳಿಕೆ ದುಡ್ಡು ಕೊಡುತ್ತೇವೆಂದು ನೀವು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದರೆ ಮಾತ್ರ ಮುಂದೆ ರೀ ಫೈನಾನ್ಸ್ ಮಾಡುತ್ತೇವೆ, ಇಲ್ಲದಿದ್ದರೆ ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ. ಇವೊತ್ತು ಪರಿಸ್ಥಿತಿ ಏನು ಆಗಿದೆ ಎನ್ನುವುದನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ. ನಾವೆಲ್ಲಾ ಇದಕ್ಕೆ ಗಮನ ನೀಡಬೇಕು. ಒಂದು ಕಡೆ ಸರ್ಕಾರ ಇದೆ, ಜನ ಪ್ರತಿನಿಧಿ ಸರ್ಕಾರ ಒಂದು ಕಡೆ ಮತ್ತು ಸರ್ಕಾರ ಹಾಗೂ ಜನತಾ ಪ್ರತಿನಿಧಿಗಳು ಸೇರುವಂತಹ ಈ ಒಂದು ಮನೆಯಲ್ಲಿ ನಾವು ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಈ ನಿರ್ಣಯ ತೆಗೆದುಕೊಂಡ ಮೇಲೆ ಬಾಂಬೆಯಲ್ಲಿ ಕುಳಿತಿರುವಂತಹ ನಬಾರ್ಡ್‌ನವರು ಈ ನಿರ್ಣಯ ಜಾರಿಗೆ ತಂದರೆ ನಾವು ದುಡ್ಡು ಕೊಡುವ ಹಾಗೆ ಇಲ್ಲ, ನಾವು ರೀ ಫೈನಾನ್ಸ್ ನಿಲ್ಲಿಸಿಬಿಡುತ್ತೇವೆ ಎಂದು ಹೇಳಿದ್ದಾರೆ. ಅದರ ಅರ್ಥ ಮುಂದಿನ ಸಾಲಿಗೆ ರೈತರಿಗೆ ಏನು ಒಂದು ಕ್ರಾಪ್ ಲೋನ್ ಬೇಕು, ಏನು ಒಂದು ಸಾಲ ಬೇಕು, ಆ ದುಡ್ಡು ಪ್ರತಿ ವರ್ಷ ನಬಾರ್ಡ್‌ನವರಿಂದ ಬರುತ್ತಿತ್ತು. ಇನ್ನು ನಬಾರ್ಡ್‌ನವರು ನಮ್ಮ ಹತ್ತಿರ ಬರಬೇಡಿ ಎಂದು ಹೇಳುತ್ತಾರೆ. ಹಾಗಾದರೆ ನಾವು ಯಾರ ಹತ್ತಿರ ಹೋಗಬೇಕು, ಮಾನ್ಯ ಸದಸ್ಯರು ಅವರಿಗೆ ಸಾಲದ ವ್ಯವಸ್ಥೆ ಏನು ಮಾಡುತ್ತೀರಿ ಎಂದು ಕೇಳಿದರು. ಅವರಿಗೆ ಸಾಲದ ವ್ಯವಸ್ಥೆ ಮಾಡುವಂತಹ ಶಕ್ತಿ ನಮ್ಮ ರಾಜ್ಯ ಸರ್ಕಾರದವರಲ್ಲಿ ಇದ್ದಿದ್ದರೆ ನಬಾರ್ಡ್‌ನವರ ಹತ್ತಿರ ಹೋಗಿ ಕೈ ಒಡ್ಡಬೇಕಾದ ಅವಶ್ಯಕತೆ ಇರಲಿಲ್ಲ. ಆ ಶಕ್ತಿ ಇವೊತ್ತು ನಮ್ಮಲ್ಲಿ ಇಲ್ಲ, ಈ ಶಕ್ತಿ ಇವೊತ್ತು ಇಲ್ಲ. ನಿನ್ನೆಯೂ ಇರಲಿಲ್ಲ, ನಾಳೆಯೂ ಇರುವ ಹಾಗೆ ಇಲ್ಲ. ಇದನ್ನು ನಾನು ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ. ಹೋದ ಸಲ ಇದರ ಬಗ್ಗೆ ಚರ್ಚೆ ಮಾಡುವ ಮುಂದೆ ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ಕಳಕಳಿಯಿಂದ ವಿನಂತಿಸಿಕೊಂಡೆ ಮತ್ತು ವಿರೋಧ ಪಕ್ಷದ ಅನೇಕ ಮುಖ್ಯ ಸದಸ್ಯರಲ್ಲಿ ಸಹ ವಿನಂತಿ ಮಾಡಿಕೊಂಡೆ. ಕರ್ನಾಟಕದಲ್ಲಿ ಈ ಸಲ ನಾವು ಒಂದು ವಾತಾವರಣ ನಿರ್ಮಾಣ ಮಾಡಿದ್ದೇವೆ. ರೈತರ ಸಾಲ ಮನ್ನಾ, ರೈತರ ಸಾಲ ಮನ್ನಾ ಎಂದು ಎಲ್ಲರೂ ಘೋಷಣೆ ಮಾಡಿದ್ದೇ, ಮಾಡಿದ್ದು ಇಂತಹ ಒಂದು ವಾತಾವರಣದಲ್ಲಿ ರಿಕವರಿ ೬೦ ಪರ್ಸೆಂಟ್ ಆಗಬೇಕು ಎಂದು ಅವರದ್ದು ಏನು ಟಾರ್ಗೆಟ್ ಇದೆ, ಅದನ್ನು ಮುಟ್ಟುವುದಕ್ಕೆ ಸಾಧ್ಯ ಇಲ್ಲ ನಾನು ಮೊನ್ನೆ ಒಂದೆರಡು ಕಡೆ ಹೇಳಿದ್ದೆ, ಬಹುಶ: ೧೨ ಪರ್ಸೆಂಟ್, ೧೫ ಪರ್ಸೆಂಟ್ ದಾಟುವಂಥಾದ್ದು ಸಹ ಇವೊತ್ತು ನನಗೆ ಭರವಸೆ ಇಲ್ಲ.

ಮುಂದಿನ ಸಾಲಿಗೆ ಕೇಳಿದರೆ ನೀವು ೪೦ ಪರ್ಸೆಂಟ್ ಟಾರ್ಗೆಟ್ ಮುಟ್ಟಿಲ್ಲ ಅದಕ್ಕಾಗಿ ಆ ಕಡೆ ನಿಮ್ಮ ಕರ್ನಾಟಕಕ್ಕೆ ಹೋಗಿರಿ ಎಂದು ಹೇಳಬಹುದಾಗಿತ್ತು. ಈ ಮಧ್ಯದಲ್ಲಿ ನಬಾರ್ಡ್‌ಗೆ ಇನ್ನೊಂದು ಕಂಟಿನೆವ ಸಿಕ್ಕಿತು. ಏನೆಂದರೆ, ನೀವು ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆಂದು ಘೋಷಣೆ ಮಾಡಿದಿರಿ

ನಾವು ನಬಾರ್ಡ್‌ನವರು ಏನು ಸರ್ಕ್ಯುಲರ್ ಕೊಟ್ಟಿದ್ದೇವೆ ಆ ಸರ್ಕ್ಯುಲರ್‌ಗೆ ತದ್ವಿರುದ್ಧವಾಗುತ್ತದೆ, ಆ ಸರ್ಕ್ಯುಲರನ್ನು ವಯೊಲೆಟ್ ಮಾಡುತ್ತಿದ್ದೀರಿ, ಅದಕ್ಕಾಗಿ ಇನ್ನು ಮುಂದೆ ಸಾಲ ಕೊಡುವ ಹಾಗಿಲ್ಲ, ನಿಲ್ಲಿಸಿಬಿಟ್ಟಿದ್ದೇವೆ ಎಂದು ಈಗಾಗಲೇ ಹೇಳಿದ್ದಾರೆ. ಆ ಪತ್ರ ಬಂದಿದೆ, ಇವತ್ತು ಈ ಪರಿಸ್ಥಿತಿಯಾಗಿದೆ. ಸದನದಲ್ಲಿ ನಾನು ನಿಮಗೆ ಕೇಳುತ್ತಾ ಇದ್ದೇನೆ, ಏನು ಮಾಡೋಣ ಎಂದು. ಈ ಒಂದು ಪರಿಸ್ಥಿತಿ ಉದ್ಭವವಾದಾಗ ಸಬ್ಸಿಡಿ ಬಗೆ ಇವತ್ತು ಏನು ನಿರ್ಣಯ ಮಾಡಿದ್ದೇವೆ, ಘೋಷಣೆ ಮಾಡಿದ್ದೇವೆ ಮತ್ತೆ ಬಡ್ಜೆಟ್ ಸ್ಪೀಚ್‌ನಲ್ಲಿ ಘೋಷಣೆ ಮಾಡಿದ್ದೇವೆ. ಇಡೀ ರಾಜ್ಯದ ರೈತರಿಗೆ ನಾವು ಏನು ಅಶ್ಯೂರೆನ್ಸ್ ಕೊಟ್ಟಿದ್ದೇವೆ. ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆ ಇದರ ಮೇಲೆ ಏನು ದುಡ್ಡು ಬರುತ್ತದೆ ನಾವು ಕೊಡುತ್ತೇವೆ ಆ ದುಡ್ಡು ನಬಾರ್ಡ್‌ಗೆ ಕಟ್ಟುತ್ತೇವೆಂದು ಹೇಳುತ್ತಾ ಇಲ್ಲ, ಆ ಸಬ್ಸಿಡಿ ಏನಿದೆ ಅದನ್ನು ನಾವು ಕಟ್ಟುತ್ತೇವೆ, ಇಂಟರೆಸ್ಟ್ ಏನಿದೆ ಅದನ್ನು ನಾವು ಕಟ್ಟುತ್ತೇವೆ ಎಂದು ಹೇಳಿದರೂ ಕೂಡ ನಬಾರ್ಡ್‌ನವರು ಪೂರ್ತಿ ದುಡ್ಡು ರೈತರಿಂದಲೇ ವಸೂಲು ಮಾಡಬೇಕು, ಪೂರ್ತಿ ದುಡ್ಡು ಅವರೇ ಕಟ್ಟಬೇಕೇ ಹೊರತಾಗಿ ನೀವು ಯಾವುದೂ ಒಂದು ನಯೇಪೈಸೆ ಸಬ್ಸಿಡಿ ಕೊಡತಕ್ಕದ್ದಲ್ಲ ಎನ್ನುವಂಥ ಧೋರಣೆ ತಳೆದಿದ್ದಾರೆ. ಇದು ಹೊಸ ಧೋರಣೆಯಲ್ಲ. ಹಿಂದಿನ ಸರ್ಕಾರವು ಕೂಡ ರೈತರ ಸಲುವಾಗಿ ಸಬ್ಸಿಡಿ ಕೊಡಬೇಕು ಎನ್ನುವಂಥ ಧೋರಣೆ ತಾಳಿದಾಗ ಆಗ ಒತ್ತಾಯ ಮಾಡಿ ಆ ಧೋರಣೆಗೆ ವಿರುದ್ಧವಾಗಿ ಸರ್ಕಾರಕ್ಕೆ ನಿಮ್ಮ ಆರ್ಡರನ್ನು ನೀವೇ ವಿತ್‌ಡ್ರಾ ಮಾಡಬೇಕು ಎನ್ನುವಂಥ ಒತ್ತಾಯ ತಂದು ಅವರನ್ನು ನಬಾರ್ಡ್ ಮಣಿಸಿತು. ನಾನು ಹೇಳುತ್ತಾ ಇದ್ದೇನೆ. ಹಿಂದಿನ ಸರ್ಕಾರ, ಜನತಾ ಪಕ್ಷದ ಸರ್ಕಾರ, ನಿಮ್ಮ ಸರ್ಕಾರ ನಬಾರ್ಡ್‌ನ ಒತ್ತಾಯಕ್ಕೆ ಮಣಿದು ನೀವು ಮಾಡಿದಂಥ ಆರ್ಡರನ್ನು ವಿತ್‌ಡ್ರಾ ಮಾಡಿದ್ದೀರಿ. ಅದರ ನಂಬರು ಮತ್ತು ಡೇಟನ್ನು ಕೊಡುತ್ತೇನೆ,

ಶ್ರೀ ಡಿ. ಬಿ. ಚಂದ್ರೇಗೌಡ.—ವಿತ್‌ಡ್ರಾ ಮಾಡಿಲ್ಲ ಕಾಗದ ಬರೆದಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇದು ಬಹಳ ಗಹನವಾದ ವಿಚಾರವಿದೆ ಎನ್ನುವಂಥ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಯಾರ ಮೇಲೂ ದೋಷಾರೋಪಣೆ ಮಾಡಬೇಕು ಎನ್ನುವಂಥ ವಿಚಾರದಿಂದ ನಾನು ಹೇಳುತ್ತಾ ಇಲ್ಲ. ಏನು ಮಾಡಿದಿರಿ ಎನ್ನುವುದನ್ನು ಓದುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ನಾನು ಈ ಅಭಿಪ್ರಾಯವನ್ನು ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಪ್ರಸ್ತಾಪ ಮಾಡಿದೆ. ಆಗ ತಾವಾಗಲಿ, ಹಣಕಾಸಿನ ಮಂತ್ರಿಗಳಾಗಲಿ ಇದರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಹೇಳಿದರೆ ಏನು ತಪ್ಪಿದೆ.

ಶ್ರೀ ಹೆಚ್. ಏಕಾಂತಯ್ಯ—ತಪ್ಪಿಲ್ಲ, ನಾನು ಪ್ರಸ್ತಾಪ ಮಾಡಿದಾಗ ಪೂರ್ಣವಾಗಿ ಹೇಳಿದೆ. ಮಾನ್ಯ ಹಣಕಾಸಿನ ಮಂತ್ರಿಗಳಾಗಲಿ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳನ್ನು ಸಂಪರ್ಕ ಮಾಡಬೇಕು ಎಂದು ಹೇಳಿದೆ. ಅಧಿಕಾರಿಗಳು ಏನು ಮಾಡಿದ್ದಾರೆ ಎಂದು ಹೇಳಿದೆ. ಆವತ್ತು ತಾವು ಅದಕ್ಕೆ ಉತ್ತರ ಕೊಟ್ಟಿಲ್ಲ. ಅದಕ್ಕೆ ಬದಲಾಗಿ ಇವತ್ತು ತಮ್ಮವರೇ ಆದವರು ಪ್ರಸ್ತಾಪ ಮಾಡಿದಾಗ ಉತ್ತರ ಹೇಳುತ್ತಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಏಕಾಂತಯ್ಯನವರೆ...

ಶ್ರೀ ಹೆಚ್. ಏಕಾಂತಯ್ಯ.—ನಾನು ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಮೊಟ್ಟ ಮೊದಲ ಬಾರಿಗೆ ಪ್ರಸ್ತಾಪ ಮಾಡಿದಾಗ ಏಕೆ ಉತ್ತರ ಕೊಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್,—ವಿರೋಧಪಕ್ಷದ ಮಾನ್ಯ ಸದಸ್ಯರಲ್ಲಿ......

ಶ್ರೀ ಹೆಚ್. ಏಕಾಂತಯ್ಯ,—ಇದರಲ್ಲಿ ರಾಜಕಾರಣ ಮಾಡುವುದು ಬೇಡ ಎಂದು ಹೇಳಿದ್ದು. ನಾನು ಮೊಟ್ಟಮೊದಲ ಬಾರಿಗೆ, ಸಂಬಂಧಪಟ್ಟಂಥ ಅಧಿಕಾರಿ ನಮ್ಮ ಘನತೆ ಗೌರವಕ್ಕೆ ಕುಂದು ಉಂಟು ಮಾಡುವ ರೀತಿಯಲ್ಲಿ ಪತ್ರ ಬರೆದಿದ್ದಾನೆ. ಇವಕ್ಕೆ ಮುಖ್ಯ ಮಂತ್ರಿಗಳು, ಹಣಕಾಸಿನ ಮಂತ್ರಿಗಳು ಕೇಂದ್ರ ಸಚಿವರನ್ನು ಭೇಟಿ ಮಾಡಬೇಕು ಇಲ್ಲದಿದ್ದರೆ ಸಂಪರ್ಕ ಮಾಡಬೇಕು, ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕು ಎಂಬ ಮಾತನ್ನು ನಾವು ಈ ಕಡೆಯಿಂದ ಹೇಳಿದ್ದೇವೆ. ಆಗ ಅದರ ಬಗ್ಗೆ ತಾವು ಚಕಾರ ಎತ್ತಲಿಲ್ಲ, ಈಗ ಪ್ರಸ್ತಾಪ ಮಾಡುತ್ತಾ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ನಾವು ಕೇಳಬಾರದೇ, ನಾವೂ ಸದಸ್ಯರಿದ್ದೇವೆ, ನಮಗೂ ಹಕ್ಕು ಇದೆ. ನಾವೂ ಈ ಸದನದ ಸದಸ್ಯರು.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೆ, ನಾವು ಕೇಳಿದಾಗ ಉತ್ತರ ಏಕೆ ಕೊಟ್ಟಿಲ್ಲ. ನಮಗೆ ರಕ್ಷಣೆ ಕೊಡಬೇಕು.

MR. SPEAKER.—I am coming to your protection.

SRI H. EKANTHAIAH.—Yes Sir,

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಲ್ಲಿ ನಾನು ಒಂದು ವಿನಂತಿ ಮಾಡುತ್ತಾ ಇದ್ದೇನೆ. ನಾನು ಸ್ಟೆಪ್ ಬೈ ಸ್ಟೆಪ್ ಇದೆಲ್ಲಾ ಕವರ್ ಮಾಡುತ್ತಾ ಇದ್ದೇನೆ. ತಾವು ಹೇಳಿದ ಪ್ರಶ್ನೆಯನ್ನೂ ಕವರ್ ಮಾಡುತ್ತಾ ಇದ್ದೇನೆ. ಸ್ವಲ್ಪ ನಿಧಾನವಾಗಿ ಕೇಳಿ.

ಶ್ರೀ ಹೆಚ್. ಏಕಾಂತಯ್ಯ.—ಒಂದು ಸಾರಿ ಈ ಮನೆಯಲ್ಲಿ ಪ್ರಸ್ತಾಪ ಮಾಡಿದಾಗ ಅದಕ್ಕೆ ಯಾವುದೇ ಉತ್ತರ ಕೊಡದೇ ಇದ್ದಾಗ ಈಗ ನಿಮ್ಮವರೇ ಪ್ರಸ್ತಾಪ ಮಾಡಿದಾಗ ಉತ್ತರ ಕೊಡುವಂಥ ಔಚಿತ್ಯ ಇದೆಯೆಲ್ಲಾ ಅದು ಸರಿಯೇ.

ಶ್ರೀ ವೀರೇಂದ್ರ ಪಾಟೀಲ್.—ಸ್ವಲ್ಪ ಸಮಾಧಾನದಿಂದ ಕೇಳಿ. ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ನನಗೆ ಸಮಾಧಾನ ಇದೆ. ಸಮಾಧಾನವಾಗಿ ಇರಬೇಕು ಎನ್ನುವುದನ್ನು ಒಪ್ಪುತ್ತೇನೆ. ಆದರೆ ತಾವು ಅರ್ಥಮಾಡಿಕೊಳ್ಳಿ. ಸನ್ಮಾನ್ಯ ಅಧ್ಯಕ್ಷರು ಹೇಳಲಿ. ನಾನು ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಚಕಾರ ಎತ್ತಲಿಲ್ಲ, ತಾವಾಗಲೆ, ಹಣಕಾಸಿನ ಮಂತ್ರಿಗಳಾಗಲಿ ಏತಕ್ಕೋಸ್ಕರ ಚಕಾರ ಎತ್ತಲಿಲ್ಲ ?

೧೧-೪೦ ಎ.ಎಂ.

ಶ್ರೀ ಹೆಚ್. ಏಕಾಂತಯ್ಯ.—ನಾನು ಮಾನ್ಯ ಸಭಾಧ್ಯಕ್ಷರ ರಕ್ಷಣೆ ಕೋರುತ್ತೇನೆ. ಒಂದು ಸಾರಿ ಒಂದು ವಿಷಯವನ್ನು ಯಾವುದೇ ರೀತಿಯಲ್ಲಿ ಪ್ರಸ್ತಾಪ ಮಾಡಿದಾಗ ಅದೇ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪ ಮಾಡಬಹುದೆ?

SRI M. MALLIIKARJUNA KHARGE.—You may raise so many questions.

(ಗೊಂದಲ)

SRI H. EKANTHAIAH.—I need the ruling of the Chair. ಆಯವ್ಯಯದ ಚರ್ಚೆಯಲ್ಲಿ ಪ್ರಸ್ತಾಪ ಮಾಡಿದಾಗ ಪೂರ್ಣವಾದ ಪಾಠವನ್ನು ನಾನು ಓದಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡಿದ್ದಾರೆಂಬ ಮಾತನ್ನು ಹೇಳಿದ್ದೇನೆ. ಅದಕ್ಕೆ ಉತ್ತರ ಕೊಡುವಾಗ ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ನೇರವಾಗಿ ಕೇಂದ್ರದ ಹಣಕಾಸಿನ ಸಚಿವರನ್ನು ಸಂಪರ್ಕ ಮಾಡಬೇಕು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿದ್ದೇನೆ. ಅದಕ್ಕೆ ಉತ್ತರ ಕೊಡುವಾಗ ಮಾನ್ಯ ಹಣಕಾಸಿನ ಮಂತ್ರಿಗಳಾಗಲಿ, ಅಥವಾ ಮಧ್ಯೆ ಪ್ರವೇಶ ಮಾಡಿದ ಮುಖ್ಯ ಮಂತ್ರಿಗಳಾಗಲಿ ಉತ್ತರ ಕೊಡಲಿಲ್ಲ. ಅದಕ್ಕೆ ಬದಲಾಗಿ ಇವತ್ತಿನ ದಿವಸ ಆ ಕಡೆಯ ಸದಸ್ಯರು ಪ್ರಸ್ತಾಪ ಮಾಡಿದಾಗ ಉತ್ತರ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಲೋಪ ಅಲ್ಲವೆ ?

ಅಧ್ಯಕ್ಷರು.—ನೀವು ಕ್ರಿಯಾಲೋಪ ಎತ್ತಿದ್ದೀರಿ. I would like to be enlightened by Shri Kagodu Thimmappa on this point of order.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ಒಂದು ವರದಿ ಬಂದಿದ್ದು ಆ ವರದಿಯ ಆಧಾರದ ಮೇಲೆ ಗಮನ ಸೆಳೆಯುವ ಸೂಚನೆಯನ್ನು ಮುಂಚಿತವಾಗಿ ನಾನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಈ ಸದನದಲ್ಲಿ ಪ್ರಸ್ತಾಪ ಮಾಡಿದ ದಿನವೇ ನಾನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ಅದು ಇವತ್ತು ಬಂದಿದೆ.

ಅಧ್ಯಕ್ಷರು.—ನಿನ್ನೆ ನಾನು ಸದನಕ್ಕೆ ಸೂಚಿಸಿದೆ ೪೩ ಜನ ಮಾನ್ಯ ಸದಸ್ಯರುಗಳು ಆಯವ್ಯಯ ಅಂದಾಜಿನ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ೨೪ ಗಂಟೆ ಕಳೆದಿದೆ. ನಿನ್ನೆ ತಾನೆ ಅರ್ಥ ಮಂತ್ರಿಗಳು ಚರ್ಚೆಗೆ ಉತ್ತರ ಕೊಟ್ಟರು. ೪೩ ಜನ ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಚಾರಗಳ ಬಗ್ಗೆ ಒಂದು-ಒಂದೂವರೆ ಗಂಟೆ ಸಮಯದಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವುದು ತಮಗೂ ಗೊತ್ತು. ಆದ್ದರಿಂದ ಈ ಪ್ರಶ್ನೆಯ ಪ್ರಾಮುಖ್ಯತೆ ಮತ್ತು ಗಂಭೀರತೆಯನ್ನು ಗಮನದಲ್ಲಿರಿಸಿಕೊಂಡು ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆ ಏನು ಕೊಟ್ಟಿದ್ದಾರೆ, ಅದನ್ನು ಅಡ್ಮಿಟ್ ಮಾಡಿದ್ದೇನೆ. ತಾವು ಕೂಡ ಈ ಸಮಸ್ಯೆಯ ಗಂಭೀರತೆಯನ್ನು ಪರಿಶೀಲಿಸುತ್ತಿಲ್ಲ. ಔಚಿತ್ಯವನ್ನು

ಮಾತ್ರ ಪರಿಶೀಲಿಸುತ್ತಿದ್ದೀರಿ. ನಾನು ಈ ಪ್ರಶ್ನೆಯನ್ನು ಎತ್ತಿದಾಗ ನೀವು ಯಾರೂ ಉತ್ತರ ಕೊಡಲಿಲ್ಲ. ಈಗ ಮಾನ್ಯ ಕಾಂಗ್ರೆಸ್ ಸದಸ್ಯರು ಈ ಪ್ರಶ್ನೆಗಳನ್ನೆತ್ತುವಾಗ ಮುಖ್ಯ ಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ಉತ್ತರ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಯಾರೇ ಎತ್ತಲಿ ನಿಮ್ಮನ್ನು ನಮ್ಮನ್ನು ಈ ರಾಜ್ಯದಲ್ಲಿ ಕಾಡುತ್ತಿರುವುದು ಈ ಪ್ರಶ್ನೆ.

ಶ್ರೀ ಹೆಚ್. ಏಕಾಂತಯ್ಯ.—ಅವರು ಏನು ಹೇಳಿದರು ಆ ವರದಿ ಪತ್ರಿಕೆಯಲ್ಲಿ ಬಂತು. ತಾವು ಪ್ರಸ್ತಾಪ ಮಾಡುವುದಕ್ಕಿಂತ ಮೊದಲು ಕೊಟ್ಟಿದ್ದೇವೆಂದು ಹೇಳುತ್ತಾರೆ ಅದು ಸರಿಯಲ್ಲ. ನಾನು ಬರೆದ ದಿವಸವೇ ಪತ್ರ ಬಂತು. ಆ ಪತ್ರದ ಆಧಾರದ ಮೇಲೆ ಪತ್ರಿಕಾ ವರದಿ ಬರುವುದಕ್ಕಿಂತ ಮೊದಲೇ ನಾನು ಪ್ರಸ್ತಾಪ ಮಾಡಿದ್ದೆ.

ಅಧ್ಯಕ್ಷರು.— ಬಹಳ ಸಂತೋಷ.

ಶ್ರೀ ಹೆಚ್. ಏಕಾಂತಯ್ಯ.—ನಾನು ಕೇಳಿಕೊಳ್ಳುವುದಿಷ್ಟೆ. ಈ ರೀತಿ ಇಂತಹ ವಿಚಾರದಲ್ಲಿ ರಾಜಕೀಯ ಬೆರೆಸುವುದು ಅನಾವಶ್ಯಕ.

(ಗೊಂದಲ)

SRI KAGODU THIMMAPPA.—There is no politics.

SRI H. EKANTHAIAH—Whatelse it is

(Interruption)

ಶ್ರೀ ಹೆಚ್. ಏಕಾಂತಯ್ಯ.—ಇದು ಪ್ರಾಮುಖ್ಯ ಅಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳೇನಾದರೂ, ಮಾನ್ಯ ಹಣಕಾಸಿನ ಮಂತ್ರಿಗಳೇನಾದರೂ ಭಾವಿಸಿದ್ದರೆ ನನ್ನದೇನೂ ತಕರಾರಿಲ್ಲ ಆದರೆ ಅವತ್ತು ನಾನು ಎತ್ತಿದಾಗ ಪ್ರಾಮುಖ್ಯತೆ ಇಲ್ಲದಂಥ ವಿಚಾರಕ್ಕೆ ಈಗ ಅವರು ಎತ್ತಿದ್ದರಿಂದ ಪ್ರಾಮುಖ್ಯತೆ ಬರುವುದಾದರೆ ನನ್ನದೇನು ತಕರಾರಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಅವರು ಬಹಳ ಅನುಭವಿಗಳಾಗಿದ್ದಾರೆ. ಈ ರೀತಿ ಏತಕ್ಕೆ ಮಾತನಾಡುತ್ತಿದ್ದಾರೋ ನನಗೆ ಆಶ್ಚರ್ಯವಾಗುತ್ತಿದೆ. ನಾನು ಆಫೀಸಿನಲ್ಲಿದ್ದಾಗ ನನಗೆ ವರ್ತಮಾನ ಬಂತು. ನಬಾರ್ಡ್‌ನಿಂದ ಏನು ಪತ್ರ ಅಪೆಕ್ಸ್ ಬ್ಯಾಂಕಿಗೆ ಬರೆದಿದ್ದಾರೆ, ಅದರ ಪ್ರತಿ ಬಗ್ಗೆ ಈಗಾಗಲೇ ಒಬ್ಬ ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆಗ ನಾನು ಇರಲಿಲ್ಲ. ಏಕೆಂದರೆ, ಈವತ್ತು ಅವರಿಗೆ ಒಂದು ವ್ಯಥೆ ಏನೆಂದರೆ ನಾನು ಸದನದಲ್ಲಿ ಈ ಪ್ರಶ್ನೆಯನ್ನು ಎತ್ತಿದಾಗ ಯಾರು ಮಾತನಾಡಲಿಲ್ಲ ಎಂದು, ಅವರು ಎತ್ತಿದ್ದಾರೆ ಅದಕ್ಕೆ ಈವತ್ತು ಮಾತನಾಡುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ವಿರೋಧ ಪಕ್ಷದವರು ಉಪವಾಸ ಮಾಡಿದರು. ಅವರ ಹತ್ತಿರ ಮಾತನಾಡಲು ನೀವು ತಯಾರಾಗಿಲ್ಲ. ನಾವು ಕೇಳಿದಾಗ ನೀವು ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿತ್‌ಡ್ರಾಮಾಡಿಕೊಂಡು ಓದಿರಿ.

ಶ್ರೀ ಹೆಚ್. ಏಕಾಂತಯ್ಯ.—ನಿಮಗೆ ಗೊತ್ತಿಲ್ಲದೇ ಇರಬಹುದು. ಸಂದರ್ಭ ಬಂದಾಗ ಹೇಳುತ್ತೇನೆ.

ಅಧ್ಯಕ್ಷರು.—ಇದು ಬಹಳ ಮಹತ್ವವಾದ ವಿಷಯ, ದಯವಿಟ್ಟು...

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಮುಖ್ಯಮಂತ್ರಿಗಳಾಗಲೀ, ಅವರ ಕಡೆಯ ಸದಸ್ಯರುಗಳಾಗಲೀ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ, ಅವಹೇಳನ ಮಾಡತಕ್ಕ ಪ್ರಯತ್ನ ಏನಿದೆ. ಅದು ಸರಿಯಲ್ಲ.

ಅಧ್ಯಕ್ಷರು—ಮಾನ್ಯ ಮುಖ್ಯಮಂತ್ರಿಗಳು ಈಗತಾನೇ ಹೇಳುತ್ತಿದ್ದಾರೆ. ಆಗ ನಾನು ಸದನದಲ್ಲಿ ಇರಲಿಲ್ಲ ಎಂದು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನಾನು ತಮ್ಮ ಅನುಮತಿಯನ್ನು ಕೋರಿ ಪತ್ರವನ್ನು ಓದಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ Finance Minister has not replied.

ಅಧ್ಯಕ್ಷರು.—ನಿನ್ನೆ ದಿವಸ ಮಾನ್ಯ ಅರ್ಥಮಂತ್ರಿಗಳು ಉತ್ತರವನ್ನು ಮುಗಿಸಿದ ಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟಾಗ ನೀವು ಇದ್ದಿರಿ, ಏಕಾಂತಯ್ಯನವರೂ ಇದ್ದರು. ನಾನು ಏಕಾಂತಯ್ಯನವರಿಗೆ ಅವಕಾಶ ಕೊಟ್ಟಿದ್ದೆ, ಆಗ ನೀವು ಈ ಪ್ರಶ್ನೆ ಕೇಳಬಹುದಾಗಿತ್ತು.

ಶ್ರೀ ಹೆಚ್. ಏಕಾಂತಯ್ಯ.—ನೀವು ನಮಗೆ ರಕ್ಷಣೆ ಕೊಡಲಿಲ್ಲ.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಅಭಿಪ್ರಾಯ ವ್ಯಕ್ತ ಮಾಡುವುದಕ್ಕೂ ಒಂದು ಮಿತಿ ಇರುತ್ತದೆ. ಅಭಿಪ್ರಾಯ ಕೇಳುವುದಕ್ಕೂ ಒಂದು ಮಿತಿ ಇರುತ್ತದೆ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇವತ್ತು ರೈತರ ಸಮಸ್ಯೆ ಬಗ್ಗೆ ಕರ್ನಾಟಕದಲ್ಲಿ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ಅದನ್ನು ಕೆಲವು ಮಾನ್ಯ ಸದಸ್ಯರು ಡೈಲ್ಯೂಟ್ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಪ್ರಶ್ನೆ, ಮೊದಲು ಯಾರು ಎತ್ತಿದರು, ಅನಂತರ ಯಾರು ಎತ್ತಿದರು ಎನ್ನುವುದು ಮುಖ್ಯವಲ್ಲ, ಇವತ್ತು ರೈತನ ಆಗುಹೋಗಿನ ಪ್ರಶ್ನೆ ಇದೆ. ರೈತನಿಗೆ ಸಾಲ ಸಿಗತಕ್ಕಂಥ ಪ್ರಶ್ನೆ ಇದೆ. ನಬಾರ್ಡ್‌ನಿಂದ ಮುಂದಿನ ವರ್ಷ ರೈತನಿಗೆ ಸಾಲ ಸಿಗದೆಹೋದರೆ ಅವನು ಏನು ಮಾಡಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಾಕೌಟ್ ಮಾಡುವ ಬದಲು ಕ್ಲಾರಿಫಿಕೇಷನ್ ಕೇಳಬಹುದಾಗಿತ್ತು. ಆದರೆ ತಾವು ಕೇಳಲಿಲ್ಲ.

(ಗೊಂದಲ)

SRI R. V. DESHPANDE.—You cannot say that opposition is diluting the issue.

ಅಧ್ಯಕ್ಷರು.—ನನಗೆ ಬಹಳ ಆಶ್ಚರ್ಯವಾಗುತ್ತದೆ. ಮಾನ್ಯ ಏಕಾಂತಯ್ಯನವರು ಔಚಿತ್ಯದ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ನಿನ್ನೆ ನಾನು ತಮಗೆ ಅವಕಾಶಕೊಟ್ಟಿದ್ದೆ, ಮಾನ್ಯ ಅರ್ಥ ಸಚಿವರು ಉತ್ತರ ಕೊಡುವಾಗ ತಮ್ಮನ್ನು ಕರೆದೆ, ಈ ಪ್ರಶ್ನೆ ಗಹನವಾದದ್ದು, ಮಹತ್ವವಾದದ್ದು ಎಂದು ತಮ್ಮ ಇರಾದೆ ಇದ್ದಿದ್ದರೆ you could have confronted. ಅದನ್ನು ಮಾಡಲಿಲ್ಲ. ಇವತ್ತು ಯಾರೋ ಎತ್ತಿದ್ದಾರೆಂದು ಪ್ರಶ್ನೆ ಮಾಡತಕ್ಕ ಔಚಿತ್ಯವಾದರೂ ಏನು?

(ಗೊಂದಲ)

SRI R.V. DESHPANDE.—It is such an important issue but the Finance Minister has not replied.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ಆಗ ನಾವು ಅಲ್ಲಿ ಇದ್ದಾಗ ಒಂದೊಂದು ಡಿಮ್ಯಾಂಡ್ ಮೇಲೆ ಒಂದೂವರೆ ತಾಸು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಮಗೆ ತಾವು ಅವಕಾಶ ಕೊಡಿ ಎಂದು ಕೇಳಿದ್ದಕ್ಕೆ ನಮಗೆ ಅವಕಾಶ ಕೊಡಲಿಲ್ಲ. ಹೀಗಾಗಿ ಎಷ್ಟೋ ಫೈನಾನ್ಷಿಯಲ್ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಲಿಲ್ಲ. ಈಗ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಾಗಿದೆ.

(ಗೊಂದಲ)

ಅಧ್ಯಕ್ಷರು.— ಈ ವಿಷಯ ಇಲ್ಲಿಗೆ ಮುಗಿದು ಹೋಗಿದೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.— ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಿನ್ನೆಯ ದಿವಸ ಒಂದು ಗಂಟೆ ಇಪ್ಪತ್ತು ನಿಮಿಷದಲ್ಲಿ ಎಲ್ಲಾ ಪಾಯಿಂಟ್‌ಗಳನ್ನು

ನಮ್ಮ ಹಣಕಾಸು ಮಂತ್ರಿಗಳು ಕವರ್ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅನೇಕ ಪ್ರಶ್ನೆಗಳನ್ನು ಕೇಳತಕ್ಕಂಥಾದ್ದು ಇದ್ದರೂ ಸಮಯಾವಕಾಶ ಇಲ್ಲದಿದ್ದಕ್ಕೆ ಅಧ್ಯಕ್ಷರು ನಿಮಗೆ ಅನುಮತಿ ಕೊಟ್ಟಿಲ್ಲ, ಅದಕ್ಕೆ ತಾವು ಕೇಳಿಲ್ಲ. ಇವೊತ್ತು ಈ ಪ್ರಶ್ನೆ ಬರುತ್ತಿದೆ. ತಪ್ಪು ಏನೂ ಇಲ್ಲ ಅದನ್ನು ನೀವೂ ಒಪ್ಪುತ್ತೀರ, ನಾನು ಒಪ್ಪುತ್ತೇನೆ. ಆದರೆ ದುರ್ದೈವ, ಮಾನ್ಯ ಸದಸ್ಯರಾದ ಏಕಾಂತಯ್ಯನವರು ಅದನ್ನು ಇನ್ನೊಂದು ರೀತಿಯಿಂದ ಪ್ರತಿಪಾದಿಸುತ್ತಿದ್ದಾರೆ. ಅದಕ್ಕಾಗಿ ನಾನು ಹೇಳಿದೆ, ಇವೊತ್ತು ಗಂಭೀರವಾದ ಸಮಸ್ಯೆ ಏನು ನಿರ್ಮಾಣ ಆಗಿದೆ ಇದನ್ನು ನಾವು ಯಾವರೀತಿ ಎದುರಿಸಬೇಕು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಮೊದಲನೆಯ ಸಲ ಇಂತಹ ಪ್ರಶ್ನೆ ಬಂದಿಲ್ಲ, ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಹಿಂದಿನ ಸರ್ಕಾರ ಈ ರೀತಿ ಸಬ್ಸಿಡಿ ಯನ್ನು ಕೊಟ್ಟಾಗ ಆಗಲೂ ಕೂಡ ನಬಾರ್ಡ್‌ನವರು ಹಿಂದಿನ ಸರ್ಕಾರಕ್ಕೆ ಒತ್ತಾಯ ಮಾಡಿ ನೀವು ಕೊಟ್ಟಂತಹ ಸಬ್ಸಿಡಿ ವಿತ್‌ಡ್ರಾ ಮಾಡಿದ್ದು ಅಲ್ಲದೆ, ಸಬ್ಸಿಡಿ ನಿಲ್ಲಿಸಬೇಕೆಂದು ಹೇಳುವಂತಾದ್ದು ಆಗಿದೆ. ನೀವಾಗಿ ಆಗಿನ ಸರ್ಕಾರದಲ್ಲಿ ಪತ್ರ ಬರೆದಿದ್ದೀರಿ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ನನ್ನ ಹತ್ತಿರ ನಿಮ್ಮ ಪತ್ರದ ಕಾಪಿ ಇದೆ, ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಆ ಪತ್ರವನ್ನು ನೀವು ೨೮–೩–೮೯ಕ್ಕೆ ಬರೆದಿರಿ. ಅದು ಆದಮೇಲೆ ಗವರ್ನಮೆಂಟ್ ಆರ್ಡರ್ ಆಗಿ ನಿಂತುಹೋಗಿದೆ. ಬಹುಶಃ ನಾವು ನಮ್ಮ ಗಮನಕ್ಕೆ ಬಂದಮೇಲೆ ೧೧–೧–೯೦ಕ್ಕೆ ಗವರ್ನ್‌ಮೆಂಟ್ ಆರ್ಡರ್ ಹಿಂದಿನ ಪತ್ರದ ಆಧಾರದ ಮೇಲೆ ನಾವು ಇಷ್ಯು ಮಾಡಿದ್ದೇವೆ. ಅದು ಆದಮೇಲೆ ಮಧ್ಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಮೊದಲನೇ ಸಲ ಸದನದಲ್ಲಿ ಸೇರಿದಾಗ ಸಾಲ ಮನ್ನಾ ಮಾಡಬೇಕು, ಸಾಲವನ್ನು ವಸೂಲು ಮಾಡಬಾರದು, ಈಗ ತುರ್ತಾಗಿ ಅನೌನ್ಸ್ ಮಾಡಬೇಕೆಂದು ಹೇಳಿದರು. ಆ ವೇಳೆಯಲ್ಲಿ ನಾನು ಹೇಳಿದೆ, ಇದು ನಮ್ಮ ಜವಾಬ್ದಾರಿ ಅಲ್ಲ, ಇದು ಕೇಂದ್ರ ಸರ್ಕಾರದ ಜವಾಬ್ದಾರಿ. ಈ ಜವಾಬ್ದಾರಿಯನ್ನು ಅವರು ತೆಗೆದುಕೊಂಡಿದ್ದಾರೆ. ಮತ್ತು ಕೇಂದ್ರ ಸರ್ಕಾರ ಅಂದರೆ ನ್ಯಾಷನಲ್ ಫ್ರಂಟ್ ಸರ್ಕಾರ ಇವೊತ್ತು ಕೇಂದ್ರದಲ್ಲಿ ಅಧಿಕಾರ ಮಾಡುತ್ತಿದೆ, ಅವರು ಹಿಂದೆ ಭರವಸೆಯನ್ನು ಕೊಟ್ಟಿದ್ದಾರೆ. ನಾವು ಅಧಿಕಾರದಲ್ಲಿ ಬಂದರೆ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಸಾಲ ಮನ್ನಾ ಮಾಡುತ್ತೇವೆಂದು ಭರವಸೆಯನ್ನು ನೀಡಿದ್ದಾರೆ. ಅವರು ಯಾವ ವಚನವನ್ನು ಕೊಟ್ಟಿದ್ದಾರೆ, ಆ ವಚನವನ್ನು ಪಾಲಿಸುತ್ತಾರೆ. ಅವರು ವಚನ ಭ್ರಷ್ಟರು ಆಗುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ. ನಾನೇ ಹೋಗಿ ಬೇಕಾದರೆ ವಿಚಾರಿಸಿಕೊಂಡು ಬರುತ್ತೇನೆ, ವಿಚಾರಿಸಿಕೊಂಡು ಬರುವವರೆಗೂ ಸಾಲ ವಸೂಲು ಮಾಡುವುದನ್ನು ತಡೆಹಿಡಿಯುತ್ತೇವೆ ಎಂದು ಹೇಳಿದ್ದೇನೆ. ಅದು ಒಂದೇ ಆಧಾರದ ಮೇಲೆ ನಬಾರ್ಡ್‌ನವರು ಮತ್ತೆ ಸಸ್ಪೆನ್ಷನ್ ಆರ್ಡರ್ ಮಾಡಿದರು. ಅದು ಒಂದರಮೇಲೆ ಎಲ್ಲಿಯವರೆಗೆ ಹೋದರೂ ಅಂದರೆ, ನಮ್ಮ ಆಫೀಸರ್‌ಗೆ ಈ ರೀತಿ ಬರೆಯುತ್ತಾರೆ. ಈ ರೀತಿ ನಿಮ್ಮ ಮುಖ್ಯ ಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ಏನಾದರೂ ನಿಮ್ಮಲ್ಲಿ ಆರ್ಡರ್ ಮಾಡಬೇಕೆಂದು ಬಂದರೂ ಕೂಡ You should not carry out the orders of your Chief Minister ಎಂದು ಬರೆದಿದ್ದಾರೆ. ಬಹುಶಃ ಇದು ಇಲ್ಲಿಯೂ ಚರ್ಚೆಗೆ ಬಂತು. ಮೊನ್ನೆಯಲ್ಲೂ ಚರ್ಚೆಗೆ ಬಂತ . ಆಗ ಅನೇಕ ಮಾನ್ಯ ಸದಸ್ಯರು ಹೇಳಿದರು. ಒಬ್ಬ ಮುಖ್ಯ ಮಂತ್ರಿಗಳ ಆರ್ಡರನ್ನು ಇಂಪ್ಲಿಮೆಂಟ್ ಮಾಡಬೇಡ ಎಂದು ಕೆಳಗಿನ ಅಧಿಕಾರಿಗೆ ಯಾವರೀತಿ ಬರೆಯುತ್ತಾನೆ. ಎನ್ನುವ ವಿಚಾರ ಬಂತು. ಆದಕ್ಕೆ ನಾವು ಪ್ರೊಟೆಸ್ಟ್ ಮಾಡಿದ್ದೇವೆ, ಅದಕ್ಕೆ ನಬಾರ್ಡ್‌ಗೂ ಪತ್ರ ಬರೆದಿದ್ದೇವೆ. ಅದಕ್ಕೆ ಅಲ್ಲಿಂದ ಉತ್ತರವೂ ಬಂತು. ಅದು ಏನಾದರೂ ಬೇಕು ಅಂದರೆ ನಾನು ತಮಗೆ ಪ್ರತ್ಯೇಕವಾಗಿ ಹೇಳುತ್ತೇನೆ. ಅದು ಪ್ರಶ್ನೆ ಇಲ್ಲ. ಅದು ಆದಮೇಲೆ ಏನಾಯಿತು ಅಂದರೆ, ನಾವು ಸಾಲ ವಸೂಲು ಮಾಡುವುದನ್ನು ಮುಂದೆ ಸಾಗಿಸಿಕೊಂಡು ಹೋಗುತ್ತೇವೆ ಎಂದು ಹೇಳಿದ್ದೇವೆ. ಅದು ಆದಮೇಲೆ ನಬಾರ್ಡ್‌ನವರು ಇನ್ನೊಂದು ವಿಷಯ ಏನು ಹೇಳಿದರು. ಏನೆಂದರೆ, ಆ ಹಣಕ್ಕೆ ಸಬ್ಸಿಡಿ ಕೊಡಬೇಕಾಗಿತ್ತು ಇಂಟರೆಸ್ಟ್ ಸಬ್ಸಿಡಿ. ೫೭–೫೮ ಕೋಟಿ ರೂಪಾಯಿಗಳನ್ನು ನೀವು ಪೂರ್ತಿ ಕೊಡುವವರೆಗೂ ರೀಫೈನಾನ್ಸಿಂಗ್ ಹಾಗೆಯೇ ನಿಲ್ಲಿಸುತ್ತೇವೆಂದು ಹೇಳಿದರು. ಅನಂತರ ಮತ್ತೆ ಪತ್ರವ್ಯವಹಾರ ಮಾಡಿದಮೇಲೆ, ಒಳ್ಳೆಯದು ನಿಮಗೆ ಈಗ ಸದ್ಯ ಕೊಡುವಂಥ ಪರಿಸ್ಥಿತಿ ಇಲ್ಲದೇ ಹೋಗಿದ್ದರೆ, ಈ ರೀತಿಯಲ್ಲಿ ಕೊಡುತ್ತೇವೆಂದು ಬಡ್ಜೆಟ್‌ನಲ್ಲಿ ಪ್ರಾವಿಜನ್ ಮಾಡಬೇಕೆಂದು ಹೇಳಿದರು. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಮತ್ತು ರೀಫೈನಾನ್ಸಿಂಗ್ ಸ್ಟಾರ್ಟ್ ಮಾಡುತ್ತೀವೆಂದು ಒಂದು ಪತ್ರ ಬರೆದೆವು. ಅದು ಆದಮೇಲೆ ಮೊನ್ನೆ ಬಡ್ಜೆಟ್ ಸ್ಪೀಚ್ ಮೇಲೆ ತಾವೇನೂ ಹೇಳಿದ್ದೀರಿ. ನನಗನಿಸುತ್ತಿದೆ, ರೈತರ ಸಾಲದಲ್ಲಿ ಅವರು ಏನು ಇಂಟರೆಸ್ಟ್ ಕೊಡಬೇಕಾಗಿತ್ತೋ, ಅದರಲ್ಲಿ ಒಂದು ಭಾಗ ಸರ್ಕಾರ ತನ್ನ ಮೇಲೆ ಸರ್ಕಾರ ಜವಾಬ್ದಾರಿ ಹೊತ್ತುಕೊಳ್ಳುತ್ತದೆ. ಅಂದರೆ ಅದು ರೈತರ ಪರವಾದ ಕಾರ್ಯಕ್ರಮವೋ ಅಥವಾ ರೈತರ ದ್ರೋಹಿಯಾದ ಕಾರ್ಯಕ್ರಮವೋ ನೀವೇ ವಿಚಾರ ಮಾಡಿ. ನೀವು ಇದನ್ನು ಮಾಡಬೇಕೆಂದು ಹೇಳಿದಿರಿ, ಅದನ್ನು

ಮಾಡಿದೆವು. ಇದೊಂದೇ ಆಧಾರ ಇಟ್ಟುಕೊಂಡು ನಬಾರ್ಡ್‌ನವರಿಗೆ ಲೆಟರ್ ಬರೆದಿದ್ದರಿಂದ ನಮ್ಮ ರಾಜ್ಯ ಸರ್ಕಾರಕ್ಕೂ ನಬಾರ್ಡ್‌ಗೂ ಮಲ್ಲಯುದ್ಧ ನಡೆಯುತ್ತಿದೆ. ಇದು ನಮ್ಮ ಕಾಲದಿಂದ ಅಲ್ಲ, ನಿಮ್ಮ ಕಾಲದಿಂದಲೇ ಪ್ರಾರಂಭವಾದುದು. ಇದಕ್ಕೇನು ಪರಿಹಾರ ಮಾಡಬೇಕು ಅನ್ನುವುದನ್ನು ವಿಚಾರ ಮಾಡಬೇಕು. ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಕೇಂದ್ರದ ಹಣಕಾಸಿನ ಮಂತ್ರಿಗಳು ಹತ್ತು ಸಾವಿರ ರೂಪಾಯಿ ಸಾಲ ಇರುವಂಥಾ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅವರ ಮ್ಯಾನಿಫೆಸ್ಟೋದಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್ ಎಂದು ಮಾತ್ರ ಬರೆದಿದ್ದಾರೆ. ಆದರೆ ಮೊನ್ನೆ ಬಜೆಟ್ ಭಾಷಣದಲ್ಲಿ ಘೋಷಣೆ ಮಾಡಿದರು. "irrespective of the holdings" ಅಂದರೆ ನೂರಾರು ಎಕರೆ ಇರತಕ್ಕಂತಹ ಶ್ರೀಮಂತರಿರಲಿ, ೧೦ ಸಾವಿರ ಒಳಗಡೆ ಇರುವಂತಹ ಸಾಲವನ್ನು ಮಾಫಿ ಮಾಡುತ್ತೇವೆ ಎಂದು ಹೇಳಿದರು. ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಿಂದ, ಬ್ಯಾಂಕ್‌ನಿಂದ, ಪಬ್ಲಿಕ್ ಸೆಕ್ಟರ್ ಬ್ಯಾಂಕ್‌ನಿಂದ ತೆಗೆದುಕೊಂಡಂತಹ ಸಾಲ ಮಾತ್ರ ಮಾಫಿ. ರಾಜ್ಯ ಸರಕಾರ ಕೋ—ಅಪರೇಟೀವ್ ಬ್ಯಾಂಕ್‌ನ ಸಾಲವನ್ನು ಮಾಫಿ ಮಾಡುವುದರ ಬಗ್ಗೆ ಯೋಚನೆ ಮಾಡಿದರೆ ನಾವು ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. on the same pattern ಎಂದು ಹೇಳಿದ್ದಾರೆ ಅಷ್ಟೆ. ಅದರ ಬಗ್ಗೆ ಏನಿದೆ ಎಂಬುದನ್ನು ನಾನು ವಿಚಾರ ಮಾಡಿಲ್ಲ, ವಿಚಾರ ಮಾಡುತ್ತೇನೆ. ಇನ್ನು ಮುಂದೆ ಸಾಲವನ್ನು ಕೊಡುವ ಹಾಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ನಾನೇ ನಿಮ್ಮ ಮುಂದೆ ತರಬೇಕೆಂದಿದ್ದೆ. ಆದರೆ ಈ ಮಧ್ಯದಲ್ಲಿ ಗಮನ ಸೆಳೆಯುವ ಸೂಚನೆ ಬಂತು ಅನ್ನುವಂಥಾದ್ದು ಗೊತ್ತಾದ ಮೇಲೆ ಆಗಲೇ ಹೇಳೋಣವೆಂದು ಸುಮ್ಮನಿದ್ದೆ. ಮಾನ್ಯ ಸದಸ್ಯರುಗಳಿಗೆ ಕೂಡ ವಿಚಾರ ಗೊತ್ತಿರಬಹುದು. ಆಗಲೇ ಇದನ್ನು ಚರ್ಚೆ ಮಾಡೋಣವೆಂದು ನಾನು ಕಾಯುತ್ತಿದ್ದೆ. ನಾವು ಎರಡು ಕಡೆಯಿಂದ ನಬಾರ್ಡನ್ನು ಫೇಸ್ ಮಾಡಬೇಕಾಗಿದೆ. ಈ ಸಲ ೪೦ ಪರ್ಸೆಂಟ್ ರಿಕವರಿಗೆ ನಾವು ಮುಟ್ಟುವ ಹಾಗಿಲ್ಲ. ಇದನ್ನು ನೀವೂ ಕೂಡ ಒಪ್ಪುತ್ತೀರಿ. ೧೨-೧೫ ಪರ್ಸೆಂಟ್ ಮೇಲೆ ಬರುವುದಿಲ್ಲ. ೪೦ ಪರ್ಸೆಂಟ್ ಟಾರ್ಗೆಟ್ ಮುಟ್ಟುವ ಹಾಗೆ ಇಲ್ಲವೆಂದು ಗೊತ್ತಾದ ಮೇಲೆ ನಬಾರ್ಡ್‌ನ ನಿಯಮದ ಪ್ರಕಾರ ಮುಂದಿನ ವರ್ಷ ರೈತರಿಗೆ ಸಾಲ ಇಲ್ಲ. ಸಾಲ ಮನ್ನಾ ಮಾಡುವ ಪ್ರಶ್ನೆ ಇರಲಿ. ಮುಂದಿನ ವರ್ಷ ರೈತರಿಗೆ ಸಾಲ ಸಿಗುವ ಬಗ್ಗೆ ಪ್ರಯತ್ನ ಮಾಡೋಣ ಎಂದು ನಾನು ಹೋದ ಸಾರಿಯೇ ಹೇಳಿದ್ದೆ. ಈ ಸಲ ೪೦ ಪರ್ಸೆಂಟ್ ಟಾರ್ಗೆಟ್ ಅನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಕೇಂದ್ರದ ಹಣಕಾಸು ಸಚಿವರ ಮೇಲೆ ಪ್ರಭಾವ ಬೀರಿ ಅವರಿಂದ ರಿಸರ್ವ್ ಬ್ಯಾಂಕ್‌ಗೆ ಡೈರೆಕ್ಷನ್ ಕೊಡಿಸುವುದಕ್ಕೋಸ್ಕರ ಈ ಸದನದ ಸದಸ್ಯರ ಒಂದು ಡೆಲಿಗೇಷನ್ ಅನ್ನು ನನ್ನ ನಾಯಕತ್ವದಲ್ಲಿ ತೆಗೆದುಕೊಂಡು ದೆಹಲಿಗೆ ಹೋಗೋಣ ಎಂದು ನಾನು ವಿರೋಧಿ ಪಕ್ಷದ ನಾಯಕರು ಮತ್ತು ಸದಸ್ಯರಲ್ಲಿ ವಿನಂತಿ ಮಾಡಿಕೊಂಡೆ. ಆದರೆ ಆ ಕಾಲ ಇನ್ನೂ ಬಂದಿಲ್ಲ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರಿಂದ ಉತ್ತರ ಬಂತೇ ಹೊರತು ಹೋಗೋಣ ಎನ್ನುವುದು ಬರಲಿಲ್ಲ. ಸಾಲ ಮನ್ನಾದ ಬಗ್ಗೆ ಪರಿಶೀಲನೆ ಮಾಡೋಣ ಆದರೆ ಮುಂದಿನ ವರ್ಷದ ಸಾಲ ನಿಲ್ಲದಂತೆ ಕೇಂದ್ರ ಸರಕಾರದವರು ನಬಾರ್ಡ್‌ನವರಿಗೆ ಡೈರೆಕ್ಷನ್ ಕೊಡಬೇಕೆಂಬ ಬಗ್ಗೆ ಒತ್ತಾಯ ಮಾಡೋಣ ಬನ್ನಿ ಎಂದು ಹೇಳಿದೆವು. ಆದರೆ ಇಲ್ಲಿಯವರೆಗೂ ನಡೆಯಿರಿ ಒಟ್ಟಿಗೆ ಹೋಗಿ ಒತ್ತಾಯ ಮಾಡೋಣ ಎಂಬ ಮಾತು ವಿರೋಧ ಪಕ್ಷದವರಿಂದ ಬಂದಿಲ್ಲ. ಈ ಮಧ್ಯೆ ಇಂತಹ ಪರಿಸ್ಥಿತಿ ಉದ್ಭವವಾಗಿದೆ. ನೀವು ಸಬ್ಸಿಡಿ ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದೀರಿ. ಆದರೆ ಮುಂದಿನ ವರ್ಷ ರೈತರಿಗೆ ಸಾಲ ಕೊಡುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಈ ಎರಡು ಪ್ರಶ್ನೆಗಳು ನಮ್ಮ ಮುಂದೆ ಇವೆ. ರೈತರ ದೃಷ್ಟಿಯಿಂದ ಯಾವ ರೀತಿಯಾದ ಸಮಾಧಾನವನ್ನು ಹುಡುಕಬೇಕು ಎಂಬ ಪ್ರಶ್ನೆ ನಮ್ಮ ಮುಂದೆ ಈ ಸದನದ ಮುಂದೆ ಇದೆ. ಸರಕಾರದ ಮುಂದೆ ಇರುವಂತಹ ಪ್ರಶ್ನೆ ಇದು ಅಲ್ಲ. ಇಂಟರೆಸ್ಟ್ ಸಬ್ಸಿಡಿ ಎಂದು ಅನೌನ್ಸ್ ಮಾಡಿದರೆ ಸಾಲ ನಿಲ್ಲಿಸುತ್ತೇವೆಂದು ಅವರು ಹೇಳುತ್ತಾರೆ. ಪಬ್ಲಿಕ್ ಸೆಕ್ಟರ್ ಬ್ಯಾಂಕ್, ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಲ್ಲಿ ಯಾವ ದೊಡ್ಡ ಜಮೀನ್ದಾರನೇ ಸಾಲ ತೆಗೆದುಕೊಂಡಿರಲಿ ಹತ್ತು ಸಾವಿರ ರೂಪಾಯಿಗಳವರೆಗೆ ಮಾಫಿ ಮಾಡುತ್ತೇವೆಂದು ಹೇಳಿದ್ದಾರೆ. ನಬಾರ್ಡ್‌ನವರು ಕೇಂದ್ರ ಸರಕಾರಕ್ಕೆ ಬುದ್ಧಿ ಹೇಳುವಂತಹ ಶಕ್ತಿ ಇಲ್ಲ, ಅವರಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ನಮಗೆ ಹೇಳುತ್ತಾರೆಯೇ ಹೊರತು ಕೇಂದ್ರ ಸರ್ಕಾರಕ್ಕೆ ಹೇಳುವುದಕ್ಕಾಗುವುದಿಲ್ಲ. ಕೇಂದ್ರ/ ಸರಕಾರದ ವಿಂಗ್ ಅವರು. ಅವರು ಕೇಂದ್ರ ಸರಕಾರಕ್ಕೆ ಬುದ್ಧಿವಾದ ಹೇಳುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಏತಕ್ಕೆ ಇಷ್ಟು ಗಹನವಾಗಿ ಹೇಳುತ್ತಿದ್ದೇನೆಂದರೆ: ನಬಾರ್ಡ್‌ನವರು ಮುಂದಿನ ವರ್ಷ ನಮಗೆ ಹಣವನ್ನು ಕೊಡುವುದಿಲ್ಲ ಈ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರೆ ಹಿಂದಿನ ಸರ್ಕಾರದವರೂ ನಬಾರ್ಡ್‌ನವರಿಗೆ ಮಣಿದಿದ್ದಾರೆ, ನಾವೂ ಮಣಿಯಬೇಕಾಗುತ್ತದೆ. After all, what is NABARD ? A group of officers either sitting in Bangalore or Bombay cannot dictate to the representatives of the people.. the supreme body which represents four crore Kannadigas. ಈ ಒಂದು ನಿರ್ಣಯವನ್ನು ನಾವು ಮಾಡಬೇಕಾಗಿದೆ. ಇವತ್ತು ಇದೊಂದು ಜಟಿಲವಾದ ಪ್ರಶ್ನೆಯಾಗಿದೆ. ಇದನ್ನು ಯಾವರೀತಿ ನಾವು ಬಗೆಹರಿಸಿಕೊಳ್ಳಬೇಕು. ಹಿಂದೆ ನೀವು ಮಾಡಿದಂತೆ ನಾವು ಮಾಡಬೇಕೋ ಅಥವಾ ನಾವು ಇದನ್ನು ಏನೇ ಆದರೂ ಎದುರಿಸುತ್ತೇವೆ ಎಂದು ಪಕ್ಷಭೇದವನ್ನು ಮರೆತು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ನಬಾರ್ಡ್‌ನವರು ತಪ್ಪು ಮಾಡುತ್ತಿದ್ದಾರೆ, ಇದನ್ನು ಮಾಡಬೇಡಿ ಎಂದು ಅವರಿಗೆ ಹೇಳಿ ಎಂದು ಕೇಂದ್ರಕ್ಕೆ ಹೇಳಬೇಕೋ ನೀವೇ ಹೇಳಿ ಈ ಪ್ರಶ್ನೆ ಇವತ್ತು ನಮ್ಮ ಮುಂದಿದೆ ಆದ್ದರಿಂದ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ನೀವು ನನ್ನ ಜೊತೆ ದೆಹಲಿಗೆ ಬರುತ್ತೀರೋ ಇಲ್ಲವೋ ಅದು ಬೇರೆ. ರೈತರ ಪ್ರತಿನಿಧಿಗಳಾಗಿ ನೀವು ಏನು ಹೇಳುತ್ತೀರೋ ಅದಕ್ಕಿಂತಲೂ ಹೆಚ್ಚಿಗೆ ಹೇಳತಕ್ಕ ಅಧಿಕಾರ ಮುಖ್ಯಮಂತ್ರಿಯಾದ ನನಗಿದೆ. ರೈತರ ಹಿತರಕ್ಷಣೆಯನ್ನು ಮಾಡತಕ್ಕ ಹೆಚ್ಚಿನ ಜವಾಬ್ದಾರಿ ನನಗಿದೆ. ರೈತರು ಇವತ್ತು ಈ ಒಂದು ಅಧಿಕಾರಕ್ಕೆ ನಮ್ಮನ್ನು ತಂದು ಕೂಡಿಸಿದ್ದಾರೆ. ಕೇಂದ್ರದಲ್ಲಿರತಕ್ಕ ಹಣಕಾಸಿನ ಮಂತ್ರಿಗಳನ್ನು ಭೇಟಿಮಾಡಿ ನಬಾರ್ಡ್‌ನವರು ಈ ರೀತಿ ಹುಡುಗಾಟಿಕೆಯನ್ನು ಮಾಡುತ್ತಿದ್ದಾರೆ, ಇದರಿಂದ ನಮ್ಮ ರೈತರಿಗೆ ತೊಂದರೆಯಾಗುತ್ತಿದೆ, ಇದಕ್ಕೆ ತಾವು ಅವಕಾಶ ಕೊಡಬೇಡಿ. ಹಿಂದಿನಂತೆ ರೀ ಫೈನಾನ್ಸಿಂಗ್ ವ್ಯವಸ್ಥೆ ಮಾಡುವಂತೆ ಒತ್ತಾಯವನ್ನು ನಬಾರ್ಡ್‌ನವರ ಮೇಲೆ ಹಾಕಿಸಲು ನಾವೂ ನಿಮ್ಮ ಜೊತೆ ಬರುತ್ತೇವೆಂದು ಹೇಳುವುದಾದರೆ ನಾನೂ ಕೂಡ ನಿಮ್ಮ ಜೊತೆ ಬರುತ್ತೇನೆ. ಒಂದು ವೇಳೆ ನೀವು ಬರದಿದ್ದರೆ ನಾನೇ ಸ್ವತಃ ಒಂದು ನಿರ್ಣಯವನ್ನು ಮಾಡಿದ್ದೇನೆ. ನಾಳೆ ಏಪ್ರಿಲ್ ತಿಂಗಳಲ್ಲಿ ನಾನು ಹೋಗುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಮಾನ್ಯ ಕೇಂದ್ರದ ಹಣಕಾಸಿನ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ನೀವು ಇದೇ ನೀತಿಯನ್ನು ಮುಂದುವರಿಸಿಕೊಂಡು ಹೋದರೆ ನಮ್ಮ ರೈತರಿಗೆ ತೊಂದರೆಯಾಗುತ್ತದೆ. ಕರ್ನಾಟಕದ ಜನರು ಈಗ ಎಚ್ಚೆತ್ತಿದ್ದಾರೆ ರೈತರು ಎಚ್ಚೆತ್ತಿದ್ದಾರೆ ಎನ್ನತಕ್ಕ ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ. ಈ ಮಾತನ್ನು ಕೇಂದ್ರ ಸರ್ಕಾರದ ಮಂತ್ರಿಗಳ ಗಮನಕ್ಕೆ ನಾನು ತರುತ್ತಿದ್ದೇನೆ. ಇನ್ನು ಕೆಲವೇ ದಿವಸಗಳಲ್ಲಿ ನಾವು ನಬಾರ್ಡ್‌ನ ಮುಂದೆ ಹಣವನ್ನು ತರುವುದಕ್ಕೆ ಹೋಗಬೇಕಾಗಿದೆ. ಈ ಒಂದು ಗಂಭೀರ ಪರಿಸ್ಥಿತಿ ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿಂದೆಯೇ ನಾನು ಎಲ್ಲ ಪಕ್ಷಗಳ ಡೆಲಿಗೇಷನ್ನನ್ನು ತೆಗೆದುಕೊಂಡು ಕೇಂದ್ರಕ್ಕೆ ಹೋಗೋಣ ಎಂದು ಹೇಳಿದ್ದೇನೆ. ಆದ್ದರಿಂದ ಎಲ್ಲ ಪಕ್ಷಗಳ ಸದಸ್ಯರೂ ಇವತ್ತು ಪಕ್ಷಭೇದವನ್ನು ಮರೆತು ಒಟ್ಟಿಗೇ ದೆಹಲಿಗೆ ಹೋಗಿ ಅವರಮೇಲೆ ನಮ್ಮ ಪ್ರಭಾವವನ್ನು ಬೀರಿ ನಬಾರ್ಡಿನಿಂದ ಹಣ ಪಡೆಯಲು ಸಹಕರಿಸುತ್ತೀರೆಂದು ನಂಬಿಕೆ ಇಟ್ಟುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈ ವಿಷಯದ ಮಹತ್ವವನ್ನು ಅರಿತು ಇದನ್ನು ಕೇವಲ ಗಮನ ಸೆಳೆಯುವ ಸೂಚನೆಯನ್ನಾಗಿಯೇ ಸ್ವೀಕರಿಸದೆ ಎಲ್ಲ ಮಾನ್ಯ ಸದಸ್ಯರೂ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತ ಮಾಡುವುದಕ್ಕೆ ನಾನು ಅವಕಾಶವನ್ನು ಮಾಡಿಕೊಟ್ಟಿದ್ದೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).— ಮಾನ್ಯ ಸಭಾಧ್ಯಕ್ಷರೇ, ಹಿಂದೆ ನಾನು ಒಂದು ಮಾತನ್ನು ಹೇಳಿದ್ದೆ. ಅದೇನೆಂದರೆ, ರೈತರಿಗೆ ಸಹಾಯವಾಗಬೇಕೆಂದಿದ್ದರೆ ನೀವು ನನ್ನನ್ನು ನರಕಕ್ಕೆ ಕರೆದರೂ ಬರುತ್ತೇನೆ, ಅಂತ ಅಂದರೆ ಸ್ವರ್ಗಕ್ಕಲ್ಲ, ನರಕಕ್ಕೆ ಕರೆದರೂ ಬರುತ್ತೇನೆ ಎಂದು ಹೇಳಿದ್ದೇನೆ....

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.— ಅಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನು ನರಕಕ್ಕೆ ಕರೆದಿದ್ದಾರೇನು ?.

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿರತಕ್ಕಂಥಾದ್ದರ ಬಗ್ಗೆ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಲೋಕ ಸಭೆಯ ಸದಸ್ಯರಾಗಿದ್ದರು. ನಾನು ರಾಜ್ಯ ಸಭೆಯ ಸದಸ್ಯನಾಗಿದ್ದೆ. ಇಬ್ಬರಿಗೂ ಡೆಲ್ಲಿಯಲ್ಲಿ ಕೆಲಸ ಮಾಡಿದ ಅನುಭವ ಇದೆ. ಈ ವಿಚಾರ ಇಂದಿನದಲ್ಲ ಎನ್ನುವ ವಿಚಾರವನ್ನು ಅವರು ಒಪ್ಪಿಕೊಂಡಿದ್ದಾರೆ. ಹಿಂದೆ ಇಂಥದೇ ಸಂಕಟ ಬಂದಾಗ ಕೂಡ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಅವರನ್ನು ಕರೆದು ಮಾತನಾಡಿದ್ದಾರೆ. ಇವತ್ತು ತಮ್ಮ ಭಾಷೆಯಲ್ಲಿ ಇದ್ದ ಗಡಸು ಅವತ್ತು ಇದ್ದಿದ್ದರೆ ಈ ರೀತಿ ಸಮಸ್ಯೆ ಬರುತ್ತಲೇ ಇರಲಿಲ್ಲ.

ಶ್ರೀ ವೀರೇಂದ್ರಪಾಟೀಲ್.— ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು ಹಿಂದಿನ ಮುಖ್ಯಮಂತ್ರಿಗಳು ಇದರ ಬಗ್ಗೆ ನನ್ನ ಜೊತೆಯಲ್ಲಿಯಾಗಲಿ ನಮ್ಮ ಪಕ್ಷದ ಪಾರ್ಲಿಮೆಂಟ್ ಸದಸ್ಯರ ಜೊತೆಯಲ್ಲಿಯಾಗಲಿ ನನಗೆ ತಿಳಿದಮಟ್ಟಿಗೆ ಪ್ರಸ್ತಾಪ ಮಾಡಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾಡಿದ್ದಾರೆ, ನಾನೂ ಇದ್ದೆ. ತಾವು ಬಂದಿದ್ದಿರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ವಿಷಯದ ಬಗ್ಗೆ ಡೆಲ್ಲಿಯಲ್ಲಿ ಸಂಸತ್ತಿನ ಸದಸ್ಯರನ್ನು ಕರೆದು ಹಿಂದಿನ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಅದಕ್ಕಾಗಿ ಹೇಳಿದೆ, ಸಂಸತ್ತಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನೇ ರಾಜ್ಯಸಭೆಯಲ್ಲಿ ನಬಾರ್ಡ್ ಆಟಿಟ್ಯೂಡ್ ಏನಾಗಿದೆ ಎನ್ನತಕ್ಕಂಥದನ್ನು ಪ್ರಸ್ತಾಪ ಮಾಡಿದ್ದೇನೆ, ಲೋಕಸಭೆಯಲ್ಲಿ ಕೂಡ ಪ್ರಸ್ತಾಪ ಬಂದಿತ್ತು. ಆಗ ತಾವು ಈವತ್ತಿನ ಭಾಷೆಯ ಒಂದು ಗಡಸು ಪದವನ್ನು ಅಲ್ಲಿ ಬಳಸಿದ್ದಿದ್ದರೆ ನಬಾರ್ಡ್‌ನವರು ಈ ರೀತಿ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬಹಳ ಮುಖ್ಯವಾಗಿ ಗಮನಿಸಬೇಕಾದುದು ಏತಕ್ಕೆಂದರೆ. ಈ ಮಾತನ್ನು ತಾವೂ ಕೂಡ ಒಪ್ಪಿಕೊಂಡಿದ್ದೀರಿ. ಹಿಂದಿನ ಸರ್ಕಾರಕ್ಕೂ ಕೂಡ ಇಂಥದೆ ತೊಂದರೆ ಇತ್ತು ಎಂಬ ಮಾತನ್ನು ತಾವು ಒಪ್ಪಿಕೊಳ್ಳುತ್ತಾ, ಇವತ್ತು ನಮ್ಮ ಮೇಲೆ ಹೊರೆಯನ್ನು ಹಾಕುತ್ತಿದ್ದೀರಿ. ಹಿಂದಿನ ಸರ್ಕಾರ ಏನು ಮಾಡಿದ್ದರು ಬಿಟ್ಟಿದ್ದರು ಅದು ಬೇಕಾಗಿಲ್ಲ. ಇಲ್ಲಿ ಆಡಳಿತ ಕೌಶಲ್ಯದಲ್ಲಿ ಕೆಲವು ಸೂಕ್ಷ್ಮತೆಗಳು ಇರುತ್ತವೆ. ಆದ್ದರಿಂದ ಆ ಕಾಲಕ್ಕೆ ಪತ್ರ ಬರೆದಿದ್ದರೆ ಹೊರತು ಆದೇಶವನ್ನು ಹಿಂದಕ್ಕೆ ತೆಗೆದುಕೊಂಡಿರಲಿಲ್ಲ ನೀವು ಒಂದು ವರ್ಷವಾದ ಮೇಲೆ ನಿಮ್ಮ ಸರ್ಕಾರ ಬಂದಮೇಲೆ ಏನಾದರೂ ಪ್ರಯತ್ನ ಮಾಡೋಣವೆಂದು ನೇರವಾಗಿ ಜನವರಿ ೧೧ರಂದು ಆರ್ಡರ್ಸ್‌ನ್ನು ಹೊರಡಿಸಿಬಿಟ್ಟಿರಿ. ಮತ್ತೆ ಈ ಮಧ್ಯೆ ತಾವು ಏನಾದರೂ ಚರ್ಚೆಮಾಡಿದ್ದೀರಾ ? ನಬಾರ್ಡ್ ಸಂಸ್ಥೆಯ ಜೊತೆಯಲ್ಲಿ ಚರ್ಚೆ ಮಾಡಿರುವ ಬಗ್ಗೆ ಒಂದು ವಿವರವಿಲ್ಲ. ತಾವು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಇನ್ನು ಮುಂದಿನ ವರ್ಷದಿಂದ ಸಾಲ ಕೊಡತಕ್ಕಂಥ ವ್ಯವಸ್ಥೆ ಆಗುವುದಿಲ್ಲವೆನ್ನುವುದು ನಮಗೆ ತಿಳಿಯುತ್ತದೆ. ನಮಗೂ ಗೊತ್ತಾಗುತ್ತದೆ. ನಿಮ್ಮ ಆಡಳಿತ ಕೌಶಲ್ಯ ಬಳಸಿ ಇಂಥದನ್ನು ಪರಿಹರಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ? ನಮ್ಮಲ್ಲಿ ಇಂಥ ಪ್ರಯತ್ನ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಡೆಯಿರಿ ಹೋಗೋಣ. ಸಂಸತ್ ಸಲಹೆ ತೆಗೆದುಕೊಳ್ಳೋಣವೆಂದು ಇಡೀ ಸದನದ ಅಭಿಪ್ರಾಯವನ್ನು ತೆಗೆದುಕೊಂಡು ನಡೆದಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಮಾತನಾಡಿದರೆ ಸಾಕು ಕೇಂದ್ರ ಕೊಟ್ಟರೆ ಕೊಡುತ್ತೇವೆಂದು ಹೇಳುವುದು ಸರಿಯಲ್ಲ. ಇಂಥ ಸಮಸ್ಯೆ ಬಂದಾಗ ಹಿಂದಿನ ಸರ್ಕಾರದವರು ಕರೆದುಕೊಂಡು ಹೋಗುತ್ತಿದ್ದರು. ನೀವು ಏನು ಮಾಡಿದ್ದೀರಿ ? ನಬಾರ್ಡ್ ಸಂಸ್ಥೆಯವರ ಮೇಲೆ ಆರೋಪ ಈಗ ಮಾಡಿದ್ದಲ್ಲ. ಹಿಂದೆಯೂ ಕೂಡ ಮಾಡಿತ್ತು. ಹಿಂದಿನಿಂದಲೂ ಇದು ನಡೆದುಕೊಂಡು ಬಂದಿದೆ. ಆರು ವರ್ಷಗಳ ಕಾಲ ಹಿಂದಿನ ಸರ್ಕಾರದವರು ಅವರ ಜೊತೆಯಲ್ಲಿ ವ್ಯವಹರಿಸಿಕೊಂಡು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದರೋ ಅಂಥ ಪ್ರಯತ್ನವನ್ನೇನಾದರೂ ನೀವು ಮಾಡಿದ್ದೀರಾ ? ನಬಾರ್ಡ್ ಸಂಸ್ಥೆಯ ಬಗ್ಗೆ ಶಾಸನ ಸಭೆಯಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಏಕಾಂತಯ್ಯನವರಿಗೆ ಏತಕ್ಕೆ ಕೋಪ ಬಂದಿತು ಎಂದರೆ, ನೀವು ಏನು ನಬಾರ್ಡ್ ಸಂಸ್ಥೆ ಬಗ್ಗೆ ಅಭಿಪ್ರಾಯವನ್ನು ವ್ಯಕ್ತ ಮಾಡಿದಿರೋ ಆ ಅಭಿಪ್ರಾಯಕ್ಕೆ ನಾವು ವಿರುದ್ಧವಾಗಿಲ್ಲ. ಒಬ್ಬ ಅಧಿಕಾರಿ ಒಬ್ಬ ರಾಜ್ಯದ ಮುಖ್ಯಮಂತ್ರಿಗೆ, ಈ ಸದನಕ್ಕೆ ಅಗೌರವ ತರತಕ್ಕಂಥ ರೀತಿಯಲ್ಲಿ ಪ್ರಾರಂಭಿಕವಾಗಿ ಪ್ರಶ್ನೆ ಮಾಡಿದರೆ ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗ ಇರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಇರಲೇಬೇಕೆಂದಿಲ್ಲ. ಯಾರಾದರೂ ಹೇಳಬಹುದಾಗಿತ್ತು ಸ್ವಾಮಿ, ತಮಗೆ, ನಬಾರ್ಡ್‌ನವರಿಗೆ, ಕೇಂದ್ರ ಸರ್ಕಾರಕ್ಕೆ ಬುದ್ಧಿ ಹೇಳತಕ್ಕಂಥ ಸಾಮರ್ಥ್ಯವಿಲ್ಲ. ಅಥವಾ ಬುದ್ಧಿ ಹೇಳುವುದಿಲ್ಲವೆಂದರೆ ಕೇಂದ್ರ ಸರ್ಕಾರ ನಬಾರ್ಡ್‌ನವರಿಗೆ ಹೇಳುವುದಿಲ್ಲ. ನಬಾರ್ಡ್‌ನವರು ಕೇಂದ್ರ ಸರ್ಕಾರಕ್ಕೆ ಹೇಳುವುದಿಲ್ಲ. ಇದು ತಮಗೆ ಇವತ್ತು ಗೊತ್ತಾಯಿತೆ. ಹಿಂದಿನ ವ್ಯವಹಾರಗಳನ್ನು ನಾವು ನೋಡಿದ್ದೇವೆ. ಇವತ್ತು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ಹಿಂದಿನ ಸರ್ಕಾರ ಮಣಿಯಿತು ಎಂದರೆ ಆಡಳಿತ ಸೂಕ್ಷ್ಮತೆಯಿಂದಾಗಿ ಮಣಿಯಿತು ಯಾವರೀತಿ ವ್ಯವಹಾರವನ್ನು ನಡೆಸಿಕೊಂಡು ಹೋಗಬೇಕು ಎನ್ನುವುದಕ್ಕಾಗಿ ಕಾಗದವನ್ನು ಬರೆದರು. ನೀವು ಸುಮ್ಮನೆ ಕುಳಿತುಕೊಂಡು ಆರ್ಡರ್ಸ್‌ನ್ನು ಹೊರಡಿಸಿಬಿಟ್ಟರೆ ನಿಮ್ಮಿಂದ ಅಂಥ ಕೆಲಸವಾಗುವುದಿಲ್ಲ. ಆಮೇಲೆ ಹೇಳುತ್ತೀರಿ ಸಂಖ್ಯಾ ಆಧಾರವೆಂದು ನೀವೇ ರೈತರ ಪ್ರತಿನಿಧಿಗಳು ನೀವೇ ಏಕಮೇವಾ ದ್ವಿತೀಯ ರೈತ ಪ್ರತಿನಿಧಿಗಳು ಎಂದು ಹೇಳಿಕೊಂಡಿದ್ದೀರಿ. ನಿಮ್ಮ ಸಂಖ್ಯೆಯ ಆಧಾರದ ಮೇಲೆ ನೀವೇ ರೈತರ ಪ್ರತಿನಿಧಿಗಳೆಂದು ಈ ದೇಶದ ಜನ ತೀರ್ಮಾನ ಮಾಡಿದ್ದಾರೆನ್ನುವುದು ನಮಗೂ ಗೊತ್ತಿದೆ. ೧೦೦ಕ್ಕೆ ೪೨ ಮತಗಳು ನಿಮಗೆ ಬಂದಿರುವುದು, ಉಳಿದ ೫೮ ಮತಗಳು ಯಾರ ವಿರುದ್ಧ ಇವೆ ಎನ್ನುವುದನ್ನು ಲೆಕ್ಕ ಮಾಡೋಣ. ಆ ಅವಕಾಶ ಬಂದರೆ ಮಾಡೋಣ.

೧೨-೧೦ ಪಿ.ಎಂ.

ಆದರೆ ಇವತ್ತು ಮುಖ್ಯವಾಗಿ ಇರತಕ್ಕದ್ದು ಸಹಕಾರಿ ಸಾಲದ ಬಗ್ಗೆ ನಾವು ಶೇಕಡ ೪೦ರಷ್ಟು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇದನ್ನು ನೀವು ಪುನರ್‌ವಿಮರ್ಶೆ ಮಾಡಬೇಕು ನಾನು ನಿಮ್ಮನ್ನು ನೇರವಾಗಿ ಕೇಳುತ್ತೇನೆ. ನೀವು ಏನು ಮಾಡಿದ್ದೀರಿ? ನೀವು ಏನು ಮಾಡುತ್ತೀರೋ ಮಾಡಿ ನಮ್ಮಿಂದ ಸಾಧ್ಯವಾಗಿಲ್ಲ ಅಂದಾಗ ನಮ್ಮ ಸಹಾಯ ಬೇಕೆಂದರೆ. ಸಹಕರಿಸಿ ಅಂದರೆ ಹಿಂದೆಯೂ ಹೇಳಿದ್ದೇವೆ. ಇಂದೂ ಹೇಳುತ್ತೇವೆ. ಮುಂದೆಯೂ ಹೇಳುತ್ತೇವೆ. ನಮ್ಮ ಸಹಕಾರ ಸರ್ವದಾ ನಿಮ್ಮ ಜೊತೆಗೆ ಇದೆ. ನೀವು ಮಾಡಿದ ಹಾಗೆ ರಾಜಕಾರಣ ಮಾಡುವುದಕ್ಕೆ ಹೋಗದೆ ಕೇಂದ್ರ ಸರ್ಕಾರದ ಜೊತೆ ಯಾವ ರೀತಿ ಕಾರ್ಯಕ್ರಮ ಮಾಡಬೇಕೆಂದರೂ ಮಾಡುವುದಕ್ಕೆ ಸಿದ್ಧವಿದ್ದೇವೆ. ಇದರಲ್ಲಿ ರಾಜಕೀಯದ ವಿಷವನ್ನು ಬೆರಸಬೇಡಿ. ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ ಮಾಡುವುದೂ ಇಲ್ಲ. ದಯಮಾಡಿ ಇದನ್ನು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಹೆಚ್. **ಏಕಾಂತಯ್ಯ**—ಮಾನ್ಯ ಅಧ್ಯಕ್ಷರೆ ಇಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಒಂದು ವಿಚಾರದಲ್ಲಿ ಮುಖ್ಯಮಂತ್ರಿಗಳೊಂದಿಗೆ ಭಿನ್ನಾಭಿಪ್ರಾಯವಿಲ್ಲ. ರೈತರಿಗೆ ಸಾಲ ಒದಗಿಸಬೇಕು ಅದಕ್ಕೆ ನಬಾರ್ಡ್‌ನವರು ಅಡ್ಡ ಬಂದಿದ್ದಾರೆ. ಆ ಅಡಚಣೆಯನ್ನು ನಿವಾರಣೆ ಮಾಡುವುದಕ್ಕೆ ವಿರೋಧ ಪಕ್ಷದವರ ಸಹಕಾರ ಬೇಕೆಂದರೆ ನಾವು ಅವರಿಗಿಂತ ಮುಂದಿರುತ್ತೇವೆ ಅದೇ ಸದುದ್ದೇಶದಿಂದ ಇದನ್ನು ಪ್ರಸ್ತಾಪ ಮಾಡಿದೆ. ಈ ಒಂದು ಹಿನ್ನೆಲೆಯಲ್ಲಿ ಸ್ವಲ್ಪ ಕೋಪ ಬಂದಿರಬಹುದು, ಸಾಮಾನ್ಯವಾಗಿ ರೈತರ ಹಿತದೃಷ್ಟಿಯಿಂದ ಪ್ರಸ್ತಾಪ ಮಾಡಿದಾಗ ಅಸಡ್ಡೆ ತೋರಿದರೆ ಯಾವುದೇ ಮನುಷ್ಯರಿಗೆ ಕಳಕಳಿ ಇದ್ದರೆ ಸಿಟ್ಟು ಬರುವುದು ಸ್ವಾಭಾವಿಕ. ಅದಕ್ಕೆ ವಿಶೇಷ ಅರ್ಥವನ್ನು ತಾವು ಕೊಡುವುದಿಲ್ಲವೆಂದು ನನ್ನ ಭಾವನೆ. ನಬಾರ್ಡ್‌ನವರಿಗೆ ೧೯೮೩—೮೪ರಿಂದ ಪದೇ ಪದೇ ಪತ್ರಗಳನ್ನು ಬರೆಯುತ್ತಿದ್ದೆವು. ಕಳೆದ ಮಾರ್ಚ್ ೨೮ ಅಥವಾ ೨೯ರಂದು ಮಾನ್ಯ ಬೊಮ್ಮಾಯಿಯವರೂ ಕೂಡ ಒಂದು ಪತ್ರ ಬರೆದಿದ್ದಾರೆಂದು ಹೇಳುತ್ತೇನೆ, ಮಾನ್ಯ ರಾಮಕೃಷ್ಣಹೆಗಡೆಯವರು ಕೂಡ ಪತ್ರಬರೆದಿದ್ದರು. ಮಾನ್ಯ ಜಾಲಪ್ಪನವರು ಚರ್ಚೆ ಮಾಡಿದ್ದಾರೆ ೧೯೮೩-೮೪ರಿಂದ ಬಡ್ಡಿ ರಿಯಾಯಿತಿ ಯೋಜನೆಯನ್ನು ತಂದಾಗಿನಿಂದ ನಬಾರ್ಡ್‌ನವರ ಹಿಂಸೆಯನ್ನು ಅನುಭವಿಸಿದ್ದೇವೆ. ಪತ್ರದಲ್ಲಿ ಮಾತ್ರ ವ್ಯವಹಾರ ಮಾಡುತ್ತೇವೆಂದು ಹೇಳಿದ್ದರು ಬಡ್ಡಿ ರಿಯಾಯಿತಿ ಆಜ್ಞೆಯನ್ನು ವಾಪಸ್ಸು ಪಡೆದಿರಲಿಲ್ಲ. ಆದುದರಿಂದ ಮುಖ್ಯ ಮಂತ್ರಿಗಳಾಗಲಿ, ಸರ್ಕಾರವಾಗಲಿ ಮಣಿಯಬೇಕೆಂದು ಇಚ್ಛೆಯಲ್ಲ ಕೆಲಸ ನಿರ್ವಹಿಸುವುದಕ್ಕೆ ಬಡ್ಡಿ ರಿಯಾಯಿತಿ ಕೊಡಬೇಕೆಂಬುದು ನಮ್ಮ ಆಗ್ರಹ. ಸಣ್ಣ ರೈತರು ಇರಬಹುದು, ಅತಿ ಸಣ್ಣ ರೈತರು ಇರಬಹುದು. ಅವರಿಗೆ ಅನುಕೂಲವಾಗುವ ಯೋಜನೆಯನ್ನು ತರುವುದಾದರೆ ಖಂಡಿತವಾಗಿ ನಾವು ಅವರ ಜೊತೆ ಇರುತ್ತೇವೆ ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಆದರೆ ಸಾಲ ಮನ್ನಾ ಮಾಡುತ್ತೇವೆಂಬ ವಿಚಾರ ಬರಲಿಲ್ಲ. ಆದರೆ ರೈತರಿಗೆ ಸಾಲ ಮನ್ನಾ ಮಾಡದಿದ್ದರೂ ಬೇರೆ ರೀತಿ ರಿಯಾಯಿತಿಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆಯೋ ? ಅಂಥ ರಿಯಾಯಿತಿಗಳನ್ನು ಯಾವ ಯಾವ ರೈತರಿಗೆ ಸರ್ಕಾರ ಕೊಡುತ್ತದೆ ? ಉಳಿದ ರಿಯಾಯಿತಿಗಳನ್ನು ಕೇಂದ್ರ ಸರ್ಕಾರದಿಂದ ಪ್ರಯತ್ನ ಮಾಡಿ ಎಂದರೆ ಖಂಡಿತವಾಗಿ ನಾವು ಅವರ ಜೊತೆ ಇರುತ್ತೇವೆ. ಇವತ್ತಿನ ದಿವಸ ರೈತರಿಗೆ ಶೇಕಡ ೪೦ರಷ್ಟು ರೆಕವರಿ ಮಾಡಿರದೆ ಇರಬಹುದು. ಆದುದರಿಂದ ಸರ್ಕಾರಕ್ಕೆ ಬರತಕ್ಕ ಅಡಚಣೆಗಳನ್ನು ನಿವಾರಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ವತಿಯಿಂದ ಸಹಾಯ ಮಾಡಲಿಕ್ಕೆ ತಯಾರಾಗಿದ್ದೇವೆ ಇದರಲ್ಲಿ ನಾನು ಹೇಳಿದ ಪ್ರಕಾರ ಕೇವಲ ಕೇಂದ್ರ ಸರ್ಕಾರವನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಏತಕ್ಕೆಂದರೆ, ನಬಾರ್ಡ್ ಕೇಂದ್ರಸರ್ಕಾರದ ಒಂದು ಅಂಗವಾಗಿದೆ. ಹಿಂದೆಯೂ ಅದೇ ಆಗಿತ್ತು. ಅವರ ಸರ್ಕಾರ ಇದ್ದಾಗಲೂ ಅದೇ ಆಗಿತ್ತು. ೧೯೮೩—೮೪ ರಿಂದ ಇವರ ಸರ್ಕಾರ ಬರುವವರೆಗೂ ಕಹಿ ಅನುಭವವನ್ನು ನಾವು ಪಟ್ಟಿದ್ದೇವೆ. ಆದರೂ ಕೂಡ ರೈತರಿಗೆ ಬಡ್ಡಿ ರಿಯಾಯಿತಿ ಕೊಡಬೇಕೆಂದು ನಮಗೆ ಮನಸ್ಸು ಇದ್ದುದರಿಂದ, ಆ ಒಂದು ಇಚ್ಛಾಶಕ್ತಿ ಇದ್ದುದರಿಂದ ನಾವು ಈ ಕೆಲಸ ಮಾಡಿದ್ದೇವೆ ಅದೇರೀತಿ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಆಗ್ರಹ ಪಡಿಸುತ್ತೇನೆ. ನಬಾರ್ಡ್‌ನವರ ಜೊತೆ ಹೋರಾಟ ಮಾಡಿದರೆ ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ ಎಂದು ಹೇಳುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ಯಾರೇ ಆಗಿರಲಿ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ನಬಾರ್ಡ್ ಅಧಿಕಾರಿ ಕ್ರಮರಹಿತವಾಗಿ ನಡೆದುಕೊಂಡಿದ್ದಾರೆ ಎಂದು ನಾನೂ ಹೇಳುತ್ತೇನೆ. ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾವು ಪತ್ರ ಬರೆಯುತ್ತೇವೆ, ಗಲಾಟೆ ಮಾಡುತ್ತೇವೆ ಎಂದು ಸುಮ್ಮನೆ ಆಗುವುದಾದರೆ ಇನ್ನೊಂದು ದಿವಸ ಇದೇರೀತಿ ಪತ್ರ ಬರೆಯುತ್ತಾರೆ. ಇದು ಪುನರಾವರ್ತನೆಯಾಗುತ್ತದೆ. ರಾಜ್ಯದ ಅಧಿಕಾರಿಯಾಗಿರಬಹುದು, ಕೇಂದ್ರದ ಅಧಿಕಾರಿಯಾಗಿರಬಹುದು ಜನತೆಯ ಪ್ರತಿನಿಧಿಗಳಿಗೆ ಈ ರೀತಿ ಅಗೌರವ ತೋರಿಸು

ಬಾರದು. ನಾಳೆ ಸಬ್ಸಿಡಿ ಸ್ಕೀಂ ತರುತ್ತೇವೆ, ಎಂದು ಹೇಳಿದರೆ ಅದಕ್ಕೆ ಹಣ ಕೊಡುವುದನ್ನು ನಿಲ್ಲಿಸುತ್ತೇವೆ ಎಂದು ಅವರು ಹೇಳಿದರೆ ಅದನ್ನು ಯಾರೂ ಕೂಡ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಮಾನ್ಯ ಮುಖ್ಯಮಂತ್ರಿಗಳು ನಬಾರ್ಡ್‌ನಿಂದ ಪುನರ್‌ಧನ ಪಡೆಯುವ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಮ್ಮ ಸಹಕಾರ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಗಹನವಾದ ವಿಚಾರವನ್ನು ನಮ್ಮ ಮುಂದಿಟ್ಟು ಬಹಳ ಚೆನ್ನಾಗಿ ಭಾಷಣ ಮಾಡಿದ್ದಾರೆ, ಆದರೆ ನಬಾರ್ಡ್‌ನವರ ಇವತ್ತಿನ ಧೋರಣೆಗೆ ದುರಾದೃಷ್ಟವಶಾತ್ ಹಿಂದಿನ ಕೇಂದ್ರಸರ್ಕಾರವೇ ಕಾರಣ. ಕರ್ನಾಟಕ, ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ಬಡ್ಡಿ ರಿಯಾಯಿತಿ ಮತ್ತು ಹಲವು ಕಡೆ ಅಸಲು ಬಿಡುವುದು ಮಾಡಿದಾಗ ನಬಾರ್ಡ್ ಮೇಲೆ ಬಹಳ ಒತ್ತಡ ತಂದು ನಾವು ಬಡ್ಡಿ ರಿಯಾಯಿತಿ ಕೊಟ್ಟರೆ ಮುಂದೆ ಸಾಲ ಕೊಡುವುದಿಲ್ಲ ಎಂದು ನಮಗೆ ಪತ್ರ ಬರೆಸಿದ್ದಾರೆ. ಬೆಂಗಳೂರಿನಲ್ಲಿರುವ ಒಬ್ಬ ಅಧಿಕಾರಿ ಕಾಗದ ಬರೆದರೆ ಅದು ಫೈನಲ್ ಅಥಾರಿಟಿ ಅಲ್ಲ. ಮೂರು ತಿಂಗಳಿಂದ ಈ ಸಮಸ್ಯೆ ಬಂದಿದೆಯಲ್ಲ, ನೀವು ಏನು ಪ್ರಯತ್ನ ಪಟ್ಟಿದ್ದೀರಿ ? ನಾನು ಮಂತ್ರಿಯಾಗಿದ್ದಾಗ ಮಂತ್ರಿ ಎಂಬುದನ್ನೂ ಮರೆತು ಅವರ ಮನೆ ಮುಂದೆ ಕೂತ್ಕೊಂಡು ಅವರ ಆಫೀಸಿನಲ್ಲಿ ಕೂತ್ಕೊಂಡು ಕೆಲಸ ಮಾಡಿಸಿದ್ದೇನೆ. ತಾವೇನು ಮಾಡಿದ್ದೀರಿ? ನಾನು ಬಜೆಟ್ ಮೇಲೆ ಭಾಷಣ ಮಾಡಿದಾಗಲೂ ಹೇಳಿದೆ, ನೀವು ಬುದ್ಧಿವಂತರಾಗಿದ್ದೀರಿ, ನಿಮ್ಮಲ್ಲಿ ಯಾರಾದರೂ ಹೋಗಿ ಕೂತ್ಕೊಂಡು ಅವರನ್ನು ಕನ್‌ವಿನ್ಸ್ ಮಾಡಿ ಎಂದು ಹೇಳಿದರೆ ಯಾರೂ ಏನೂ ಮಾಡಲಿಲ್ಲ. ಏಕೆಂದರೆ, ನಿಮಗೆ ಬೇಕಾಗಿಲ್ಲ. ಸುಮ್ಮನೆ ಕೇಂದ್ರ ಸರ್ಕಾರದ ಮೇಲೆ ಹೇಳಿಕೊಂಡು ಕಾಲ ಕಳೆಯುತ್ತೀರೇ ಹೊರತು ಸಮಸ್ಯೆ ಪರಿಹಾರ ಮಾಡುವುದಕ್ಕೆ ನಿಮಗೆ ಇಷ್ಟ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ point of order. ಮಾನ್ಯ ಸದಸ್ಯರಿಗೆ ಗೊತ್ತಿದೆ. ಅವರೂ ಮಂತ್ರಿಯಾಗಿದ್ದಾಗ ಇದೇರೀತಿ ಉತ್ತರ ಕೊಟ್ಟಿದ್ದಾರೆ. ಕಾಲಿಂಗ್ ಅಟೆನ್‌ಷನ್ ನೋಟೀಸಿಗೆ ಸಹಿ ಹಾಕಿರುವವರು ಮಾತ್ರ ಕ್ಲಾರಿಕೇಷನ್ ಕೇಳಬಹುದು. ಆದರೆ ಅವರು ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರು ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

SRI R. L. JALAPPA.—They do not want to be exposed. I am not bleming you I am only telling the fact. Please have patience.

MR. SPEAKER.—I have changed the discussion format for this subject.

ಶ್ರೀ ಬಸವರಾಜ ರಾಯರೆಡ್ಡಿ.—ಸದನದಲ್ಲಿ ಮಾನ್ಯ ಸಹಕಾರ ಮಂತ್ರಿಗಳೂ ಇಲ್ಲ ಮಾನ್ಯ ಮುಖ್ಯಮಂತ್ರಿಗಳೂ ಇಲ್ಲ,

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರಿ ಮಂತ್ರಿಗಳೂ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲ. ಇನ್ನು ಯಾರಿಗೆ ನಾವು ಹೇಳುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಓಟು ಹಾಕುವುದಕ್ಕೆ ಹೋಗಿದ್ದಾರೆ, ಬರುತ್ತಾರೆ. ಕೋ-ಆಪರೇಟೀವ್ ಮೂವ್‌ಮೆಂಟ್ ಮೇಲೆ ನೀವು ಯಾವ ರೀತಿ ಭಾಷಣ ಮಾಡುತ್ತೀರಿ ಎಂಬುವನ್ನು ಕೇಳುವುದಕ್ಕೆ ಇಲ್ಲಿ ಕುಳಿತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ:—ಕೋ-ಆಪರೇಟೀವ್ ಮೂವ್‌ಮೆಂಟ್ ಮೇಲೆ ಭಾಷಣ ಮಾಡಿದರೆ ನಿಮಗೆ ಏನರ್ಥವಾಗುತ್ತದೆ ? ತಿಳಿಯದಿರುವ ರೈತರಿಗೆ ಹೇಳಿದರೆ ಪ್ರಯೋಜನ ಆಗುತ್ತದೆ. ನಾನು ಭಾಷಣ ಮಾಡುವುದಕ್ಕೆ ಇಲ್ಲಿ ಬಂದಿಲ್ಲ. ಇರುವ ಫ್ಯಾಕ್ಟ್ಸ್ ಹೇಳುತ್ತಿದ್ದೇನೆ. ಇಷ್ಟ ಇದ್ದರೆ ಮಾಡಿ, ಇಲ್ಲದಿದ್ದರೆ ಅನುಭವಿಸಿ. ನಮಗೇನೂ ತೊಂದರೆ ಇಲ್ಲ. ಎರಡನೆಯದಾಗಿ ಈಗ...

ಶ್ರೀ ಎಸ್. ಬಂಗಾರಪ್ಪ.—ನಮಗೆ ಅರ್ಥವಾಗುವುದಿಲ್ಲ ಅಂದರೆ ಅದು ನಿಮಗೆ ಬಿಟ್ಟಿದ್ದು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಭಾಷಣ ಮಾಡುವುದಕ್ಕೆ ಬೇರೆ ಪ್ಲಾಟ್‌ಫಾರಂ ಉಪಯೋಗಿಸಿಕೊಳ್ಳುತ್ತೇನೆ. ಆದರೆ ಇಲ್ಲಿ ಫ್ಯಾಕ್ಟ್ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ರೈತರಿಗೆ ಬೇಕಾದರೆ ಭಾಷಣ ಮಾಡುತ್ತೇನೆ, ನಿಮಗೆ ಅರ್ಥವಾಗುವುದಿಲ್ಲ ಎಂದು ಹೇಳಿದ್ದೀರಿ. ೨೦೦ ಜನ ಇಲ್ಲಿ ಕುಳಿತ್ತಿದ್ದೇವೆ ನೋಡಿ. ಏನು ಮಾಡಬೇಕು, ಬಿಡಬೇಕು ಎಂಬುದು ನಿಮಗೆ ಬಿಟ್ಟಿದ್ದು.

ಶ್ರೀ ಡಿ. ಬಿ. ಚಂದ್ರೇಗೌಡ.—ತೀರಾ ಸತ್ಯ ಹೇಳುವುದಕ್ಕೆ ಹೋಗಬೇಡಿ. ನೀವೂ ಸಸ್ಪೆಂಡ್ ಆಗಿ ಬಿಡುತ್ತೀರಿ.

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ಪ್ರಾರ್ಥನೆ ಇಷ್ಟೆ, ಇಲ್ಲಿ ಮಾನ್ಯ ವೀರಪ್ಪ ಮೊಯಿಲಿ ಅವರಿದ್ದಾರೆ. ಮತ್ತು ಮಾನ್ಯ ಅರ್ಥಮಂತ್ರಿಗಳಿದ್ದಾರೆ. ಯಾರಾದರೂ ಹೋಗಿ ಮಾತನಾಡಲಿ ಆದರೆ ಇದುವರೆಗೆ ಏನೂ ಪ್ರಯತ್ನಪಟ್ಟಿಲ್ಲ. ಅಪೆಕ್ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳಲ್ಲಿ ೬೦೦ ಕೋಟಿ ರೂಪಾಯಿ ಡಿಪಾಸಿಟ್ಸ್ ಇದೆ. ಒಂದು ಸಮಯ ಕನ್‌ಫ್ರಂಟೇಷನ್ ಆದರೆ ನಬಾರ್ಡ್ ಸಹಾಯ ಇಲ್ಲದೆ ಷಾರ್ಟ್ ಟರ್ಮ್ ಲೋನ್ ಕೊಡಬಹುದು. ಎಲ್ಲಾ ಬ್ಯಾಂಕ್‌ನವರನ್ನು ಕರೆದು ಮಾತನಾಡಲಿ. ಇದೆಲ್ಲಾ ಸಭೆಯಲ್ಲಿ ಓಪನ್ನಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನೀವು ಅಧಿಕಾರಕ್ಕೆ ಬಂದಿದ್ದೀರಿ ಅಂದರೆ, ಕರ್ನಾಟಕ ರಾಜ್ಯ ನಿಮ್ಮ ಸ್ವತ್ತು ಮಾತ್ರವಲ್ಲ. ನಮ್ಮದೂ ಸ್ವತ್ತಿದೆ. ನಾವು ನಾಳೆ ಅಲ್ಲಿ ಬರಬಹುದು, ನಾವಲ್ಲದಿದ್ದರೂ ಇನ್ನೊಬ್ಬರು ಅಲ್ಲಿ ಬರಬಹುದು. ನಮ್ಮ ಅಭಿಪ್ರಾಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಂದು ಸಲಹೆಯನ್ನು ನಾನು ಕೊಟ್ಟೆ ನೀವು ಏನು ಏಳು ಅಥವಾ ಏಳೂವರೆ ಪರ್ಸೆಂಟ್ ಬಡ್ಡಿ ಕಟ್ಟುತ್ತೇವೆಂದು ಹೇಳುತ್ತಿದ್ದೀರಿ ಅದನ್ನು ಕೊಟ್ಟು ಇಷ್ಟು ದಿವಸದಲ್ಲಿ ಸಾಲವನ್ನು ತೀರಿಸಿಬಿಡಿ ಎಂದು ಹೇಳಿ. ೧೦ ಸಾವಿರ ಕೊಡದಿದ್ದರೂ ೧೦ ಸಾವಿರಕ್ಕಿಂತ ಮೇಲೆ ಇರುವ ನನ್ನಂಥ ದೊಡ್ಡ ದೊಡ್ಡ ಗಟ್ಟಿ ಕುಳಗಳು ಅವರ ಹಣವನ್ನು ತಂದು ಕೊಡುತ್ತಾರೆ. ಇದರಿಂದ ೩೦ ರಿಂದ ೩೫ ಪರ್ಸೆಂಟ್ ನಾವು ರೀಚ್ ಆದರೆ ಲಾಂಗ್‌ಟರ್ಮ್ ಲೋನ್‌ನಲ್ಲಿ ನಾವು ಏನು ೩೫ ಕೋಟಿ ರೂಪಾಯಿಗಳನ್ನು ನಬಾರ್ಡ್‌ಗೆ ಬಡ್ಡಿ ಸಬ್ಸಿಡಿ ಕೊಡಬೇಕೋ ಅದರಲ್ಲಿ ೧೫ ಕೋಟಿ ರೂಪಾಯಿಗಳನ್ನು ಕೊಟ್ಟು ಮಿಕ್ಕಿದ್ದನ್ನು ಕೊಡುತ್ತೇವೆಂದರೆ ಅವರು ಒಪ್ಪಿಕೊಳ್ಳುತ್ತಾರೆ. ಆ ಕೆಲಸವನ್ನು ನೀವು ಮಾಡಿಕೊಂಡು ಬಂದಿದ್ದೀರೋ ಅದನ್ನು ಮಾಡಿದರೆ ಲಾಂಗ್‌ಟರ್ಮ್ ಲೋನ್‌ಗೆ ಅವರು ಫೈನಾನ್ಸ್ ಮಾಡುವುದಕ್ಕೆ ಸಾಧ್ಯ. ಮೊದಲು ಇದನ್ನು ಚಾಲನೆ ಮಾಡಿ. ಅಸಲು ಮಜಾ ಮಾಡುವುದಕ್ಕೆ, ನಬಾರ್ಡ್‌ನವರು ಒಪ್ಪಿಕೊಳ್ಳುತ್ತಾರೆ. ಬಡ್ಡಿ ಬಿಡುತ್ತೇವೆ ಎಂದಾಗ ಒಪ್ಪಿಕೊಳ್ಳುವುದಿಲ್ಲ ಎಂದರೆ ಅದು ಯಾವ ಧರ್ಮ! ನಾವು ಹೋಗೋಣ, ನಾವು ಎಲ್ಲ ಹೋಗಿ ಪ್ರಯತ್ನ ಮಾಡೋಣ ಎಂದರೆ ನಿಮಗೆ ತಾಕತ್ತು ಇಲ್ಲವೇ? ನಾವು ಇದ್ದಾಗ ಕೇಂದ್ರಕ್ಕೆ ಹೋಗಿ ಕೇಳಲಿಲ್ಲವೇ? ನಾವು ಹೋಗಿ ಅಧಿಕಾರಿಗಳ ಜೊತೆ ಕೂತು ಚರ್ಚೆ ಮಾಡಿ ಕನ್ವಿನ್ಸ್ ಮಾಡಿದೆವು, ೪-೫ ವರ್ಷ ನಾವು ಮಾಡಿದ್ದೇವೆ. ಈ ಬಗ್ಗೆ ತಾವು ಇನಿಶಿಯೇಟಿವ್ ತೆಗೆದುಕೊಳ್ಳಿ. ನಾವು ಬರಲಿಲ್ಲ, ಬರಲಿಲ್ಲ, ಬರಲಿಲ್ಲ ಎಂದರೆ ನಾವು ಏಕೆ ಬರಲಿಲ್ಲ? ನಾವು ಏಕೆ ಬರುವುದಿಲ್ಲ ಎಂದೆವು ಎಂದರೆ ನೀವು ಅಸಲು ಮಜಾ ಮಾಡುವುದಕ್ಕೆ ಕರೆದಿರಿ. ಆದರೆ ಇದು ಸರಿಯಾದ ಸಮಯವಲ್ಲ, ಆಯವ್ಯಯದಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದು ಗೊತ್ತಿಲ್ಲದೇ ಇರುವುದರಿಂದ ಬಡ್ಜೆಟ್ ಆದ ಮೇಲೆ ನೋಡೋಣ ಎಂದು ಹೇಳಿದೆವು. ಹೀಗೆಂದ ಮಾತ್ರಕ್ಕೆ ನಮಗೆ ರೈತರ ಬಗ್ಗೆ ಕಳಕಳಿ ಇಲ್ಲ ಎಂದು ಅಲ್ಲ. ನಿಮಗೆ ರೈತ ವರ್ಗದವರ ಮೇಲೆ ಎಷ್ಟು ಕಳಕಳಿ ಇದೆಯೋ ಅಷ್ಟರ ಮಟ್ಟಿನ ಕಳಕಳಿ ನಮಗೂ ಇದೆ. ಆದ್ದರಿಂದ ವಾದ ವಿವಾದದಲ್ಲಿ ಕಾಲ ಕಳೆಯದೇ ತಮ್ಮ ಅಧಿಕಾರಿಗಳನ್ನು ಕಳುಹಿಸಿ ಬ್ಯಾಂಕಿನ ಅಧಿಕಾರಿಗಳ ಜೊತೆ ಚರ್ಚೆ ಮಾಡಲು ಬಿಡಿ. ಹಿಂದಿನ ಪತ್ರ ವ್ಯವಹಾರ ಏನಿದೆ ಅದನ್ನು ನೋಡಿ ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಂಡು ಈ ರೈತರಿಗೆ ಏನಾದರೂ ಸಿಗುವ ಹಾಗೆ ಮಾಡಿ. ಈ ವರ್ಷ ಯಾವುದೇ ಹೊಸ ಯೋಜನೆಗಳನ್ನು ತಾವು ರೈತರಿಗೆ ಕೊಟ್ಟಿಲ್ಲ. ನಿನ್ನೆ ಕೂಡ ಈಗ ಬಗ್ಗೆ ನಾವು ಕೇಳಿದ್ದಕ್ಕೆ ಉತ್ತರ ಕೊಡುವ ಕಾಲದಲ್ಲಿ ಕಾಲಾವಕಾಶ ಇರಲಿಲ್ಲ, ಟೈಮ್ ಇಲ್ಲ ಎಂದು ತಾವು ಹೇಳಿದ್ದರಿಂದ ನಾವು ಸುಮ್ಮನೆ ಕುಳಿತುಕೊಂಡೆವು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಲಿಲ್ಲ, ಹೊರಗಡೆ ಹೋದಿರಿ.

ಶ್ರೀ ಆರ್. ಎಲ್. ಜಾಲಪ್ಪ.—ಕೂತು ಏನು ಮಾಡುವುದಕ್ಕಾಗುತ್ತದೆ? ನಿಮ್ಮ ಮೇಲೆ ನಮಗೆ ಸಿಟ್ಟು ಇಲ್ಲ. ನಮ್ಮ ಕರ್ಮದ ಮೇಲೆ ಸಿಟ್ಟು ಬಂದು ನಾವು ಆಚೆಗೆ ಹೋದೆವು. ಒಂದು ತಾಲ್ಲೂಕಿನಲ್ಲಿ ೧೦ ಎಕರೆಯನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡುವುದಕ್ಕೆ ಆಗಿಲ್ಲ. ಬೆಂಗಳೂರು ಜಿಲ್ಲೆಯ ೮ ತಾಲೂಕುಗಳಿಗೆ ೨೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರಲ್ಲಿ ನೀರಾವರಿ ಏನು ಇಂಪ್ರೂವ್ ಮಾಡೋದು? ಎರಡು, ಎರಡೂವರೆ ಲಕ್ಷ ರೂಪಾಯಿಗಳನ್ನು ಸ್ಟೀಲ್ ಓವರ್ ವರ್ಕ್ಸ್‌ಗೆ ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಏನಾದರೂ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಸಿಕ್ಕರೆ ಬೋರ್‌ವೆಲ್, ಪಂಪ್‌ಸೆಟ್ ಹಾಕಿಕೊಳ್ಳಲು ಅನುಕೂಲವಾಗಲಿ ಎಂದು ಹೇಳುತ್ತಿದ್ದೇವೆ. ದಯಮಾಡಿ ಬ್ಯಾಂಕ್‌ನವರ ಜೊತೆ ಮಾತನಾಡಿ. ನಮ್ಮ ಪಕ್ಷದವರನ್ನು ಕರೆದರೂ ನಮಗೆ

ಗೊತ್ತಿರುವುದನ್ನು ನಾವು ಹೇಳುತ್ತೇವೆ. ದಯಮಾಡಿ ಇದನ್ನು ಪ್ರೆಸ್ಟೀಜ್ ಆಗಿ ತೆಗೆದುಕೊಳ್ಳುವುದು ಬೇಡ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆ ಏನೆಂದರೆ ಬಡ್ಡಿ ಸಹಾಯಧನ ನೀಡುವುದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಘೋಷಣೆ ಮಾಡಿದ ಮೇಲೆ ಅಪೆಕ್ಸ್ ಬ್ಯಾಂಕ್‌ನವರು ರೈತರಿಗೆ ಮರು ಸಾಲವನ್ನು ನೀಡುವುದನ್ನು ತಡೆ ಹಿಡಿದಿರುವ ಬಗ್ಗೆ ನಬಾರ್ಡ್‌ನವರಿಗೆ ರೀ-ಫೈನಾನ್ಸ್ ಬಗ್ಗೆ ಬರೆಯುತ್ತಿದ್ದೇವೆ. ಈ ಬಗ್ಗೆ ವಿನಂತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸತತವಾಗಿ ಈ ರಾಜ್ಯದ ರೈತರ ಸ್ಥಿತಿ ಬಗ್ಗೆ ಚರ್ಚೆಯಾಗುತ್ತಿದೆ. ಕೇಂದ್ರ ಹಾಗೂ ರಾಜ್ಯಗಳ ನೀತಿಯಿಂದ ಈ ರಾಜ್ಯದ ರೈತನ ಮುಂದಿನ ಚಿಂತನೆ ಏನು ? ಮುಂದೆ ಬರುವ ದಿವಸಗಳಲ್ಲಿ ಮಳೆ ಬಂದ ಮೇಲೆ ತಾನು ಮುಂದಿನ ಫಸಲು ಬೆಳೆಯುವುದು ಹೇಗೆ ಎಂದು ರೈತ ಚಿಂತಾಕ್ರಾಂತನಾಗಿರುವ ಈ ಸಂದರ್ಭದಲ್ಲಿ ರಾಜಕೀಯವನ್ನು ಒಂದು ಕಡೆ ಇಟ್ಟು ಈ ರೈತನನ್ನು ಋಣಮುಕ್ತನನ್ನಾಗಿ ಮಾಡಿ ಮತ್ತೆ ಆತನಿಗೆ ಸಾಲವನ್ನು ಕೊಡಿಸುವುದು ಹೇಗೆ ಎನ್ನುವುದರ ಬಗ್ಗೆ ಯೋಚನೆ ಮಾಡುವ ಕಾಲ ಇದಾಗಿದೆ.

ನಬಾರ್ಡ್‌ನವರು ಈ ಸಂದರ್ಭದಲ್ಲಿ ರೀಫೈನಾನ್ಸ್ ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಇದು ನಮಗೂ ನಿಮಗೂ ಗೊತ್ತಿರತಕ್ಕ ವಿಚಾರ ಕೇಂದ್ರಕ್ಕೆ ರಾಜ್ಯಸರ್ಕಾರ ಹಣ ತುಂಬದ ಹೊರತು ಮತ್ತೆ ರೀ ಫೈನಾನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದು ಗೊತ್ತಿರತಕ್ಕ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ ಎಂದು ಹೇಳಿದ್ದಕ್ಕೆ ವಿರೋಧ ಪಕ್ಷದವರು ಯಾರೂ ಮುಂದೆ ಬರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಕೇಂದ್ರಸರ್ಕಾರದ ಮನವೊಲಿಸುವ ಸಂದರ್ಭದಲ್ಲಿ ಎಲ್ಲಾ ಪಕ್ಷಗಳ ನಿಯೋಗ ಹೋಗುವಾಗ, ಇಲ್ಲಿರುವಂತಹ ವಿರೋಧಪಕ್ಷದ ಅಖಿಲಭಾರತ ಪಕ್ಷದ ರಾಜ್ಯ ಪಕ್ಷದ ಅಧ್ಯಕ್ಷನಾಗಿ, ಶಾಸಕನಾಗಿ ನಾನು ಇಲ್ಲಿರಬೇಕಾದರೆ ಮುಖ್ಯಮಂತ್ರಿಗಳು ವಿರೋಧಪಕ್ಷದವರು ನಿಯೋಗದಲ್ಲಿ ಬರಬೇಕು ಎಂದು ಬರೆದ ಯಾವುದೇ ಪತ್ರ ನನಗೆ ಬಂದಿಲ್ಲ. ನಾನು ಅವರನ್ನು ಕಂಡು ಮಾತನಾಡಿದಾಗ, ಬೇರೆ ಬೇರೆ ರಾಜಕೀಯ ಪಕ್ಷಗಳ ನಿಯೋಗ ಕೇಂದ್ರಕ್ಕೆ ಹೋಗಬೇಕೆಂದು ಹೇಳುತ್ತೀರಿ, ನೀವು ಸೌಜನ್ಯಕ್ಕೋಸ್ಕರವಾದರೂ ಆಮಂತ್ರಣ ಪತ್ರವನ್ನು ಬರೆದಿಲ್ಲವೆಂದಾಗ. ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರಿಗೆ ಪತ್ರ ಬರೆದಿದ್ದೇವೆ ಎಂದು ಹೇಳಿದರು. ವಿರೋಧಪಕ್ಷದ ನಾಯಕರಿಗೆ ಪತ್ರವನ್ನು ಬರೆದಾಕ್ಷಣಕ್ಕೆ ಬೇರೆ ಪಕ್ಷಗಳ ಮುಖಂಡರು ಇದೇ ಆಹ್ವಾನವೆಂದು ಭಾವಿಸಬೇಕೆಂದು ಮುಖ್ಯಮಂತ್ರಿಗಳು ಹೇಳುವುದು ಸರಿಯಲ್ಲ. ಕೇಂದ್ರ ಸರ್ಕಾರಕ್ಕೆ ಈ ರಾಜ್ಯದ ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ನಿಯೋಗ ಹೋಗುವಾಗ ಅಂತಹ ಒಂದು ಸಂದರ್ಭದಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗಿತ್ತು. ನಾನು ಕೇಂದ್ರಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗುತ್ತಿದ್ದೇನೆ, ಕೇಂದ್ರ ಸರ್ಕಾರದ ಮನವೊಲಿಸುವುದಕ್ಕೆ ಅರ್ಥಮಂತ್ರಿಗಳ ಹತ್ತಿರ ಹೋಗುತ್ತಿದ್ದೇನೆ ಇಂತಿಂಥ ಪ್ರಪೋಸಲ್ಸ್ ಇದೆ, ರಾಜ್ಯದ ರೈತರ ಸಾಲ ಮನ್ನಾ ಮಾಡಲಿಕ್ಕೆ ನಮ್ಮಲ್ಲಿ ಹಣವಿಲ್ಲ, ಕೇಂದ್ರ ಸರ್ಕಾರದವರು ತುಂಬಿ ಕೊಡಿಯೆಂದು ಕೇಳುತ್ತಿದ್ದೇನೆ, ನಾನು ತುಂಬಿ ಕೊಡುವುದಕ್ಕೆ ನನ್ನ ಹತ್ತಿರ ಹಣವಿಲ್ಲ, ನಮಗೆ ಸಾಲವನ್ನಾದರೂ ಕೊಡಿ. ಸಾಲ ಕೊಡುವಾಗ ಬಡ್ಡಿರಹಿತ ಸಾಲ ಕೊಡಿ, ಸಬ್ಸಿಡಿ ರೂಪದಲ್ಲಿ ನಮಗೆ ಸಾಲ ಕೊಡಿ ಇಂತಹ ಕಾಂಕ್ರೀಟ್ ಪ್ರಪೋಸಲ್ಸ್‌ನ್ನು ಇಟ್ಟುಕೊಂಡು ಕೇಂದ್ರಸರ್ಕಾರದ ಅರ್ಥಮಂತ್ರಿಗಳನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದರೆ, ನಮಗೆ ಆಮಂತ್ರಣ ಬರದಿದ್ದರೂ ಸಹ ಬಹಿರಂಗ ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿದ್ದೆವು ಇಲ್ಲಿ ಇರತಕ್ಕದ್ದು ಬಡ್ಡಿ ರಿಯಾಯಿತಿ ಪ್ರಶ್ನೆಯಲ್ಲ. ಇಡೀ ರಾಜ್ಯದ ರೈತರ ಸಾಲ ಮನ್ನಾದ ಪ್ರಶ್ನೆಯಿದೆ. ಈ ಸಂದರ್ಭದಲ್ಲಿ ಬಡ್ಡಿ ರಿಯಾಯಿತಿ ಕೊಡುತ್ತಿದ್ದೇವೆ. ಅದಕ್ಕೋಸ್ಕರ ನಬಾರ್ಡ್‌ನವರು ಹಿಂದುಮುಂದು ನೋಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಇದು ಬಹಳ ದೀರ್ಘವಾಗಿ ಯೋಚನೆ ಮಾಡುವ ಕಾಲ. ಬೇರೆ ಬೇರೆ ರಾಜ್ಯಸರ್ಕಾರಗಳು ಏನು ಹೇಳಿವೆ ಎಂಬುದನ್ನು ನಿನ್ನೆ ಪಾರ್ಲಿಮೆಂಟ್‌ನಲ್ಲಿ ಸನ್ಮಾನ್ಯ ಹಣಕಾಸಿನ ಸಚಿವರು ಯಾವುದೋ ಪ್ರಶ್ನೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಿದ್ದಾರೆ. ಅನೇಕ ರಾಜ್ಯಸರ್ಕಾರಗಳು ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ನಮ್ಮ ಪಾಲು ಇಷ್ಟು ಹೊರಲಿಕ್ಕೆ ಸಿದ್ಧರಿದ್ದೇವೆಂದು ಹೇಳಿವೆ ಎನ್ನುವ ಮಾತನ್ನು ಹಣಕಾಸಿನ ಸಚಿವರು ಹೇಳಿರತಕ್ಕದ್ದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಅದನ್ನು ನೋಡುತ್ತಿದ್ದೇವೆ. ತಮ್ಮ ಮನಸ್ಸಿನಲ್ಲಿ ಕೇಂದ್ರಕ್ಕೆ ನಿಯೋಗ ಹೋಗಬೇಕೆಂದು ಏನಿದೆ ಅದಕ್ಕೆ ನಾವು ಸಹಕಾರ ಕೊಡೋಲ್ಲವೆಂದು ತಾವು ತಿಳಿಯಬೇಡಿ. ಅದು ಇವತ್ತಿನದಲ್ಲ. ಎಲ್ಲಾ ವಿರೋಧಪಕ್ಷದವರು ಅಂದರೆ ಅಖಿಲ ಭಾರತ ಮಟ್ಟದ, ರಾಷ್ಟ್ರೀಯ ಪಕ್ಷದ, ರಾಜ್ಯ ಘಟಕದ ಅಧ್ಯಕ್ಷನಾದ ನನಗೆ ವೈಯಕ್ತಿಕವಾಗಿ ಆಮಂತ್ರಣವನ್ನು ಪೂರ್ವಭಾವಿಯಾಗಿ ಕೊಡಬೇಕಾಗಿತ್ತು, ಈ ವಿಚಾರ ಚರ್ಚೆಯಾಗಬೇಕಾಗಿತ್ತು. ಯಾವ ಹಿನ್ನೆಲೆಯಲ್ಲಿ ಕೇಂದ್ರದ ಮನವೊಲಿಸುತ್ತೀರಿ ಎನ್ನುವುದನ್ನು ನಮಗೆ ತಿಳಿಸಬೇಕಾಗಿತ್ತು. ಒಂದು

ಕಾಂಕ್ರೀಟ್ ಪ್ರಪೋಸಲ್ಸ್ ಇಟ್ಟುಕೊಂಡು ನಿಯೋಗ ಹೋಗೋಣವೆಂದು ನಮಗೆ ಹೇಳಬೇಕಾಗಿತ್ತು. ನಾವೂ ಸಹ ನಿಯೋಗ ಹೋಗೋಣವೆಂದು ಹೇಳಿದ್ದೇವೆ. ಇನ್ನುಮುಂದೆ ನಿಮಗೆ ನಾವು ಸಹಕಾರ ಕೊಡುವುದಿಲ್ಲ, ನಿಮ್ಮ ಪಕ್ಷವೇ ಬೇರೆ, ನಮ್ಮ ಪಕ್ಷವೇ ಬೇರೆಯೆಂದು ನಾವು ಹೇಳಲಿಲ್ಲ. ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ, ರೈತರ ಪ್ರಶ್ನೆ ಬಂದಾಗ ದೀರ್ಘವಾಗಿ ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ. ಎರಡನೇ ತಾರೀಖು ಆದಮೇಲೆ ನಾವು ಹಳ್ಳಿಗಳಿಗೆ ಹೋಗುತ್ತೇವೆ, ರೈತರ ಪ್ರಶ್ನೆಗಳಿಗೆ ನಾವು ಉತ್ತರ ಕೊಡಬೇಕಾಗಿದೆ. ಮಳೆ ಬರುತ್ತದೆ, ರೈತರಿಗೆ ರೀಫೈನಾನ್ಸ್ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತುಂಬಾ ಗಂಭೀರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ಪ್ರಶ್ನೆ ಇಲ್ಲಿ ಇಲ್ಲ ಕೇಂದ್ರ ಸರ್ಕಾರ ಮಾಡಿದ್ದು ಸರಿ ರಾಜ್ಯ ಸರ್ಕಾರ ಮಾಡಿದ್ದನ್ನು ವಿರೋಧ ಮಾಡುವುದು ನನ್ನ ಕೆಲಸವಲ್ಲ, ನಮಗೆ ಎರಡೂ ಒಂದೇ. ಈ ರಾಜ್ಯ ಇವತ್ತು ಈ ಸ್ಥಿತಿಗೆ ಬರಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಯೇ ಕಾರಣ. ರಾಜ್ಯ ಸರ್ಕಾರವಾಗಲಿ ಕೇಂದ್ರ ಸರ್ಕಾರವಾಗಲಿ ರೈತ ತನ್ನ ಕಾಲಮೇಲೆ ತಾನು ನಿಲ್ಲುವ ಪರಿಸ್ಥಿತಿಯನ್ನುಂಟು ಮಾಡಬೇಕಾಗಿದೆ. ಅವನಿಗೆ ಹಣವಿಲ್ಲದಾಗ ಸಹಾಯ ಮಾಡುವುದು ಮುಖ್ಯವಾದ ಪ್ರಶ್ನೆಯಲ್ಲ. ಅವನನ್ನು ಋಣಮುಕ್ತನನ್ನಾಗಿ ಮಾಡಬೇಕು. ರಿ ಫೈನಾನ್ಸ್ ಮಾಡಿ ಅವನ ಕಾಲ ಮೇಲೆ ಅವನು ನಿಲ್ಲುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು. ರೈತನ ಹಣಕಾಸಿನ ಪರಿಸ್ಥಿತಿ ಸುಧಾರಿಸಬೇಕಾದರೆ ಸ್ವಲ್ಪ ಹಣ ತೆಗೆದಿಡಬೇಕು. ಆತನನ್ನು ಋಣಮುಕ್ತನನ್ನಾಗಿ ಮಾಡುವ ಬಗ್ಗೆ ಯೋಚನೆ ಮಾಡುವುದು ಸರಿಯಾದ ಮಾರ್ಗವಾಗಿದೆ. ೨ನೇ ತಾರೀಖು ಈ ಸದನದ ಕಾರ್ಯಕಲಾಪಗಳು ಮುಗಿಯುತ್ತದೆ. ದಯಮಾಡಿ ಈ ರಾಜ್ಯದ ಹಿತದೃಷ್ಟಿಯಿಂದ ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದನ್ನು ಬೇಗ ತೆಗೆದುಕೊಳ್ಳಿ ಬಿತ್ತನೆ ಸಮಯದಲ್ಲಿ ರೈತನಿಗೆ ರೀಫೈನಾನ್ಸ್ ಮಾಡದಿದ್ದರೆ ಆತ ತನ್ನ ಕೆಲಸ ನಿಲ್ಲಿಸಬೇಕೇನು ? ಈ ಬಗ್ಗೆ ರಾಜ್ಯಸರ್ಕಾರ ಏನು ಮಾಡಬೇಕೆಂಬುದರ ಬಗ್ಗೆ ಚರ್ಚೆ ಮಾಡಬೇಕು. ಬೇರೆ ಎಲ್ಲಾ ಕೆಲಸಗಳನ್ನು ಬದಿಗೊತ್ತಿ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಈಗ ಅಗತ್ಯವಿಲ್ಲ, ಅದು ದೀರ್ಘವಾಗಿ ಚರ್ಚೆಯಾಗುತ್ತದೆ. ವಿಶೇಷವಾಗಿ ನೂರಕ್ಕೆ ೭೦ ಭಾಗ ಈ ದೇಶದಲ್ಲಿ ರೈತರು ಇದ್ದಾರೆ. ರೈತರ ಬಗ್ಗೆ ಮಾತನಾಡುವಾಗ ಒಂದು ಮಾತು ಹೇಳುತ್ತೇನೆ. ನಾವು ರೈತರ ಸಾಲವನ್ನು ಮನ್ನಾ ಮಾಡಿಯೆಂದು ಅಷ್ಟೆ ಕೇಳುತ್ತಿಲ್ಲ. ಮತ್ತೆ ರೈತ ಸಾಲಗಾರ ಆಗದ ರೀತಿಯಲ್ಲಿ ಅವನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು. ನೀರಾವರಿಗೆ ಅನುಕೂಲ ಸಿಗಬೇಕು. ಉತ್ತಮವಾದ ಬೀಜ, ಗೊಬ್ಬರಗಳನ್ನು ಸಬ್ಸಿಡಿ ರೂಪದಲ್ಲಿ ದೊರಕಿಸಲಿಕ್ಕೆ ಪ್ರಯತ್ನ ನಡೆಯಬೇಕು ಒಂದು ಸಾರಿ ರೈತನು ತನ್ನ ಕಾಲ ಮೇಲೆ ನಿಲ್ಲುವಂತಾಗಬೇಕು. ಸಾಲ ಮನ್ನಾ ಮಾಡಿದರೆ ರೈತನಿಗೆ ಉಪಕಾರವಾಯಿತು ಎಂದು ಹೇಳುವುನಲ್ಲ. ರೈತ ತನ್ನ ಕಾಲ ಮೇಲೆ ತಾನು ನಿಲ್ಲುವ ಬಗ್ಗೆ ಗಂಭೀರವಾಗಿ ಯೋಚನೆ ಮಾಡುವ ಕಾಲ ಇದು.

ಸನ್ಮಾನ್ಯ ಮುಖ್ಯಮಂತ್ರಿಗಳು ಬೇರೆ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಇದರ ಬಗ್ಗೆ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಟ್ಟು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು ಈ ಕಡೆ ಇರತಕ್ಕಂಥ ನಾವು ಅವರು ಯಾವರೀತಿ ಸಹಕಾರ ಕೊಡಬೇಕೆಂದು ಅಪೇಕ್ಷೆ ಪಡುತ್ತಾರೋ ಅದನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಸಿ. ಬೈರೇಗೌಡ.—ಈಗ ನಮ್ಮ ಮುಂದಿರುವ ಪ್ರಶ್ನೆ ನಬಾರ್ಡ್‌ನ ಒಬ್ಬ ಅಧಿಕಾರಿ ಸರ್ಕಾರಕ್ಕೆ ಪತ್ರ ಬರೆದಿಲ್ಲ, ಬರೆದಿರತಕ್ಕಂಥಾದ್ದು ಅಪೆಕ್ಸ್ ಬ್ಯಾಂಕ್‌ಗೆ......

ಶ್ರೀ ಎಂ. ವೀರಪ್ಪಮೊಯಿಲಿ.—ಗಮನ ಸೆಳೆಯುವ ಸೂಚನೆಯಾಗಿ ಇದನ್ನು ಇಷ್ಟು ಬೆಳೆಸುತ್ತಿದ್ದೇವೆ. ಇದಕ್ಕೆ ಬೇರೆ ಚರ್ಚೆಯಾಗುವುದಿದ್ದರೆ ನಾವು ತಯಾರಿದ್ದೇವೆ.

MR. SPEAKER,—We are really concerned about providing loan facielities to the farmers with the limited time. ಬರುವ ವರ್ಷ ರೈತರಿಗೆ ಸಾಲ ಸಿಗುವಹಾಗೆ ಏನು ಮಾಡಬೇಕು. ಇದಕ್ಕೆ ಸದನದ ಸಹಕಾರ ಮತ್ತು ಸಲಹೆಗಳನ್ನು ಅವರು ಕೇಳಿದ್ದಾರೆ. ಅದಕ್ಕೋಸ್ಕರ ನಾನು ಪ್ರತಿಯೊಂದು ರಾಜಕೀಯ ಪಕ್ಷದ ಮುಖಂಡರನ್ನು ಕರೆಯುತ್ತಿದ್ದೇನೆ. ದಯವಿಟ್ಟು ಎಲ್ಲರೂ ಸಂಕ್ಷಿಪ್ತವಾಗಿ ಹೇಳಿ.

† ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಇದು ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕ್‌ಗೆ ಬಂದಿರತಕ್ಕಂಥ ಪತ್ರ. ನನಗೆ ತಿಳಿದಮಟ್ಟಿಗೆ, ಅವರು ಸರ್ಕಾರಕ್ಕೆ ಕೂಡ ಪತ್ರ ಬರೆದು ತಿಳಿಸಿಲ್ಲ. ಆದರೆ ಒಂದೇ ಒಂದು ಮಾತನ್ನು ನಾನು ಹೇಳಬೇಕಾಗಿದ್ದರೆ, ಇದು ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಂಬಂಧಗಳು ಯಾವರೀತಿ ಇರಬೇಕು ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತದೆ. ಈಗ ಏನಾಗಿದೆ

ಎಂದರೆ, ಇದು ಮೊದಲನೆಯದು ಏನೂ ಅಲ್ಲ. ಹಿಂದೆ ಕೂಡ ಅನೇಕಬಾರಿ ಈ ರೀತಿ ನಡೆದಿದೆ. ಹಿಂದೆ ಆದಾಗ ಅಧಿಕಾರದಲ್ಲಿದ್ದಂಥ ಪಕ್ಷ ಯಾವರೀತಿಯಾದಂಥ ನೀತಿಯನ್ನು ಅನುಸರಿಸುತ್ತಿತ್ತೋ ಈಗಲೂ ಕೂಡ ಅದೇ ನೀತಿಯನ್ನು ಕೇಂದ್ರ ಸರ್ಕಾರದಲ್ಲಿ ಆಡಳಿತ ಮಾಡತಕ್ಕಂಥ ಪಕ್ಷ ಅಥವಾ ಸರ್ಕಾರ ಅನುಸರಿಸುತ್ತಿದೆ. ನನಗೆ ಒಂದು ವಿಷಯ ನೆನಪಿಗೆ ಬರುತ್ತದೆ. ಹಿಂದೆ ರಾಜಮಹಾರಾಜರ ಕಾಲದಲ್ಲಿ ಚಕ್ರವರ್ತಿಗಳು ಹೇಳಿದಹಾಗೆ ಸಾಮಂತರು ಕೇಳುತ್ತಿದ್ದರು. ಇದು ಹಾಗಾಯಿತು. ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ಅವರು ಏನು ಹೇಳಿದ್ದಾರೆ? ಈ ಸಭೆಯು ತೀರ್ಮಾನದ ಪ್ರಕಾರ ನಾವು ಬಜೆಟ್‌ನಲ್ಲಿ ಇಂತಹ ಸವಲತ್ತುಗಳನ್ನು ನಮ್ಮ ರಾಜ್ಯದ ರೈತರಿಗೆ ಕೊಡುತ್ತೇವೆ ಎಂದು ಹೇಳಿದಮೇಲೆ ಅಧಿಕಾರದಲ್ಲಿರತಕ್ಕಂಥ ಯಾರೆ ಆಗಲಿ, ಈ ಸಭೆಯ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡತಕ್ಕಂಥ ಅಧಿಕಾರ ಯಾರಿಗೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ನಿರ್ದಿಷ್ಟವಾದಂಥ ಈ ನಿಲುವನ್ನು ನಾನು ಒಪ್ಪುತ್ತೇನೆ. ಆದರೆ ಇರತಕ್ಕಂಥ ಪ್ರಶ್ನೆ ಏನು ? ಇದನ್ನು ದೃಢ ಮನಸ್ಸಿನಿಂದ ಎದುರಿಸಬೇಕಾದದ್ದು ಈಗ ಸರ್ಕಾರದ ಮುಂದಿರತಕ್ಕಂಥ ಪ್ರಶ್ನೆ. ವಿಘ್ನೇಶ್ವರನ ಮದುವೆಗೆ ಸಾವಿರ ವಿಘ್ನಗಳಂತೆ. ಹಾಗೆ ಈ ರಾಜ್ಯದ ರೈತರಿಗೆ ಏನಾದರೂ ಕೊಡಬೇಕೆಂದು ಮನಸ್ಸು ಮಾಡಿದಾಗ ಈ ಎಲ್ಲಾ ವಿಘ್ನಗಳೂ ಬರುತ್ತವೆ. ಇಂತಹ ಸಂದರ್ಭದಲ್ಲಿ, ನಾನು ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಂಬಂಧಗಳು ಏನಿವೆ, ಅವುಗಳ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ತಳೆಯಬೇಕಾದದ್ದು ಬಹಳ ಅವಶ್ಯಕತೆ ಇದೆ. ನೀವು ಸಹ ಅದೇ ತರಹ ಬರೆಯಬಹುದು, ಈಗ ರಾಜ್ಯಸರ್ಕಾರ ಕೂಡ, ಕಮರ್ಷಿಯಲ್ ಬ್ಯಾಂಕುಗಳಲ್ಲಿ ಹಣ, ಡಿಪಾಸಿಟ್ ಇದೆ. ನಾವು ಇದನ್ನು ನಿಲ್ಲಿಸುತ್ತೇವೆ ಎಂದು ಈ ಕ್ರಮದ ಬಗ್ಗೆ ತಾವು ಕೂಡ ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ತೀವ್ರವಾದ ಆಲೋಚನೆ ಮಾಡತಕ್ಕ ಪರಿಸ್ಥಿತಿ ಉದ್ಭವವಾಗುತ್ತವೆ ಎಂಬ ಮಾತನ್ನು ಕೂಡ ಹೇಳಬೇಕಾಗುತ್ತದೆ. ಆದ್ದರಿಂದ ಯಾವರೀತಿ ಅವರಿಗೆ ಮನವರಿಕೆ ಮಾಡಿಕೊಡಬೇಕೋ, ಅಂತಹ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಮತ್ತೆ ತಾವು ನಿಯೋಗ ಹೋಗಬೇಕೆಂದು ಹೇಳಿದ್ದೀರಿ. ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ವಿರೋಧ ಪಕ್ಷದ ಜೊತೆಯಲ್ಲಿ ನೀವು ಮಾತನಾಡಿದಿರಿ ಆದರೆ ನಮಗೆ ಯಾರಿಗೂ ಕೂಡ ಗೊತ್ತಿಲ್ಲ. ನಾನು ಕೂಡ ಪತ್ರಿಕೆಯಲ್ಲಿ ಓದಿದೆ. ನಾನು ಬರಬೇಕಾದರೆ ನಮ್ಮ ಕೆಲಸಕಾರ್ಯಗಳನ್ನು ನೋಡಿಕೊಂಡು ಒಂದು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಆದರೆ ನಮ್ಮನ್ನು ಕರೆಯಲಿಲ್ಲ. ಒಂದು ಟೆಲಿಫೋನ್ ಕರೆಯಾದರೂ ಬರುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ತಾವು ಹೋಗಬೇಕೆಂದು ಹೇಳಿದಿರಿ, ಇವರು ಬೇಡವೆಂದು ಹೇಳಿದರು. ನೀವು ಸುಸ್ತಾಗಿ ಕುಳಿತುಬಿಟ್ಟಿರಿ. ಇಷ್ಟಕ್ಕೇ ಮುಗಿದುಹೋಯಿತಾ ? ಸರ್ಕಾರದ ಜವಾಬ್ದಾರಿ ಮುಗಿದುಹೋಯಿತೇನು ? ಇಷ್ಟಕ್ಕೇ ಸರ್ಕಾರದ ಜವಾಬ್ದಾರಿ ಮುಗಿಯಲಿಲ್ಲ. ಆದ್ದರಿಂದ ಈ ದೃಷ್ಟಿಯಿಂದ ಯೋಚನೆ ಮಾಡುವುದಾದರೆ ನಿಮಗೆ ಪೂರ್ಣ ಮನಸ್ಸಿಲ್ಲ, ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವುದರಲ್ಲಿ ಪೂರ್ಣ ಮನಸ್ಸಿಲ್ಲ. ರೈತರು ಪಡತಕ್ಕಂಥ ಕಷ್ಟಕ್ಕೆ ನೆರವಾಗತಕ್ಕಂಥ ಮನಸ್ಸಿಲ್ಲ ಎಂದು ನಾನು ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ. ಈಗ ದಿಟ್ಟವಾದಂಥ ನಿಲುವನ್ನು ತೆಗೆದುಕೊಂಡು ಈ ಸಮಸ್ಯೆಯನ್ನು ಎದುರಿಸಬೇಕಾಗಿರತಕ್ಕಂಥದ್ದು ಸರ್ಕಾರದ ಕರ್ತವ್ಯ ಇದೆ.

ಅದಕ್ಕೆ ನಮ್ಮ ಪೂರ್ಣ ಸಹಕಾರ ಇದೆ ಎನ್ನುವ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ,

ಶ್ರೀ ಬಾಬುಗೌಡ ಆರ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು, ರೈತರ ರಿಫೈನಾನ್ಸ್‌ಗೆ ಆಗಿರುವಂಥ ತೊಂದರೆಯನ್ನು ಅನುಲಕ್ಷಿಸಿ, ಸದನದ ಅಭಿಪ್ರಾಯವನ್ನು ಪಡೆದು. ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಎಲ್ಲಾ ಸದಸ್ಯರ ಸಹಮತ ಕೇಳಿದ್ದಾರೆ. ಇದಕ್ಕೆ ನಮ್ಮ ಸಂಪೂರ್ಣ ಸಹಕಾರ, ಬೆಂಬಲ ಇದೆ. ಇದರ ಜೊತೆಗೆ ಹೋಗುವಾಗ, ಸಾಧ್ಯವಿದ್ದ ಎಲ್ಲಾ ಪ್ರಯತ್ನ ಮಾಡಿ, ಸಹಕಾರಿ ಸಂಘದ ಸಾಲದ ರಿಯಾಯಿತಿ ಕೊಡುವಂಥ ಪ್ರಪೋಸಲ್‌ನ್ನೂ ತೆಗೆದುಕೊಂಡು ಹೋಗಿ ಮಾತುಕತೆ ಮಾಡಬೇಕೆಂದು ನನ್ನ ಅಭಿಪ್ರಾಯ.

† ಶ್ರೀ ಆರ್. ವಿ. ದೇಶಪಾಂಡೆ,—ಮಾನ್ಯ ಅಧ್ಯಕ್ಷರೇ, ನಬಾರ್ಡ್ ಸುತ್ತೋಲೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಇದೇನು ಹೊಸದಲ್ಲ. ನಾವೂ ಸಹ ಅಲ್ಲಿದ್ದಾಗ, ಇಂಟರೆಸ್ಟ್ ಸಬ್ಸಿಡಿ ಕೊಟ್ಟೆವು. ಒಂದು ವರ್ಷ ಇಡೀ ಬಡ್ಡಿ ಮನ್ನಾ ಮಾಡಿದೆವು. ಇದಕ್ಕೂ ನಬಾರ್ಡ್‌ನವರು ಸಾಕಷ್ಟು ವಿರೋಧ ಮಾಡಿದರು. ಮಹಾರಾಷ್ಟ್ರದಲ್ಲೂ ಸಹ ಇವತ್ತಿನ ಮುಖ್ಯಮಂತ್ರಿ ಮತ್ತು ಆಗಿನ ಮುಖ್ಯಮಂತ್ರಿಯಾಗಿದ್ದ ಶರದ್‌ಪವಾರ್ ಅವರೂ ಕೂಡ ರೈತರಿಗೆ ಸಬ್ಸಿಡಿ ರಿಯಾಯಿತಿ ಕೊಟ್ಟಾಗಲೂ ಕೂಡ ನಬಾರ್ಡ್‌ನವರು ಆಕ್ಷೇಪಣೆ ಮಾಡಿದರು. ಆಗ ಆ ಮುಖ್ಯಮಂತ್ರಿಗಳು ನಿರ್ದಿಷ್ಟವಾಗಿ

ಹೇಳಿದರು, ಅವರು ಬೇಕಾದಷ್ಟು ಹೇಳಲಿ, ನಾವು ರೈತರಿಗೆ ಕೊಟ್ಟೇ ಕೊಡುತ್ತೇವೆ ಎಂದು ಹೇಳಿದರು. ಆದ್ದರಿಂದ ಇವತ್ತು ನಬಾರ್ಡ್‌ನಿಂದ ಸುತ್ತೋಲೆ ಬಂತು ಎಂದು ನೀವು ಹಿಂದೆ ಸರಿಯಬಾರದು. ಮುಖ್ಯಮಂತ್ರಿಗಳು ನಬಾರ್ಡ್‌ನವರಿಗೆ ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡುವುದಕ್ಕೆ ಹೊರಟಿದೆ, ನಮ್ಮ ಸರ್ಕಾರ ಕೇವಲ ಬಡ್ಡಿ ರಿಯಾಯಿತಿ ಮಾಡುತ್ತಿದೆ, ಆದ್ದರಿಂದ ನಾವು ನಬಾರ್ಡ್‌ನವರ ಮಾತು ಕೇಳುವುದಕ್ಕೆ ಸಿದ್ಧವಿಲ್ಲ ಎಂಬ ಮಾತು, ತಮ್ಮ ಕಡೆಯಿಂದ ಬರಬೇಕಾಗಿದೆ. ತಾವು ನಮ್ಮ ಸಹಕಾರ ಬೇಕೆಂದು ಹೇಳಿದ್ದೀರಿ, ನಾವುಕೊಡುತ್ತೇವೆ. ಈ ವಿಷಯದಲ್ಲಿ ಯಾವುದೇ ತರಹದ ಡೈಲ್ಯಾಕ್ಟ್ ಮಾಡುವುದಕ್ಕೆ ಹೋಗುವುದಿಲ್ಲ ಯಾವುದೇ ರೀತಿಯ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ರೈತರಿಗೆ ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯ ಎಂಬ ಪ್ರಶ್ನೆ ಇದೆ. ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ತಾವು ನಿಯೋಗ ಹೋಗಬೇಕೆಂದು ಹೇಳಿದ್ದೀರಿ, ಈ ನಿಯೋಗ ತೆಗೆದುಕೊಂಡು ಹೋಗುವುದಕ್ಕೆ ಮುಂಚೆ, ಸರ್ಕಾರದಲ್ಲಿ ಪ್ರಯತ್ನ ಆಗಬೇಕಾಗುತ್ತದೆ. ಆ ಒಂದು ಪ್ರಯತ್ನ ಸರ್ಕಾರದಲ್ಲಿ ಆಗಿಲ್ಲ. ನಿಯೋಗ ಹೋಗುವುದಕ್ಕೆ ಮುಂಚೆ, ಅಲ್ಲಿ ಮಾತನಾಡುವುದು ಏನು, ಕೇವಲ ರೀ ಫೈನಾನ್ಸ್ ಬಗ್ಗೆ ಮಾತನಾಡಬೇಕೇ ಎಂಬುದನ್ನು ಯೋಚಿಸಬೇಕು, ಕೇವಲ ರೀಫೈನಾನ್ಸ್ ಬಗ್ಗೆ ಹೋಗಬೇಕಾದ್ದು ಇಲ್ಲ, ಮಾನ್ಯ ಕೇಂದ್ರ ಹಣಕಾಸಿನ ಮಂತ್ರಿಗಳು ಒಂದು ಮಾತು ಹೇಳಿದ್ದಾರೆ. Irrespective of holdings ಸಾಲ ಮನ್ನಾ ಮಾಡುವುದಕ್ಕೆ ಹೋಗಿದ್ದಾರೆ. Ceiling limit of Rs, 10,000 is there. ಇವತ್ತು ಖಾಸಗಿಯವರಲ್ಲಿ ಯಾರೂ ಸಾಲ ತೆಗೆದುಕೊಳ್ಳುತ್ತಾರೆ, ಕೇವಲ ಬಡ ರೈತ ತೆಗೆದುಕೊಳ್ಳುತ್ತಾನೆಯೇ ? ಮಾನ್ಯ ಜಾಲಪ್ಪನವರಂಥವರು ೧-೨ ಲಕ್ಷ ತೆಗೆದುಕೊಂಡಿರಬಹುದು. ಆದರೆ ಬಡ ರೈತರಿಗೆ ಇಷ್ಟೇ ಸಾಲದ ಪರಮಾವಧಿ. ಈ ದೃಷ್ಟಿಯಿಂದ ಅಲ್ಲಿಗೆ ಹೋಗುವುದಕ್ಕೆ ಮುಂಚೆ ತಮ್ಮ ನಿಲುವು ಏನು ? ತಾವು only small and marginal farmersಗೆ ಬಡ್ಡಿ ರಿಯಾಯಿತಿ ಕೊಡುತ್ತೇವೆಂದು ಹೇಳುತ್ತೀರಿ. ಎಲ್ಲಾ ರೈತರಿಗೂ ಸಾಲವನ್ನು ಕೊಡಬೇಕು. ನಮ್ಮ ನಮ್ಮಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯ ಇಲ್ಲದಂತೆ, ನೀವು ಸಭೆ ಕರೆದು, ನಿಮ್ಮ ನಿಲುವು ಏನು, ರೈತರಿಗೆ ಯಾವ ರೀತಿಯಾದ ರಿಯಾಯಿತಿ ಕೊಡಬೇಕೆಂದು ಚರ್ಚೆ ಮಾಡಿ, ತೀರ್ಮಾನ ಮಾಡಿಕೊಂಡು ನಂತರ ಅಲ್ಲಿಗೆ ಹೋಗಬೇಕು. ಸಾಲ ಮನ್ನಾ ಮಾಡುವ ಬಗ್ಗೆಯಾಗಲೀ ರೈತರಿಗೆ ಬಡ್ಡಿ ರಿಯಾಯಿತಿ ಕೊಡುವ ಬಗ್ಗೆಯಾಗಲೀ ಅಥವಾ ರೀ ಫೈನಾನ್ಸ್ ಮಾಡುವ ಬಗ್ಗೆಯಾಗಲೀ ನಾವು ಮೊದಲು ಇಲ್ಲಿ ತೀರ್ಮಾನ ಮಾಡಿಕೊಳ್ಳಬೇಕು. ನಾವು ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರದೇ ಹೋದರೆ, ೧೫-೨೦ ವರ್ಷದಲ್ಲಿ ರೀ ಫೈನಾನ್ಸ್‌ಗೆ ತೊಂದರೆಯಾಗುತ್ತದೆ, ಇದೊಂದು ದೊಡ್ಡ ಜ್ವಲಂತ ಸಮಸ್ಯೆ. ಇದಕ್ಕೆ ನಮ್ಮ ಸಂಪೂರ್ಣವಾದ ಸಹಕಾರ ಕೊಡುತ್ತೇವೆ. ಆದ್ದರಿಂದ ಸರ್ಕಾರದ ನಿಲುವನ್ನು ಸ್ಪಷ್ಟ ಮಾಡಬೇಕು, ನಾವು ಸಹಕಾರ ಕೊಡುವುದಕ್ಕೆ ಒಪ್ಪಿದ್ದೇವೆ.

೧೨-೪೦ ಪಿ.ಎಂ.

† **ಪ್ರೊ. ಎಂ. ಡಿ. ನಂಜುಂಡಸ್ವಾಮಿ.**—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ರಚನೆ ಮಾಡಿದ ಕೂಡಲೇ ಸರ್ವಪಕ್ಷ ನಿಯೋಗ ಹೋಗೋಣವೆಂದು ಹೇಳಿಕೆಯನ್ನು ಕೊಟ್ಟ ಮೇಲೆ, ನಾವು ರೈತಸಂಘದವರೂ ಬರುವುದಿಲ್ಲವೆಂದು ಹೇಳಿಲ್ಲ. ಆದರೆ ಸರ್ವಪಕ್ಷಗಳ ನಿಯೋಗ ಹೋಗುವುದಕ್ಕೆ ಮುಂಚೆ ಏನು ವಿಚಾರ ಇಟ್ಟುಕೊಂಡು ಹೋಗುತ್ತದೆ ಎನ್ನುವುದು ಸ್ಪಷ್ಟವಾಗಬೇಕು. ಏತಕ್ಕೆಂದರೆ ಇದರ ಹೆಸರೇ ಸರ್ವಪಕ್ಷಗಳ ನಿಯೋಗ, ಹಲವಾರು ವಿಚಾರಗಳು ಇರುವಂತಹ ಪಕ್ಷಗಳು ಹೋಗುವಂತಹ ನಿಯೋಗ. ಆದಕಾರಣ, ನಿಮ್ಮ ವಿಚಾರ ಏನು ಎನ್ನುವುದು ಸ್ಪಷ್ಟವಾದಾಗ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ನಾವು ಬರುವುದಕ್ಕೆ ಈಗಲೂ ತಯಾರಾಗಿದ್ದೇವೆ. ಏತಕ್ಕೆಂದರೆ, ತಾವು ಅಧಿಕಾರಕ್ಕೆ ಬಂದ ಹೊಸದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಹೇಳಿದ ಮಾತು ನನಗೆ ನೆನಪಿದೆ. ಸಾಲ ರದ್ದು ಸಾಧು ಅಲ್ಲ ಎಂದು ತಾವು ಹೇಳಿದ್ದೀರಿ. ಇದನ್ನು ಮೊದಲು ತೀರ್ಮಾನಿಸಿಕೊಳ್ಳಬೇಕು. ಏತಕ್ಕೆಂದರೆ, ಇಂತಹ ವಿಚಾರ ರಿಸರ್ವ್ ಬ್ಯಾಂಕ್‌ನವರು ಇಟ್ಟುಕೊಂಡಿದ್ದಾರೆ, ನಬಾರ್ಡ್‌ನವರು ಇಟ್ಟುಕೊಂಡಿದ್ದಾರೆ. ರೈತರ ಸಾಲ ರದ್ದು ಮಾಡಿದರೆ habbit of repayment gets damaged ಎಂಬುದು ರಿಸರ್ವ್ ಬ್ಯಾಂಕ್ ಅಭಿಪ್ರಾಯ. ಆದರೆ ಅದೇ ರಿಸರ್ವ್ ಬ್ಯಾಂಕ್‌ನವರು ನ್ಯಾಷನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಗೆ, ಅಂದರೆ ಸಿನಿಮಾ ತೆಗೆಯುವವರಿಗೆ ೧೨೬೦ ಕೋಟಿ ರೂಪಾಯಿಗಳನ್ನು ರದ್ದು ಮಾಡಿದಾಗ they were never bothered about the habit of

repayment getting damaged. ಇಂತಹ ಗೊಂದಲದ ವಿಚಾರದವರೂ ಇದ್ದಾರೆ. ಮತ್ತೆ ಮುಖ್ಯಮಂತ್ರಿಗಳು ಇವತ್ತೂ ಮಾತನಾಡುತ್ತಾ ಇರ್ರೆಸ್ಪೆಕ್ಟೀವ್ ಆಫ್ ಹೋಲ್ಡಿಂಗ್ ಸಾಲ ರದ್ದು ಮಾಡುವುದಕ್ಕೆ ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ನವರು ಹೊರಟಿದ್ದಾರೆ ಎಂದರು, ಅದರ ಬಗ್ಗೆ ಅವರಿಗೆ ಸಮಾಧಾನ ಇಲ್ಲ. ಆದರೆ ಅದೇ ಸಂದರ್ಭದಲ್ಲಿ ನೂರಾರು ಎಕರೆ ಇರುವ ಶ್ರೀಮಂತನಿಗೆ ಸಾಲ ರದ್ದು ಮಾಡುವುದು ಏನು ಸಮಂಜಸ ಎಂದು ಹೇಳಿದರು, ನಾವು ಕರ್ನಾಟಕದ ಮಟ್ಟಿಗೆ ಮಾತನಾಡೋಣ. ಕರ್ನಾಟಕದಲ್ಲಿ ಭೂಮಿತಿ ಶಾಸನ ಜಾರಿಗೆ ಬಂದಿದೆ. ನಾವು ೧೦ ಎಕರೆ ಭೂಮಿ ಇರುವ ರೈತರು. ನೀವು ಸಣ್ಣ ರೈತ, ಶ್ರೀಮಂತ ರೈತ ಎಂದು ಹೇಳಿದ್ದೀರಿ. ಈ ದಿವಸ ಎರಡು ಎಕರೆ ಹತ್ತಿ ಮಾರಿದವನಿಗೆ ಹೆಚ್ಚು ನಷ್ಟ ಆಯಿತೋ ಹತ್ತು ಎಕರೆ ಹತ್ತಿ ಮಾರಿದವನಿಗೆ ಹೆಚ್ಚು ನಷ್ಟ ಆಯಿತೋ ಎಂಬ ಬಗ್ಗೆ ಮುಖ್ಯಮಂತ್ರಿಗಳ ಜವಾಬು ಕೊಡಬೇಕು. As far as price limit is concerned, the crop loans of all farmers should be written off, irrespective of the holdings because the loss suffered by the small farmer, When compared with big farmer, the big farmer is the big loser. ಈ ವಿಚಾರಗಳು ಸ್ಪಷ್ಟವಾಗಬೇಕು. ಮತ್ತೆ ನಾವು ರೈತರ ಬಡ್ಡಿ ಬಾಕಿ ಸಬ್ಸಿಡಿ ಬಗ್ಗೆ ಮಾತನಾಡುತ್ತೇವೆ. We say that farmers In India are the biggest subsidisers, ನಾವು ದೇಶಕ್ಕೆ ಸಬ್ಸಿಡೈಸ್ಡ್ ಫುಡ್ ಕೊಡುತ್ತಾ ಇರುವವರು. ನಮಗೆ ಸಬ್ಸಿಡಿ ಕೊಡುತ್ತೇವೆ ಎಂದು ಯಾರೂ ಈ ದೇಶದಲ್ಲಿ ಮಾತನಾಡಬಾರದು. The basic point is whether we are demanding subsidy in the interest on the loans given to farmers or whether we should go into the very credit policy of the Reserve Bank of India itself; ಇದು ಬಹಳ ಮುಖ್ಯವಾದ ಪ್ರಶ್ನೆ. ನಿಯೋಗದಲ್ಲಿ ಬರುವುದಕ್ಕೆ ಈಗಲೂ ತಯಾರಾಗಿದ್ದೇವೆ, ಆದರೆ ವಿಚಾರ ಸ್ಪಷ್ಟವಾಗಬೇಕು Whether the credit policy adopted to agriculture should be the same as it is in Industry or commerce or whether it should be different? ಇದು ಬಹಳ ಮುಖ್ಯ because production is not smooth in agriculture as it is in industry or commerce. ಇದೆಲ್ಲಾ ವಿಚಾರದ ಬಗ್ಗೆ ನಿಯೋಗ ಹೋಗುವುದಕ್ಕೆ ಮುಂಚೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಪೂರ್ವಭಾವಿಯಾಗಿ ಸರ್ವ ಪಕ್ಷಗಳ ಸಭೆ ಸೇರಿ ನಮ್ಮ ವಿಚಾರದ ಬಗ್ಗೆ ನಾವೇ ಸ್ಪಷ್ಟತೆ ಪಡೆದುಕೊಂಡು ನಂತರ ಹೋಗೋಣ. ಆಗ ಏನಾದರೂ ಸರಿ ಹೋಗುತ್ತದೆ

† **ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).**—ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಂದೆ ಇವತ್ತು ವಿಚಾರಾಧೀನವಾದ ಪ್ರಶ್ನೆ, ಬಹಳ ಸೀಮಿತವಾದ ಪ್ರಶ್ನೆ ಇದೆ ಒಂದು ಮಾತನ್ನು ದುಃಖದಿಂದ ಹೇಳಬೇಕಾಗುತ್ತದೆ. ಇದರ ಜೊತೆಯಲ್ಲಿ ಎರಡನೇ ಪ್ರಶ್ನೆಗಳನ್ನು ಸೇರಿಸುವುದರಿಂದ ಇದರ ಮಹತ್ವ, ಇದರ ಗಂಭೀರತೆ, ಕಡಿಮೆಯಾಗುತ್ತದೆ. ರೈತರ ಬಗ್ಗೆ ಅನೇಕ ಸಮಸ್ಯೆಗಳು ಇವೆ. ಎಲ್ಲಾ ಸಮಸ್ಯೆಗಳೂ ಒಂದೇ ಸಮಸ್ಯೆಯ ಗಾತ್ರದಲ್ಲಿ ಸೇರಿದರೆ, ಯಾವುದು ಪ್ರಮುಖವಾದಂಥ ಪ್ರಶ್ನೆ, ಗಹನವಾದಂಥ ಪ್ರಶ್ನೆ, ಗಂಭೀರವಾದಂಥ ಪ್ರಶ್ನೆ ಇದೆಯೋ ಅದರ ಗಂಭೀರತೆ ಕಡಿಮೆಯಾಗುತ್ತದೆ. ಈ ಒಂದು ವಾತಾವರಣವನ್ನು ದುರ್ದೈವದಿಂದ ನಾನು ಇವತ್ತು ನೋಡುತ್ತಿದ್ದೇನೆ. ತಾವು ಹೇಳಿದ ಹಾಗೆ, ನಮ್ಮ ಮುಂದೆ ಇರುವಂತಹದು ಸೀಮಿತವಾದ ಪ್ರಶ್ನೆ. ಮುಂದಿನ ವರ್ಷ ರೈತರಿಗೆ ಯಾವ ತೊಂದರೆ ಇಲ್ಲದಂತೆ ಸಾಲ ಸಿಗುವ ವ್ಯವಸ್ಥೆ, ಪಡೆಯುವ ವ್ಯವಸ್ಥೆ, ವಿತರಣೆ ವ್ಯವಸ್ಥೆ ಆಗಬೇಕೆನ್ನುವಂತಹುದು ಮಾತ್ರ ಇವತ್ತಿನ ದಿವಸ ನಮ್ಮ ಮುಂದಿರುವ ಪ್ರಶ್ನೆ.

ಸಾಲ ಯಾವ ರೀತಿ ಮನ್ನಾ ಮಾಡಬೇಕು, ಎಷ್ಟು ಮನ್ನಾ ಮಾಡಬೇಕು ಕೇಂದ್ರ ಸರ್ಕಾರ ಎಷ್ಟು ಮನ್ನಾ ಮಾಡಬೇಕು ರಾಜ್ಯ ಸರ್ಕಾರ ಎಷ್ಟು ಸಾಲ ಮನ್ನಾ ಮಾಡಬೇಕು ಎನ್ನುವುದು ಒಂದು ಕಡೆ ಆದರೆ, ಇವತ್ತು ರೈತರಿಗೆ ಸಾಲ ಸಿಕ್ಕದೆ ಬ್ಯಾಂಕ್‌ಗಳ ಮುಂದೆ, ಕೋ-ಆಪರೇಟೀವ್ ಬ್ಯಾಂಕ್‌ಗಳ ಮುಂದೆ ನಿಲ್ಲತಕ್ಕಂಥ ಬರ್ನಿಂಗ್ ಪ್ರಾಬ್ಲಮ್ ಏನು ಇದೆ ಅದನ್ನು ಡೈವರ್ಟ್ ಮಾಡಿದಂತಾಗುತ್ತದೆ. ಈ ಸಮಸ್ಯೆಗಳನ್ನು ಒಂದೊಂದಾಗಿ ಪರಿಶೀಲನೆ ಮಾಡಿ ನಿವಾರಣೆ ಮಾಡುವ ಹಾದಿ ನಾವು ಹಿಡಿಯಬೇಕಾಗುತ್ತದೆ. ಇವತ್ತು ವಿರೋಧಪಕ್ಷದ ನಾಯಕರು ಮೊದಲೇ ಒಂದು ಪ್ರಶ್ನೆ ಕೇಳಿದರು. ನಾವು ನಿಯೋಗ ಬರುವುದಕ್ಕೆ ತಯಾರು ಇದ್ದೇವೆ, ಆದರೆ ನೀವು ರೈತರಿಗೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಿ ರೈತರ ಸಾಲ ಮನ್ನಾ ಮಾಡುವುದಕ್ಕೆ ಏನು ಕಾರ್ಯಕ್ರಮ

ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಿ ಎಂದು ಅನೇಕ ಮಾನ್ಯ ಸದಸ್ಯರುಗಳು ಕೇಳಿದರು. ಸರ್ಕಾರದ ನಿಲುವು ಏನು ಇದೆ ಅದನ್ನು ನಿರ್ಧಾರ ಮಾಡಿ ನಂತರ ನಾವು ನಿಯೋಗ ಹೋಗಬೇಕು ಎನ್ನುವ ಪ್ರಶ್ನೆಯನ್ನು ಕೆಲವರು ಎತ್ತಿದ್ದಾರೆ. ಇನ್ನೊಂದು ಬಹಳ ಆಶ್ಚರ್ಯಕರವಾದಂಥ ಡೆವಲಪ್‌ಮೆಂಟ್ ಎಂದರೆ, ಅನೇಕ ಪಕ್ಷಗಳ ನಾಯಕರು ಏನು ಪ್ರಶ್ನೆ ಎತ್ತಿದ್ದಾರೆ ಎಂದರೆ. ಸಭಾನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರಿಗೆ ಮಾತ್ರ ಪತ್ರ ಬರೆದರು ನಮಗೆ ಏನೂ ಪತ್ರ ಬರೆದಿಲ್ಲ, ನಮ್ಮನ್ನು ಕೇಳಲಿಲ್ಲ ಎಂದು ಹೇಳಿದರು. ನಾನು ಮೊದಲು ಇದನ್ನೇ ತೆಗೆದುಕೊಳ್ಳುತ್ತೇನೆ. ಒಂದು ಸಂಪ್ರದಾಯ ನಮ್ಮಲ್ಲಿ ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ೧೯೫೨ನೇ ಇಸವಿಯಿಂದ ಪ್ರಜಾತಂತ್ರ ವ್ಯವಸ್ಥೆ ಬಂದಾಗಿನಿಂದಲೂ ಈ ಸದನಗಳು ಖಾಯಂ ಆದಾಗಿನಿಂದಲೂ ಸಭಾನಾಯಕರು ಆಳುವ ಪಕ್ಷದ ನಾಯಕರಾಗುತ್ತಾರೆ. ವಿರೋಧಪಕ್ಷದ ನಾಯಕರು ಯಾವ ಪಕ್ಷ ಮಿನಿಮಮ್ ಎಷ್ಟು ಸೀಟ್‌ಗಳು ಬರಬೇಕೋ ಅಷ್ಟು ಶಕ್ತಿ ಅವರಿಗೆ ಬಂದರೆ ಆಗ ವಿರೋಧಪಕ್ಷದ ನಾಯಕರೆಂದು ಅವರನ್ನು ರೆಕಗ್ನೈಜ್ ಮಾಡುತ್ತಾರೆ. ನಾವು ಸಹ ರೆಕಗ್ನೈಜ್ ಮಾಡುತ್ತೇವೆ. ಯಾವುದೇ ವಿಷಯದಲ್ಲಿ ಯಾವ ರೀತಿಯಲ್ಲಿಯೋ ಆಗಲಿ ವಿರೋಧಪಕ್ಷಗಳ ಸಹಕಾರ ಬೇಕು ಎಂದಾಗ ನಾವು ಅವರ ಜೊತೆ ಸಮಾಲೋಚನೆ ಮಾಡುವಂಥಾದ್ದು ಮತ್ತು ಪರಾಂಬರಿಸತಕ್ಕಂಥಾದ್ದು ಮತ್ತು ಇದರ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತ್ರ. ಪ್ರತಿಯೊಬ್ಬರ ಜೊತೆಯಲ್ಲೂ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎಲ್ಲಾ ಪಕ್ಷಗಳ ಜೊತೆಯಲ್ಲಿ ನಾವು ಚರ್ಚೆ ಮಾಡುವುದಾದರೆ ವಿರೋಧಪಕ್ಷದ ನಾಯಕರ ಅವಶ್ಯಕತೆ ಇಲ್ಲ. ಅದನ್ನು ನೀವೇ ವಿಚಾರಮಾಡಿ ಇದರಿಂದ ಅರ್ಥ ಏನು ಆಗುತ್ತದೆ. ಎಂದರೆ ಅವರು ವಿರೋಧಪಕ್ಷದ ನಾಯಕರು ಇರಬಹುದು, ಅವರನ್ನು ನಾವು ರೆಕಗ್ನೈಜ್ ಮಾಡಿಲ್ಲ ಎನ್ನುವ ಅರ್ಥ ಬರುತ್ತದೆ. ಅವರು ವಿರೋಧಪಕ್ಷದ ನಾಯಕರು ಇರಬಹುದು ಆದರೆ ನಮಗಲ್ಲ ಎಂಬ ಅರ್ಥ ಬರಬಹುದು ಈ ತರಹದು ಬಹಳ ಗಂಭೀರವಾದ ವಿಷಯಗಳ ಬಗ್ಗೆ ಮತ್ತು ನಿಯೋಗ ಹೋಗುವ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರತ್ಯೇಕವಾಗಿ ನಮಗೆ ಪತ್ರ ಬರೆಯಿರಿ, ಎಂದು ಹೇಳುತ್ತೀರೇನು ? ನಮ್ಮ ಸಂಖ್ಯೆ ಎಷ್ಟೇ ಇರಲಿ, ನಮ್ಮ ಜೊತೆಯಲ್ಲಿಯೂ ಚರ್ಚೆ ಮಾಡಬೇಕು ನಮ್ಮನ್ನು ಕರೆಯಬೇಕು ಎಂದು ಹೇಳಿದರೆ ನಮ್ಮ ಹಿಂದಿನ ಸಂಪ್ರದಾಯವನ್ನು ಬಿಟ್ಟು ಹೊಸದಾಗಿ ಒಂದು ಸಂಪ್ರದಾಯ ಹಾಕಿಕೊಂಡು ಹೋಗೋಣ. ಈಗ ಇರುವಂತಹ ವಿಷಯದ ಬಗ್ಗೆ ಎಲ್ಲಾ ಪಕ್ಷಗಳ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ, ಅದೂ ಮುಖ್ಯಮಂತ್ರಿಯಾಗಿ ಮತ್ತು ಸಭಾ ನಾಯಕನಾಗಿ. ವಿರೋಧಪಕ್ಷದ ನಾಯಕರ ಜವಾಬ್ದಾರಿ ಏನೆಂದರೆ ಅವರು ಅನೇಕ ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಿ ಬಂದು ನನಗೆ ತಿಳಿಸುತ್ತಾರೆ ನಾನು ಪುನಃ ಪ್ರತ್ಯೇಕವಾಗಿ ಪ್ರತಿಯೊಬ್ಬರ ಜೊತೆಯಲ್ಲಿ ಸಮಾಲೋಚನೆ ಮಾಡಬೇಕೆನ್ನುವ ಅವಶ್ಯಕತೆ ಇಲ್ಲ ಎಂದು ಭಾವಿಸಿದ್ದೇನೆ. ಕೆಲವು ಜನ ಮಾನ್ಯ ಸದಸ್ಯರು ಇಲ್ಲ ನಮಗೂ ಹೇಳಬೇಕಾಗಿತ್ತು ನಮಗೆ ಹೇಳಿದ್ದರೆ, ನಮ್ಮನ್ನು ಕರೆದಿದ್ದರೆ ನಾವು ಏನಾದರೂ ಹೇಳುತ್ತಿದ್ದೆವು-ಎಂದು ಹೇಳಿದರು. ನಾನು ಉದ್ದೇಶ ಪೂರ್ವಕವಾಗಿ ವಿರೋಧಪಕ್ಷದ ಮಾನ್ಯ ಸದಸ್ಯರನ್ನು ಅವರು ಕಡಿಮೆ ಮಂದಿ ಇದ್ದಾರೆ ಎಂದು ಕಡೆಗಾಣಿಸಬೇಕೆನ್ನುವ ಉದ್ದೇಶದಿಂದ ಆ ರೀತಿ ಮಾಡಿಲ್ಲ. ನಮ್ಮಲ್ಲಿ ಹಿಂದಿನಿಂದ ಏನೊಂದು ಸಂಪ್ರದಾಯ ಇತ್ತೋ ಅದನ್ನು ಬೆಳೆಸಿಕೊಂಡು ಆ ಸಂಪ್ರದಾಯವನ್ನು ಕಾಪಾಡಿಕೊಂಡು ಹೋಗಿದ್ದೇನೆ. ಯಾರನ್ನೂ ಅಲಕ್ಷ್ಯ ಮಾಡಬೇಕೆನ್ನುವ ದೃಷ್ಟಿ ನನಗೆ ಇಲ್ಲ. ಪ್ರತಿಯೊಂದು ಪಕ್ಷಕ್ಕೂ ಪತ್ರ ಬರೆಯಬೇಕೆಂದರೆ ಎ.ಐ.ಎ.ಡಿ.ಎಂ.ಕೆ. ದವರಿಗೂ ಬರೆಯಬೇಕು ಮತ್ತು ಮುಸ್ಲಿಂ ಲೀಗ್ ಪಕ್ಷದವರಿಗೂ ಪತ್ರ ಬರೆಯಬೇಕು ಎಂ.ಇ.ಎಸ್. ನವರಿಗೂ ಬರೆಯಬೇಕು, ರೈತ ಸಂಘದವರು ೨-೩ ಜನ ಇದ್ದಾರೆ, ಅವರಿಗೂ ಪತ್ರ ಬರೆಯಬೇಕಾಗುತ್ತದೆ. ವಿರೋಧಪಕ್ಷದಲ್ಲಿ ೮-೧೦ ಪಕ್ಷಗಳು ಇವೆ. ಆ ಪಕ್ಷಗಳಲ್ಲಿ ನಾಯಕರು ಇದ್ದಾರೆ. ಅವರಲ್ಲಿಯೂ ಸಮಾಲೋಚನೆ ಮಾಡಬೇಕಾಗುತ್ತದೆ. ಸಂಪ್ರದಾಯದ ಪ್ರಕಾರ ವಿರೋಧಪಕ್ಷದ ನಾಯಕರು ಯಾರು ಇರುತ್ತಾರೋ ಅವರು ಎಲ್ಲಾ ವಿರೋಧ ಪಕ್ಷಗಳನ್ನು ಪ್ರತಿನಿಧಿಸತಕ್ಕಂಥವರು. ಆ ಸಂಪ್ರದಾಯವನ್ನು ನಾನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಿದ್ದೇನೆ. ಅದು ಬೇಡ, ಪ್ರತಿಯೊಬ್ಬರಿಗೂ ಪತ್ರ ಬರೆಯಬೇಕು ಎಂದು ಹೇಳಿದರೆ ನಾನು ಹಿಂದುಮುಂದು ನೋಡುವುದಿಲ್ಲ. ಇನ್ನು ಪ್ರಶ್ನೆ ಏನೆಂದರೆ. ಇವತ್ತು ನಮ್ಮ ಮುಂದೆ ಎರಡು ರೀತಿಯ ಡೇಂಜರ್ ಇದೆ. ಇದನ್ನು ನನ್ನ ಹಿಂದಿನ ಮೂರು ತಿಂಗಳ ಅನುಭವದಿಂದ ಹೇಳುತ್ತಿದ್ದೇನೆ. ಅಂದರೆ, ಮೊದಲು ತಾತ್ಪೂರ್ತಿಕ ರೆಕವರಿ ಮಾಡುವುದನ್ನು ಸ್ಟೇ ಮಾಡುತ್ತೇನೆಂದು ಹೇಳಿದ್ದ ನೆಪವನ್ನೇ ಹಿಡಿದುಕೊಂಡು ನಬಾರ್ಡ್‌ನವರು ರೀ-ಫೈನಾನ್ಸ್ ಸ್ಟಾಪ್ ಮಾಡುತ್ತೇವೆಂದು ಪತ್ರ ಬರೆದರು. ಅದಾದಮೇಲೆ ನಾನು ಕೇಂದ್ರ ಸರ್ಕಾರದವರೊಡನೆ ಮಾತನಾಡಿದಾಗ, ರೆಕವರಿಯನ್ನು ಯಾವ ಕಾರಣದಿಂದಲೂ ತಡೆಯಬಾರದು, ಅದು ತಪ್ಪಾಗುತ್ತದೆ ರೆಕವರಿ ಮುಂದುವರಿಸಿರಿ ಎಂದು ನನಗೆ ಕೇಂದ್ರದವರು ಅಡ್ವೈಸ್ ಮಾಡಿದರು. ಅದರ ಪ್ರಕಾರ ರೆಕವರಿಯನ್ನು ಕಂಟಿನ್ಯೂ ಮಾಡುತ್ತೇವೆಂದು

ಹೇಳಿದ ಮೇಲೆ ನಬಾರ್ಡ್‌ನವರು ಸಾಲ ಕೊಡುವ ಬಗ್ಗೆ ಸಸ್ಪೆನ್ಷನ್ ಆರ್ಡರ್ ಮಾಡಿದ್ದನ್ನು ವಿತ್‌ಡ್ರಾ ಮಾಡಲಿಲ್ಲ. ಅವರು ಏಕೆ ವಿತ್‌ಡ್ರಾ ಮಾಡಲಿಲ್ಲವೆಂದು ನಾನು ನಮ್ಮ ಅಧಿಕಾರಿಗಳನ್ನು ಕೇಳಿದೆ. ರೆಕವರಿ ನಿಲ್ಲಿಸಿದ್ದಾರೆ ಎನ್ನುವಂಥ ಕುಂಟು ನೆಪದ ಮೇಲೆ ಅವರು ರೀ–ಫೈನಾನ್ಸ್ ಸ್ಟಾಪ್ ಮಾಡಿದ್ದಾರೆಂದು ಹೇಳಿದರು. ನಾವು ರೆಕವರಿಯನ್ನು ಕಂಟಿನ್ಯೂ ಮಾಡುತ್ತೇವೆಂದು ಹೇಳಿದ ಮೇಲೂ ಅವರು ರೀ–ಫೈನಾನ್ಸ್ ಏಕೆ ಮಾಡಬಾರದೆಂದು ನಾನು ಕೇಳಿದಾಗ, ಅವರು ಅದನ್ನು ಬಿಟ್ಟು ನಿಮ್ಮ ಹಿಂದಿನ ಸಾಲ ಕೊಡುವುದಿದೆಯಲ್ಲಾ, ಅಂದರೆ ಸಬ್ಸಿಡಿ ಇಂಟರೆಸ್ಟ್ ಕೊಡುವುದು ಇದೆ. ಅದು ಕೊಟ್ಟರೆ ನಾವು ರೀ–ಫೈನಾನ್ಸ್ ಮಾಡುತ್ತೇವೆಂದು ಹೇಳಿದರು. ಅಂದರೆ ಅವರಿಗೆ ಒಂದು ನೆಪ ಸಿಕ್ಕಿದರೆ ಸಾಕು ಯಾವುದಾದರು ಒಂದನ್ನು ಹಿಡಿದುಕೊಂಡು ಇವತ್ತು ನಮ್ಮನ್ನು ಸಂಕಷ್ಟಕ್ಕೆ ಈಡು ಮಾಡುತ್ತಾರೆ. ನಮ್ಮನ್ನು ಎಂದರೆ ನಮ್ಮ ಮುಖಾಂತರ ರೈತರುಗಳನ್ನು, ಕರ್ನಾಟಕದ ರೈತ ಜನಾಂಗವನ್ನು ಸಂಕಟಕ್ಕೆ ಈಡು ಮಾಡಬೇಕೆನ್ನುವ ಪ್ರವೃತ್ತಿ ಅವರಲ್ಲಿ ಕಂಡು ಬಂದಿದೆ. ಅವರು ಯಾವ ಆಧಾರದ ಮೇಲೆ ಈ ಪ್ರವೃತ್ತಿಯನ್ನು ತಾಳಿದ್ದಾರೋ ಗೊತ್ತಿಲ್ಲ. ಇವತ್ತು ಇದನ್ನು ಏಕೆ ಪ್ರಸ್ತಾಪ ಮಾಡಿದೆ ಎಂದರೆ ಇವತ್ತು ಎರಡು ನೆಪ ಅವರ ಕೈಗೆ ಸಿಕ್ಕಿದೆ- ಎರಡು ನೆಪ ಯಾವುದೆಂದರೆ, ಒಂದು ನಾವು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇವೆ, ಇನ್ನು ಮುಂದೆ ನಾವು ಸಬ್ಸಿಡಿ ಕಂಟಿನ್ಯೂ ಮಾಡುತ್ತೇವೆಂದು. ಯಾವ ದಿವಸದಿಂದ ಹಿಂದಿನ ಸರ್ಕಾರ ಸಬ್ಸಿಡಿ ವಿತ್‌ಡ್ರಾ ಮಾಡಿತ್ತೋ ಆ ದಿವಸದಿಂದ ನಾವು ಸಬ್ಸಿಡಿ ಕಂಟಿನ್ಯೂ ಮಾಡುತ್ತೇವೆಂದು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇವೆ. ನೀವು ವಿತ್‌ಡ್ರಾ ಮಾಡಿದ್ದೀರೆಂದರೆ ನಿಮ್ಮ ಮನಸ್ಸಿನಿಂದ ವಿತ್‌ಡ್ರಾ ಮಾಡಿದ್ದೀರೆಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡುತ್ತಿಲ್ಲ. ನೀವೂ ಒತ್ತಾಯಕ್ಕೆ ಮಣಿದು ನೀವು ವಿತ್‌ಡ್ರಾ ಮಾಡಿದ್ದೀರಿ. ಒತ್ತಾಯಕ್ಕೆ ಮಣಿದು ನೀವು ಅಪೆಕ್ಸ್ ಬ್ಯಾಂಕುಗಳಿಗೆ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಗೆ, ನಬಾರ್ಡ್‌ನವರು ಒತ್ತಡ ತರುತ್ತಿದ್ದಾರೆ, ಅದಕ್ಕಾಗಿ ಇನ್ನು ಮುಂದೆ ನೀವು ಕೊಡುವ ಸಬ್ಸಿಡಿ ನಿಲ್ಲಿಸಿದ್ದೇವೆಂದು ನೀವು ನಿಮ್ಮ ಬ್ಯಾಂಕುಗಳಿಗೆ ತಿಳಿಸಬೇಕು ಎನ್ನುವ ಪತ್ರವನ್ನು ನೀವು ಬರೆದಿರಿ. ಯಾವತ್ತು ಪತ್ರ ಬರೆದು ನಿಲ್ಲಿಸಿದ್ದಿರೋ ಅವತ್ತಿನಿಂದ ಸಬ್ಸಿಡಿ ಕೊಡಬೇಕೆಂದು ನಮ್ಮ ಹಣಕಾಸಿನ ಮಂತ್ರಿಗಳು ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಅದರ ಮೇಲೆ ಅವರು ರೀ ಫೈನಾನ್ಸ್ ನಿಲ್ಲಿಸುತ್ತೇವೆ ಎನ್ನುವ ಪತ್ರವನ್ನು ಬರೆದಿದ್ದಾರೆ. ಇದು ಒಂದನೆಯದು. ಇನ್ನೊಂದು ನೆಪ ಅವರಿಗೆ ಸಿಕ್ಕಿರುವುದೆಂದರೆ. ೮೦ ಪರ್ಸೆಂಟ್ ರೆಕವರಿ ಮಾಡುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗಿಲ್ಲ. ನಾವು ಈಗಾಗಲೇ ಡಿಕ್ಲೇರ್ ಮಾಡಿದ್ದೇವೆ, ನಾವು ಯಾರಿಗೂ ಸಮಾಧಾನವಾಗಲಿ ಎಂದು ಹೇಳಿಲ್ಲ, ರೈತರುಗಳಿಗೆ ಅನುಕೂಲ ಮಾಡಿ ಕೊಡಬೇಕೆನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಹಿಂದಿನ ಸರ್ಕಾರ ಕೂಡಾ ಇವರ ಬಗ್ಗೆ ಪ್ರಯತ್ನ ಮಾಡಿತ್ತು ಆದರೆ ನಬಾರ್ಡ್‌ನವರ ಒತ್ತಾಯಕ್ಕೆ ಮಣಿದು ಇದನ್ನು ತಾವು ವಿತ್‌ಡ್ರಾ ಮಾಡಿದಿರಿ. ರೈತರ ಸಬ್ಸಿಡಿ ಇಂಟರೆಸ್ಟ್ ಏನಿದೆ ಅದನ್ನು ಕೊಡಬೇಕೆನ್ನುವ ನೀತಿಯಲ್ಲಿ ಒಂದು ಧೋರಣೆಯಲ್ಲಿ, ಒಂದು ಕಾರ್ಯಕ್ರಮದಲ್ಲಿ ವಿಶ್ವಾಸ ಇಟ್ಟುಕೊಂಡು ಇವತ್ತಿನ ದಿವಸ ಅನೌನ್ಸ್ ಮಾಡಿದ್ದೇವೆ. ಅದನ್ನು ಹಿಂದಕ್ಕೆ ತೆಗೆದುಕೊಳ್ಳುವಂಥ ಪ್ರಶ್ನೆಯೇ ಇಲ್ಲ. ಇನ್ನೂ ಒಂದು ಪರಿಸ್ಥಿತಿ ಬರುತ್ತದೆ. ಅದೇನೆಂದರೆ, ರೆಕವರಿ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಇವತ್ತಿನ ದಿವಸ ರೆಕವರಿಯಾಗುತ್ತಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಬಾರ್ಡ್‌ನವರು ಏನು ರೂಲ್ ಮಾಡಿದ್ದಾರೆಂದರೆ, ರೆಕವರಿ ೮೦ ಪರ್ಸೆಂಟ್ ಮಾಡಬೇಕೆಂದು ಟಾರ್ಗೆಟ್ ಇಟ್ಟಿದ್ದಾರೆ. ಆ ಟಾರ್ಗೆಟ್ ರೀಚ್ ಆಗದಿದ್ದರೆ ರೀ–ಫೈನಾನ್ಸ್ ಮಾಡುವ ಹಾಗಿಲ್ಲ. ಇವತ್ತು ನಾವು ೮೦ ಪರ್ಸೆಂಟ್ ರೆಕವರಿ ಮಾಡುವುದಕ್ಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ದೇಶದಲ್ಲಿ ಸಾಲ ಮನ್ನಾ ಬಗ್ಗೆ ಚರ್ಚೆ ನಡೆಯುತ್ತಿರುವುದರಿಂದ ಯಾವ ರಾಜ್ಯದಲ್ಲೂ ಹಣ ವಸೂಲಾಗುತ್ತಿಲ್ಲ. ಉತ್ತರ ಪ್ರದೇಶದಲ್ಲಿ ೨ ಪರ್ಸೆಂಟ್ ಕೂಡಾ ರೆಕವರಿ ಆಗಿಲ್ಲ, ಮಹಾರಾಷ್ಟ್ರದಲ್ಲಿ ೪ ಪರ್ಸೆಂಟ್ ಕೂಡಾ ರಿಕವರಿ ಆಗಿಲ್ಲ. ಇಡೀ ದೇಶದಲ್ಲಿ ರೈತರುಗಳು ಸಾಲವನ್ನು ಕಟ್ಟುತ್ತಿಲ್ಲ. ಇದರ ಬಗ್ಗೆ ನಾವು ನೀವು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಅದನ್ನೇ ಹೇಳುತ್ತಾ ಇದ್ದೇನೆ. ನಾನು ಹೇಳುತ್ತಿರುವಂಥಾದ್ದು ಏನೆಂದರೆ, ಇವೊತ್ತು ಅವರ ಕಾನೂನು, ಅವರ ಧೋರಣೆ, ಅವರ ಪಾಲಿಸಿ, ಏನಿದೆ ಅದರ ಪ್ರಕಾರ ೮೦ ಪರ್ಸೆಂಟ್‌ನಷ್ಟು ರಿಕವರಿ ಆದರೆ ಮಾತ್ರ ಮುಂದೆ ಸಾಲದನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ನೀವು ಹೇಳಿದ ಹಾಗೆ. ಉತ್ತರ ಪ್ರದೇಶದಲ್ಲಾಗಲಿ. ಮಧ್ಯಪ್ರದೇಶದಲ್ಲಾಗಲಿ. ಒರಿಸ್ಸಾದಲ್ಲಾಗಲಿ, ಅವರಿಗೆ ಆದ ಗತಿಯು ನಮಗೂ ಆಗಲಿ ಎಂದು ಕುಳಿತುಕೊಳ್ಳೋಣವೆ ? ಅಥವಾ

ಅದರ ಬಗ್ಗೆ ನಾವುಗಳು ಜಾಗ್ರತೆ ವಹಿಸಿಕೊಂಡು ನಮ್ಮ ರೈತರ ಹಿತರಕ್ಷಣೆ ಮಾಡುವುದರ ಬಗ್ಗೆ ಏನಾದರೂ ಇವೊತ್ತಿನಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣವೆ ? ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಏಕೆಂದರ, ಈ ಎರಡು ನಮಗಳನ್ನು ಬಿಡ್ಡಿ ಇನ್ನು ಮುಂದೆ ಫೈನಾನ್ಸ್ ಮಾಡುವುದನ್ನು ನಬಾರ್ಡ್‌ನವರು ನಿಲ್ಲಿಸಿದರೆ ಮುಂದೆ ನಮ್ಮ ರೈತರ ಗತಿ ಏನು ? ಇಂಥ ಒಂದು ಸೀಮಿತವಾದ ಪ್ರಶ್ನೆ ಇವೊತ್ತು ನಮ್ಮ ಮುಂದಿದೆ. ಅದಕ್ಕಾಗಿ ಈ ಕುರಿತು ಕೇಂದ್ರ ಸರಕಾರದವರ ಜೊತೆಗೆ ಮಾತನಾಡಬೇಕೆಂದು ನಾನು ಹೇಳಿದ್ದೇನೆ. ಕರ್ನಾಟಕಕ್ಕೆ ಮಾತ್ರ ಈ ನೀತಿಯನ್ನು ಏಕೆ ಅನ್ವಯ ಮಾಡುತ್ತೀರಿ ? ಎರಡನೇ ರಾಜ್ಯಗಳಲ್ಲಿ ನೋಡಿ, ಅಲ್ಲಿ ೪೦ ಪರ್ಸೆಂಟ್‌ನಷ್ಟು ರಿಕವರಿ ಆಗಿದೆಯೆ ? ಎರಡನೇ ರಾಜ್ಯಗಳಲ್ಲಿ ರಿಕವರಿ ಪರ್ಸೆಂಟೇಜ್ ಎಷ್ಟಾಗಿದೆ ? ಎರಡನೇ ರಾಜ್ಯಗಳಿಗೆ ನಬಾರ್ಡ್‌ನವರು ಈ ರೀತಿಯಾಗಿ ನಮಗೆ ಬರೆದಂತೆ ಪತ್ರವನ್ನು ಬರೆದಿದ್ದಾರೆಯೆ ? ನಬಾರ್ಡ್‌ನವರು ಈ ರೀತಿಯಾಗಿ ಪತ್ರ ಬಂದ ಮೇಲೆ ಎರಡನೇ ರಾಜ್ಯಗಳವರು ಕೇಂದ್ರ ಸರಕಾರಕ್ಕೆ ಈ ಬಗ್ಗೆ ಪ್ರತಿನಿಧಿತ್ವದ ಪ್ರೊಟೆಸ್ಟ್ ಮಾಡಿ ಇದನ್ನು ಮಾಡಿಸಿ ಬಿಡಿ, ನಬಾರ್ಡ್‌ನವರಿಗೆ ಡೈರೆಕ್ಷನ್ಸ್ ಕೊಡಿ ಎಂಬ ಮಾತನು ಹೇಳಿದ್ದಾರೋ ಎನ್ನುವ ಬಗ್ಗೆ ಏನು ವಿವರಗಳು ಬೇಕು, ಅದನ್ನು ಪ್ರತ್ಯೇಕವಾಗಿ ಕಲೆಕ್ಟ್ ಮಾಡುತ್ತೇನೆ. ಆ ಪ್ರಶ್ನೆಯು ಬೇರೆ. ಇವೊತ್ತು ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಕರ್ನಾಟಕದ ರೈತರಿಗೆ ಮುಂದಿನ ವರ್ಷದಿಂದ ಸಿಗುವ ಸಾಲದ ಬಗ್ಗೆ ನಾವುಗಳು ವಿಚಾರ ಮಾಡುವಾಗ ಎರಡು ಖಡ್ಗಗಳು ನಮ್ಮ ಕುತ್ತಿಗೆಯ ಮೇಲೆ ನೇತಾಡುತ್ತಾ ಇರುವಂತೆ ಆಗುತ್ತಿದೆ. ಅದಕ್ಕಾಗಿ ಈ ಬಗ್ಗೆ ನಾವು ಈಗ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು ? ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಪ್ರತ್ಯೇಕವಾಗಿ ಕೇಂದ್ರ ಸರಕಾರದವರ ಹತ್ತಿರ ಹೋಗಿ ಅವರ ಮನ ಒಲಿಸಿ, ಇವೊತ್ತಿನ ಪರಿಸ್ಥಿತಿಯಲ್ಲಿ ನಬಾರ್ಡ್‌ನವರು ಈ ರೀತಿಯಿಂದ unreasonable, impracticble restrictions. ಹಾಕುವುದು ಬೇಡ ಎನ್ನುವಂಥ ಡೈರೆಕ್ಷನ್ಸ್‌ನ್ನು ಕೊಡಿಸೋಣ ಎನ್ನುವಂಥ ಒಂದು ವಿಚಾರವನ್ನು ಒಂದು ಸಲಹೆಯನ್ನು ತಮ್ಮ ಮುಂದಿಟ್ಟಿದ್ದೇನೆ. ಮಾನ್ಯ ವಿರೋಧಿ ಪಕ್ಷದ ನಾಯಕರಿಗೆ ನಾನು ಇವೊತ್ತು ಹೇಳುತ್ತಾ ಇದ್ದೇನೆ, ತಾವುಗಳು ಹೇಳಿದ ದಿವಸ ಒಂದು ನಿಯೋಗವನ್ನು ಮಾಡಿಕೊಂಡು ಅಲ್ಲಿಗೆ ಹೋಗೋಣ, ಒಂದು ವೇಳೆ ಇತರ ಪಕ್ಷಗಳವರು ಕೂಡ ವಿರೋಧಪಕ್ಷದ ನಾಯಕರನ್ನು ಮಾತ್ರವಲ್ಲ ನಮ್ಮನ್ನೂ ಕರೆಯಬೇಕು ಎಂದರೆ ಅದಕ್ಕೂ ನಾನು ತಯಾರಾಗಿದ್ದೇನೆ, ಅದನ್ನು ತಾವುಗಳು ನಿರ್ಣಯ ಮಾಡಿಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ವಿರೋಧಿ ಪಕ್ಷದ ನಾಯಕರ ಬಗ್ಗೆ ನಮಗೆ ಗೌರವ ಇದೆ. ಅನೇಕ ವಿಷಯಗಳಲ್ಲಿ ನಾವು ಸಮ್ಮತದಿಂದ ಇದ್ದಾಗ ನಾವು ಒಟ್ಟಿಗೆ ಹೋಗಿ ಮಾಡಿದಂಥ ಕಾರ್ಯಕಲಾಪಗಳನ್ನು ತಾವು ನೋಡಿದ್ದೀರಿ. ನಮ್ಮಲ್ಲಿ ಸ್ವಾತಂತ್ರ್ಯ ಇರುವುದರಿಂದ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇವೆ ಆದರೆ ಆಡಳಿತ ಪಕ್ಷಕ್ಕೆ ಆ ಸ್ವಾತಂತ್ರ್ಯ ಇಲ್ಲದ ಕಾರಣ ನೀವು ವ್ಯಕ್ತ ಮಾಡುವುದಿಲ್ಲ. ಪ್ರತಿಯೊಂದು ಪಕ್ಷದ ಮುಖಂಡರನ್ನು ಕರೆದು ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದು ಹಿಂದಿನ ಆರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಜನತಾ ಸರಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಅನೇಕ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ಮಾಡುವಾಗ ಎಲ್ಲರನ್ನೂ ಕರೆದು ಚರ್ಚೆ ಮಾಡುತ್ತಾ ಇದ್ದರು.

ಶ್ರೀ ವೀರೇಂದ್ರ ಪಾಟೀಲ್.—ನಾನು ಇನ್ನೂ ಹೆಚ್ಚು ಈ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ವಿಚಾರದಲ್ಲಿ ತಾವುಗಳು ಏನು ಮಾಡುತ್ತೀರೊ ಮಾಡಿ. ನಬಾರ್ಡ್‌ನವರು ಈ ರೀತಿಯಾಗಿ ಗೈಡ್ ಲೈನ್ಸನ್ನು ಮೊದಲಿಂದಲೂ ಕೊಡುತ್ತಾ ಬಂದಿದ್ದಾರೆ ಎನ್ನುವ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದೇನೂ ಹೊಸದಲ್ಲ. ಈ ಕೆಲಸವನ್ನು ಅವರು ೧೯೮೪ನೇ ಇಸವಿಯಿಂದ ಮಾಡುತ್ತಾ ಬಂದಿದ್ದಾರೆ. ಇಂಟ್ರೆಸ್ಟ್ ಸಬ್ಸಿಡಿ ೧೯೮೪ರ ವರೆಗೆ ನಡೆಯುತ್ತಾ ಇತ್ತು. ೧೯೮೪ ರಿಂದ ಇಂಟ್ರೆಸ್ಟ್ ಸಬ್ಸಿಡಿ ಕೊಡುತ್ತಾ ಇರುವಂಥಾದ್ದು ನಬಾರ್ಡ್‌ನವರಿಗೆ ಗೊತ್ತಿದ್ದರೂ ಕೂಡ ರೀಫೈನಾನ್ಸ್ ನಿಲ್ಲಿಸುತ್ತೇವೆ ಎಂದು ಹೇಳಿದ್ದು ೧೬ನೇ ಡಿಸೆಂಬರ್ ೧೯೮೮ರಲ್ಲಿ ಅದಕ್ಕೂ ಮೊದಲು ಗೈಡ್‌ಲೈನ್ಸ್ ಬರುತ್ತಾ ಇತ್ತೇ ಹೊರತಾಗಿ ಇನ್ನು ಮುಂದು ರೀಫೈನಾನ್ಸ್ ಕೊಡುವುದಿಲ್ಲ ಎನ್ನುವಂಥ ನಿಲುವನ್ನು ತಾಳಿರಲಿಲ್ಲ. ಈ ಪ್ರಶ್ನೆಯು ಈಗ ನಮ್ಮ ಮುಂದಿಲ್ಲದಿದ್ದರೂ ಕೂಡ ಹೇಳಿದ್ದೇನೆ.

ಇನ್ನು, ರೈತರ ಸಾಲ ಮನ್ನಾದ ಬಗ್ಗೆ ರಾಜ್ಯ ಸರಕಾರದವರ ನೀತಿ ಏನು ? ಧೋರಣೆ ಏನು ? ಎನ್ನುವ ಮಾತನ್ನು ಹೇಳಿದ್ದೀರಿ. ಈ ಬಗ್ಗೆ ಹಿಂದೆಯೂ ಬಹಳಷ್ಟು ಚರ್ಚೆ ಮಾಡಿದ್ದೇವೆ ಇವೊತ್ತು ಇದರ ಬಗ್ಗೆ ಹೇಳಬೇಕೆಂದರೆ. ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಯವರಿಂದ ನನಗೆ ಒಂದು ಪತ್ರ ಬಂದಿದೆ. ೨೩–೩–೧೯೯೦ರ ಆ ಪತ್ರದಲ್ಲಿ ನೀವು ಏನು ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ ಮತ್ತು ಆ ಬಗ್ಗೆ ನಿಮ್ಮ ಯೋಜನೆಗಳು ಏನು ಎಂದು ಕೇಳಿ, ಆ ಕುರಿತು ಒಂದು ಯೋಜನೆಯನ್ನು ತಯಾರು

ಮಾಡಿ ಕೇಂದ್ರಕ್ಕೆ ಕಳುಹಿಸುವಂತೆ ಕೇಳಿಕೊಂಡು ಅವರ ಬಜೆಟ್ ಭಾಷಣದ ಎಕ್ಸ್‌ಟ್ರಾಕ್ಟ್ ಪ್ರತಿಯೊಂದನ್ನು ಹಾಕಿ ಇದೇ ರೀತಿಯ ಯೋಜನೆಯೊಂದನ್ನು ತಾವುಗಳು ಮಾಡಿ ನಮ್ಮ ಪರಿಶೀಲನೆಗಾಗಿ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ನಾನು ಈಗಾಗಲೇ ಅವರಿಗೆ ಎಕ್‌ನಾಲೆಜ್‌ಮೆಂಟ್‌ನ್ನು ಕಳುಹಿಸಿದ್ದೇನೆ. ಏಕೆಂದರೆ ನಮಗೆ ಯೋಜನೆ ಮಾಡುವುದಕ್ಕೆ ಸಮಯ ಬೇಕಾಗುತ್ತದೆ. ನಾವು ಕೂಡ ಸಹಕಾರಿ ಕ್ಷೇತ್ರದಲ್ಲಿರತಕ್ಕಂಥ ಸಾಲ ಮನ್ನಾ ಮಾಡುವುದರ ಬಗ್ಗೆ ಒಂದು ಯೋಜನೆಯನ್ನು ನಿರೂಪಣೆ ಮಾಡಿ ಇಷ್ಟರಲ್ಲಿಯೇ ಕೇಂದ್ರಕ್ಕೆ ಕಳುಹಿಸಿಕೊಡುತ್ತೇವೆ ಎಂದು ಮಾರ್ಚ್ ೨೫-೩-೧೯೯೦ಕ್ಕೆ ಪತ್ರ ಬರೆದಿದ್ದೇನೆ. ಸಾಲ ಮನ್ನಾ ಮಾಡುವ ಬಗ್ಗೆ ಪಬ್ಲಿಕ್ ಸೆಕ್ಟರ್ ಬ್ಯಾಂಕ್‌ಗಳಲ್ಲಿ ಒಂದು ಸ್ಕೀಮ್ ಮಾಡಿಕೊಂಡಿದ್ದೇವೆ ಅದೇ ರೀತಿ ನಿಮ್ಮ ಸಹಕಾರಿ ಬ್ಯಾಂಕ್‌ಗಳ ಸಾಲದ ಬಗ್ಗೆಯೂ ಒಂದು ಯೋಜನೆಯನ್ನು ರಾಜ್ಯಗಳು ತಯಾರು ಮಾಡಿ ನಮಗೆ ಕಳಿಸಿಕೊಡಿ ಎಂದು ಕೇಳಿದ್ದಾರೆ. ನಾನು ಯೋಜನೆ ತಯಾರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಆ ಕಾರ್ಯ ಶುರುವಾಗಿದೆ. ಅದು ಪೂರ್ಣವಾದ ಮೇಲೆ ಕೇಂದ್ರಕ್ಕೆ ಕಳಿಸಿಕೊಡುತ್ತೇವೆ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಮುಂದಿನ ವರ್ಷ ಸಾಲ ಸಿಗುವುದಕ್ಕೂ ಹಿಂದಿನ ವರ್ಷದ ಸಾಲ ಮನ್ನಾಕ್ಕೂ ಒಂದು ವೇಳೆ ನಾವು ಲಿಂಕ್ ಮಾಡಿದರೆ ಮುಂದಿನ ವರ್ಷ ಸಾಲ ಸಿಗುವಂಥ ಗಂಭೀರ ಪ್ರಶ್ನೆ ಏನಿದೆ ಅದಕ್ಕೆ ತೊಡಕಾಗುತ್ತದೆ. ಆದ್ದರಿಂದ ಹಿಂದಿನ ಸಾಲವನ್ನು ಯಾವ ರೀತಿ ಮನ್ನಾ ಮಾಡಬಹುದೆಂಬುದನ್ನು ಮೊದಲು ನೋಡೋಣ. ಕೇಂದ್ರದವರು ಕೇಳಿದ್ದಾರೆ, ನಾವೂ ಕಳಿಸಿಕೊಡುತ್ತೇವೆ. ಆ ವೇಳೆಗೆ ನಿಮ್ಮಿಂದ ಸಹಕಾರ ಪಡೆಯುವ ಅವಶ್ಯಕತೆ ಕಂಡುಬಂದರೆ ನಿಮ್ಮ ಜೊತೆ ಸಮಾಲೋಚನೆ ಮಾಡಲು ತಯಾರಾಗಿದ್ದೇನೆ ಮತ್ತು ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕೇಂದ್ರಕ್ಕೆ ನಾವು ನೀವೆಲ್ಲರೂ ಪ್ರಭಾವ ಬೀರಬೇಕೆಂದು ನಿಮ್ಮ ಮುಂದೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ಇರುವ ಚರ್ಚೆ ಮುಗಿಯುವುದಕ್ಕೆ ಬಂದಿದೆ. ತಾವೆಲ್ಲರೂ ಬರುವುದದಕ್ಕೆ ಒಪ್ಪಿಕೊಂಡಿದ್ದೀರಿ. ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆಯುತ್ತೇನೆ. ಬೇರೆ ಪಕ್ಷದ ಮುಖಂಡರು ತಮಗೂ ಪ್ರತ್ಯೇಕವಾಗೇ ಬರೆಯಬೇಕೆಂದು ಕೇಳಿದರೆ ಬರೆಯುತ್ತೇನೆ. ಬಹುಶಃ ಏಪ್ರಿಲ್ ಮೊದಲ ವಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಈ ಪ್ರಶ್ನೆ ಇತ್ಯರ್ಥಕ್ಕಾಗಿ ಹೋಗುವುದು ಒಳ್ಳೆಯದೆಂದು ಹೇಳುತ್ತೇನೆ ಇದಕ್ಕೆ ಈ ಸದನ ಸಂಪೂರ್ಣ ಅನುಮೋದನೆ ನೀಡುವುದೆಂದು ನಂಬಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ.—ತಾವು ಮಾತನಾಡುವಾಗ ಹೇಳಿದಿರಿ, ೪೦ ಪರ್ಸೆಂಟ್ ರಿಕವರಿ ಆಗದಿದ್ದರೆ ಅವರು ಸಾಲ ಕೊಡುವುದಿಲ್ಲ ಎಂದು. ಈಗಿರುವ ಸಮಸ್ಯೆ ನಮ್ಮ ರಾಜ್ಯದ್ದಷ್ಟೇ ಅಲ್ಲ. ಇಡೀ ರಾಷ್ಟ್ರದ್ದು. ಆದ್ದರಿಂದ ನೀವೇನೂ ಎದೆಗುಂದಬೇಕಾಗಿಲ್ಲ. ಯಾರನ್ನಾದರೂ ನಬಾರ್ಡ್‌ಗೆ ಕರೆಸಿ ಮಾತನಾಡಿಸಿ. ನೀವು ಕಳೆದ ಮೂರು ತಿಂಗಳಿಂದ ಏನೂ ಪ್ರಯತ್ನಪಟ್ಟಿಲ್ಲ. ಆಮೇಲೆ ೬೦೦ ಕೋಟಿ ರೂಪಾಯಿ ನಮ್ಮದು ಶಾರ್ಟ್ ಟರ್ಮ್ ಲೋನ್ ಡಿಪಾಜಿಟ್ ಏನಿದೆ ಅದರಿಂದ ಒಂದು ಪಕ್ಷ ಅವರು ಸಾಲ ಕೊಡದಿದ್ದರೆ ಇದರಿಂದ ಮ್ಯಾನೇಜ್ ಮಾಡಬಹುದು. ನೀವು ಅವರನ್ನು ಕರೆಸಿ ಮಾತನಾಡಿಸಿ. We can manage for the present.

ಶ್ರೀ ವೀರೇಂದ್ರ ಪಾಟೀಲ್.—ಮ್ಯಾನೇಜ್ ಮಾಡುತ್ತೇವೆಂದು ಅವರ ಹತ್ತಿರ ನಾವು ಹೋಗುವುದಿಲ್ಲ. ನಿಮ್ಮ ಹಣವನ್ನು ಸದ್ವಿನಿಯೋಗ ಮಾಡಲು ಸಾಲ ಕೊಡಿ ಎಂದು ಹೋಗುತ್ತೇನೆ

ಶ್ರೀ ಆರ್.ಎಲ್. ಜಾಲಪ್ಪ.—ಮನಸ್ಸು ಮಾಡಿದರೆ ಹೋಗಬೇಕಾಗಿಲ್ಲ. ಉದಾಹರಣೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರು ನಬಾರ್ಡ್ ನೆರವಿನಿಂದ ಒಂದು ಪೈಸೆ ಸಾಲ ತೆಗೆದುಕೊಳ್ಳುತ್ತಿಲ್ಲ. They are managing with their own funds. When they can manage, we can also manage ourselves with the available funds.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯರೆ, ಮುಖ್ಯಮಂತ್ರಿಗಳು ಹೇಳಿದ ಒಂದು ಪ್ರಪೋಸಲ್ಸ್ ಅನ್ನು ಆದಷ್ಟು ಬೇಗ ಮಾಡುವುದು ಒಳ್ಳೆಯದು. ಹೊಸದಾಗಿ ಸಾಲ ಸಿಗುವುದು ಈಗ ಮುಖ್ಯ ಅಲ್ಲದೆ. ಹಳೇ ಸಾಲ ತೆಗೆದುಕೊಂಡಿರುವವರೇ ಶೇಕಡ ೯೯ರಷ್ಟು ಹೊಸ ಸಾಲ ತೆಗೆದುಕೊಳ್ಳುವುದರಿಂದ ಯೋಜನೆ ಎಲ್ಲ ಲೇಟ್ ಆಗುವುದು. ಆದರೂ ಆದಷ್ಟು ಬೇಗ ಯೋಜನೆ ತಯಾರಿಸಿ ಒಂದು ತಿಂಗಳಿಂದ ಇದರ ಬಗ್ಗೆ ಚರ್ಚೆಯಾಗುತ್ತಿದೆ. ನಾಳೆ, ನಾಡಿದ್ದು ಅಂತಿಮ ರೂಪ ಕೊಟ್ಟರೆ ಅದರಲ್ಲಿ ನಮ್ಮ ಪಾತ್ರ ಏನೆಂದು ನಮಗೆ ತಿಳಿಸಿದರೆ ನಾವೂ ಬರುತ್ತೇವೆ. ವಿರೋಧಪಕ್ಷದ ನಾಯಕರೂ ಇದನ್ನು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು.—ಸಮಾಲೋಚನೆ ನಿಮ್ಮಲ್ಲೇ ಮಾಡಿಕೊಂಡು ತಿಳಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಮಗೆ ವಿರೋಧಪಕ್ಷದ ನಾಯಕರ ಬಗ್ಗೆ ಗೌರವ ಇದೆ ಆದರೂ ಅವರ ಜೊತೆಯಲ್ಲಿ ನಮಗೂ ಆಮಂತ್ರಣ ಕಳಿಸಬೇಕು, ಆಮೇಲೆ ಆ ಪ್ರಪೋಸಲ್ಸ್ ಮತ್ತು ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು. ಇದು ರೆಕಾರ್ಡ್‌ಗೆ ಹೋಗಬೇಕು.

ಶ್ರೀ ಡಿ. ಬಿ ಚಂದ್ರೇಗೌಡ.—ನಮ್ಮಲ್ಲಿ ಒಟ್ಟಾರೆ ಅಭಿಪ್ರಾಯ ಇದೆ. ಮೊದಲೇ ಕೂತು ಚರ್ಚೆ ಮಾಡಿ ಆಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ಸಲಹೆ. ಇದಕ್ಕೆ ಉತ್ತರ ಏನೂ ಬೇಕಾಗಲಾರದು. ಮಾನ್ಯ ಜಾಲಪ್ಪನವರು ರೀ–ಫೈನಾನ್ಸ್ ವಿಚಾರದಲ್ಲಿ ಹೇಳುತ್ತಾ, ಸಧ್ಯಕ್ಕೆ ನಮ್ಮಲ್ಲಿ ಹಣ ಏನು ಇದೆ, ಡಿ.ಸಿ.ಸಿ. ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ'ಗಳಲ್ಲಿರತಕ್ಕಂಥ ಡೆಪಾಸಿಟ್ ಏನಿದೆ ಇದನ್ನೇ ರೆಫರ್ ಮಾಡಿ ಹೇಳಿದ್ದಾರೆಂದು ನನ್ನ ಭಾವನೆ. ಈ ಆರೂವರೆ ಕೋಟಿ ರೂಪಾಯಿಗಳ ಬಗ್ಗೆ ಹೇಳಿರತಕ್ಕದ್ದು ನಿಜ. ಈಗಾಗಲೇ ಈ ವಿಚಾರದ ಬಗ್ಗೆ ಚರ್ಚೆಗೆ ಹೋಗುವುದು ಬೇಡ. ದಯವಿಟ್ಟು ಅದನ್ನು ವಿಚಾರ ಮಾಡಿ. ಏಕೆಂದರೆ, ಈಗಾಗಲೇ ಅದನ್ನು ಉಪಯೋಗ ಮಾಡಿ ಶಾರ್ಟ್‌ಟರ್ಮ್ ಲೋನ್'ಗೆ ರೀ–ಫೈನಾನ್ಸ್ ಮಾಡುವುದಕ್ಕೆ ವಿಚಾರ ಮಾಡುತ್ತೇವೆ ಎಂದು ಹೇಳಿದರೆ ನಾಳೆ ಮುಂದಿನ ಡಿಸ್ಕಷನ್‌ಗೆ ಪೆಟ್ಟಾದೀತು ಎನ್ನುವುದು ನನ್ನ ಭಾವನೆ. ಈ ವಿಚಾರವನ್ನು ಮತ್ತೆ ಪ್ರೈವೇಟ್ ಆಗಿ ಇಟ್ಟುಕೊಳ್ಳಿ. ನಾನು ಏನು ಸಲಹೆ ಮಾಡುತ್ತೇನೆಂದರೆ, ಮತ್ತು ಮಾನ್ಯ ಜಾಲಪ್ಪನವರಿಗೆ ಹೇಳುವುದೇನೆಂದರೆ. ಇದನ್ನು ಈ ಸದನದಲ್ಲಿ ಚರ್ಚೆ ಮಾಡುವುದು ಬೇಡ. ನೀವು ಪ್ರತ್ಯೇಕವಾಗಿ ಅದನ್ನು ಖಾಸಗಿಯಾಗಿ ಚರ್ಚೆ ಮಾಡತಕ್ಕಂಥ ಸಂದರ್ಭ ಬರುತ್ತದೆ, ಆಗ ಅಲ್ಲಿ ಅದನ್ನು ಇಡಿ. ಈಗ ಸದನದಲ್ಲಿ ಇದನ್ನು ಚರ್ಚೆ ಮಾಡುವುದು ಬೇಡ. ನಾನು ಪತ್ರಿಕೆಗಳಿಗೆಲ್ಲಾ ಹೋಗುತ್ತದೆ, ಹೊರಗಡೆಯುವರಿಗೆ ಹೋಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಆರ್.ಎಲ್. ಜಾಲಪ್ಪ.—ತೊಂದರೆ ಏನೂ ಇಲ್ಲ. ಈಗ ನಮಗೆ ೨೬೦ ಕೋಟಿ ರೂಪಾಯಿ ಕೊಟ್ಟಿರಬೇಕು. ೨೬೦ ಕೋಟಿ ರೂಪಾಯಿ ನಬಾರ್ಡ್‌ನಿಂದ ಡ್ರಾ ಮಾಡಿಲ್ಲ, ಡಿಸ್ಟ್ರಿಕ್ಟ್ ಬ್ಯಾಂಕ್ ಆಗಲೀ ಸುಮಾರು ೧೨೦ ಕೋಟಿ ರೂಪಾಯಿ ಅಪೆಕ್ಸ್ ಬ್ಯಾಂಕ್‌ನಿಂದ ತಂದಂಥ ಹಣವನ್ನು ಶಾರ್ಟ್‌ಟರ್ಮ್‌ನಲ್ಲಿ ತೊಡಗಿಸಿದ್ದಾರೆ, ಆದರೆ ಅಲ್ಲಿ ತೊಂದರೆ ಏನೂ ಆಗುವುದಿಲ್ಲ. ಫೈನಾನ್ಸ್ ಮಾಡಿ we can claim reimbursement afterwards. ಇವೆಲ್ಲಾ ಸೆಟ್ಲ್ ಆದರೆ...

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯವನ್ನು ಜಾಲಪ್ಪನವರು ಗಮನಿಸಬಹುದು. ಉದಾಹರಣೆಗೆ ಹೇಳಬೇಕೆಂದರೆ, ಯಾವ ಉದ್ದೇಶಕ್ಕಾಗಿ ನಾವುಗಳು ಹೋಗುತ್ತಿದ್ದೇವೆ, Supposing on all party delegation is taken to Delhi, what will happen? ನಬಾರ್ಡ್‌ನವರ ಹತ್ತಿರ ನೀವು ಮಾತನಾಡುತ್ತೀರಿ, ಯಾವ ಉದ್ದೇಶಕ್ಕಾಗಿ ಅಲ್ಲಿ ಮಾತನಾಡುತ್ತೀರಿ. ರೀ–ಫೈನಾನ್ಸ್ ಮಾಡುವುದಕ್ಕೋಸ್ಕರ. Suppose they hold the view that you have already utilising Rs.6 and add croret for the samething, let us see ಎಂದು ಹೇಳಿಬಿಟ್ಟರೆ ಏನು ಮಾಡುತ್ತೀರಿ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ನಾನು ಅದಕ್ಕೋಸ್ಕರ ಹೇಳಿದ್ದೇನೆ.

SRI R. V. DESHPANDE.—There is a problem. ನಾರ್ತ್ ಕೆನರಾದವರು ಬ್ಯಾಂಕಿನಿಂದ ರೀ–ಫೈನಾನ್ಸನ್ನು ತೆಗೆದುಕೊಳ್ಳುತ್ತಿಲ್ಲ. ಪ್ರಾಬ್ಲಮ್ ಏನಾಗಿದೆ ಎಂದರೆ ಡೆಪಾಸಿಟ್ ಮೇಲೆ ಹೆಚ್ಚು ರೇಟ್ ಆಫ್ ಇಂಟರೆಸ್ಟನ್ನು ಕೊಡುತ್ತಿದ್ದಾರೆ. ಕ್ರಾಪ್‌ವೈಸ್ ಮೇಲೆ ಕಡಿಮೆ ಈ ರೀತಿ ಪ್ರಾಬ್ಲಮ್ ಆಗಿದೆ. ಹೀಗಾಗಿ ಮಾನ್ಯ ಜಾಲಪ್ಪನವರು ಕೊಟ್ಟಿರುವ ಸಲಹೆ ಒಳ್ಳೆಯದು ಇದ್ದರೂ naturally when you get the refinancing at the cheap rate, they have used the deposit. ಡೆಪಾಸಿಟ್ ಮೇಲೆ ಹೆಚ್ಚು ರೇಟನ್ನು ಕೊಟ್ಟು, ರಿ–ಫೈನಾನ್ಸ್ ಅಗ್ರಿಕಲ್ಚರ್‌ನಲ್ಲಿ ರೇಟು ಕಡಿಮೆಯಾಗುತ್ತಿದೆ.

೨) ತೀರ್ಥಹಳ್ಳಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಹೆಚ್ಚುತ್ತಿರುವ ಕ್ಯಾಸನೂರು ಅರಣ್ಯ ಖಾಯಿಲೆ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ಮತ್ತು ಸುತ್ತಮುತ್ತ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಲ್ಲಿ ಈಗ ಹೆಚ್ಚುತ್ತಾ ಹಬ್ಬುತ್ತಿರತಕ್ಕಂಥ ಕ್ಯಾಸನೂರ ಅರಣ್ಯ ಖಾಯಿಲೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಮಾನ್ಯ ಸದಸ್ಯರಾದ ಜಿ. ರಾಜಂಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ಕ್ಯಾಸನೂರು ಅರಣ್ಯ ಖಾಯಿಲೆಯು ವೈರಸ್ಸುಗಳಿಂದ ಹರಡುವ